ಅಧ್ಯಕ್ಷರು.—ಯಾವುದನ್ನೂ ರೆಕಾರ್ಡ್ ಮಾಡಬೇಡಿ.

Sri H. M. CHANNABASAPPA.—The timings have not been mentioned in the report of the Divisional Commissioner.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸರ್ಕಾರದವರು ಇಷ್ಟೊಂದು ಬಹಿರಂಗವಾಗಿ ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಸಾರ್ವಜನಿಕರ ಮೇಲೆ ಮತ್ತು ಕನ್ನಡ ಚಳುವಳಿಗಾರರ ಮೇಲೆ ಹೇಳುತ್ತಿದ್ದಾರೆ. ಆದಕಾರಣ ಈ ಸರ್ಕಾರದ ನೀತಿಯನ್ನು ಮತ್ತು ದಬ್ಬಾಳಿಕೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

Sri H. M. CHANNABASAPPA.—Another point I would like to submit. Nothing prevented the accused, to complain if there is any such thing. When the Police people brought them before the Magistrate. The Divisional Commissioner has clearly stated what has been exactly written by the Magistrate. The accused has not made any complaint about any police people. For the information of the House, I would read the relevant portion from the report of the Divisional Commissioner.

> "In fact the Magistrate before whom the arrested persons were produced, has recorded that the accused allege no ill-treatment from the Police."

This is what the Magistrate has written.

ಶ್ರೀ ಕೆ.ಎಚ್. ಹನುಮೇಗೌಡ.—ಈ ರಾಜ್ಯದ ವಿದ್ಯಾರ್ಥಿಗಳ ಮೇಲೆ ಪದೇ ಪದೇ ಪೋಲೀಸಿನವರ ದೌರ್ಜನ್ಯ ನಡೆಯುತ್ತಿದೆ ; ಆದರೆ ಸರ್ಕಾರದವರು ಅದನ್ನು ಅಲ್ಲಗಳೆಯುತ್ತಿದ್ದಾರೆ. ಈ ಸರ್ಕಾರದ ನೀತಿಯನ್ನು ವಿರೋಧಿಸಿ ನಾವೆಲ್ಲರೂ ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ವಿರೋಧಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಬಡ್ಜೆಟ್ ಮೇಲೆ ಮಾತನಾಡುವವರ ಪಟ್ಟಿಯನ್ನು ನನಗೆ ಕಳಿಸಿಕೊಟ್ಟಿದ್ದಾರೆ, ಅದರಲ್ಲಿ 12 ಜನರ ಹೆಸರುಗಳು ಇವೆ ; ಆದಕಾರಣ ಮಾನ್ಯ ಶೀರನಾಳಿ ಚಂದ್ರಶೇಖರ್ ಅವರು ತಮ್ಮ ಭಾಷಣವನ್ನು 5 ನಿಮಿಷದಲ್ಲಿ ಮುಗಿಸಬೇಕು ; ಅವರು ಆಗಲೇ ನೆನ್ನೆದಿವಸ 19 ನಿಮಿಷ ಮಾತನಾಡಿದ್ದಾರೆ.

BUDGET ESTIMATES FOR 1974-75
General Discussion

(Debate Continued)

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ನೆನ್ನೆ ದಿವಸ ನಾನು ಮಾತನಾಡುವಾಗ ಮಾನ್ಯ ವಿರೋಧಪಕ್ಷದ ನಾಯಕರು ಬರಗಾಲದ ಪ್ರದೇಶಗಳಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ ತನಿಖೆ ಮಾಡಲು ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಬೇಕೆಂದು ಎತ್ತಿರತಕ್ಕಂಥ ಅಂಶದ ಬಗ್ಗೆ ನಾನು ಗಾಂಪರೊಡೆಯರ ಕಥೆಯನ್ನು ಉದಾಹರಣೆ ಕೊಟ್ಟು ಹೇಳಿದೆ. ಆ ರೀತಿ ಏನಾದರೂ ವಿಚಾರಣಾ ಸಮಿತಿಯನ್ನು ಮಾಡಿದರೆ, ವಿಚಾರಣೆ ಎಲ್ಲೆಲ್ಲಿಯೂ ನಡೆದು ಕೊನೆಗೆ ಅದು ನಮ್ಮ ತಲೆಗೆ ಬರಬಹುದು ಎಂಬ ಕಾರಣದಿಂದ ನಾನು ಗಾಂಪರೊಡೆಯರ ಕಥೆಯನ್ನು ಹೇಳಿ ವಿರೋಧಪಕ್ಷದ ನಾಯಕರನ್ನು ಎಚ್ಚರಿಸಿದೆ. ಕನ್ನಡದಲ್ಲಿ

ಒಂದು ಗಾದೆ ಹೇಳುತ್ತಾರೆ ; ಏನೆಂದರೆ ತನ್ನ ಕಾಲಕೆಳಗೆ ಹೆಗ್ಗಣ ಸತ್ತು ಬಿದ್ದಿದ್ದರೂ ಸಹ ಇನ್ನೊಬ್ಬರ ಕಾಲ ಕೆಳಗೆ ನೊಣ ಸತ್ತು ಬಿದ್ದಿದೆ ಎಂದು ತೋರಿಸುವುದು ; ಈ ರೀತಿಯಲ್ಲಿ ಹಿಂದೆ ಎಷ್ಟೋ ನ್ಯೂನತೆಗಳು ಆಗಿದ್ದರೂ ಸಹ ಅದನ್ನು ಮರೆತು ಇಂದು ನ್ಯೂನತೆಗಳು ಆಗಿವೆ ಎಂದು ಹೇಳುವುದಕ್ಕೆ ಹೊರಟಿರುವುದು ಕುಚೋದ್ಯವಲ್ಲದೆ ಬೇರೆ ಏನೂ ಅಲ್ಲ ; ಕನ್ನಡಿ ಮುಂದೆ ನಿಂತರೆ ಅವರವರ ಮುಖ ಯಾವ ರೀತಿ ಇದೆ ಎಂಬುದು ಗೊತ್ತಾಗುತ್ತದೆ. ಇಂತಹ ಒಂದು ಆರ್ಥಿಕ ದುಸ್ಥಿತಿಯಲ್ಲಿ ಸಹ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದಿಂದ ಅನೇಕ ರೀತಿಯ ಸವಲತ್ತುಗಳನ್ನು ಪಡೆದು ಅಲ್ಲಿ ಕೆಲಸಕಾರ್ಯಗಳನ್ನು ನಡೆಸಿದ್ದಕ್ಕಾಗಿ ನಾವು ಸರ್ಕಾರಕ್ಕೆ ಶಹಭಾಷಗಿರಿಯನ್ನು ಕೊಡಬೇಕೆ ಹೊರತು, ಆ ಬಗ್ಗೆ ಟೀಕೆ ಮಾಡುವ ಕಾಲ ಇದಲ್ಲ ; ಮಾಡತಕ್ಕಂಥ ಕೆಲಸಗಳಲ್ಲಿ ನ್ಯೂನತೆಗಳು ಇರುತ್ತವೆ ; ಇಲ್ಲ ಎಂದು ನಾನು ಹೇಳುವುದಿಲ್ಲ ; ಇದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ 250 ರಿಂದ 300 ಮನೆಗಳನ್ನು ಕಟ್ಟಿಸುವ ಬಗ್ಗೆ ಒಂದು ಯೋಜನೆಯನ್ನು ಸರ್ಕಾರದವರು ಸಿದ್ಧಪಡಿಸಿದಾಗ, ಅನೇಕ ಜನ ಬಡವರು ತಮ್ಮ ತಮ್ಮ ಮನೆಯಲ್ಲಿರತಕ್ಕಂಥ ಪಾತ್ರೆಪಡಗಗಳನ್ನು ಮಾರಾಟ ಮಾಡಿ 500 ರೂಪಾಯಿಗಳನ್ನು ಅದಕ್ಕೆ ಕಟ್ಟಲು ಹೊಂಚಿಕೊಂಡರು.

ಅವರು 500 ರೂಪಾಯಿಗಳನ್ನು ಪಾಯಕ್ಕೆ ಖರ್ಚುಮಾಡಿರುತ್ತಾರೆ. ಪಾಯ ಹಾಕಿ ಹಾಗೆಯೇ ಬಿಟ್ಟಿದ್ದಾರೆ. ಅಂಥವರ ಗತಿ ಏನು ? ಎಲ್ಲಾ ಕಡೆಗಳಲ್ಲಿಯೂ ಇಂಥಾ ಒಂದು ಅವ್ಯವಸ್ಥೆ ನಡೆದು ಹೋಯಿತು. ಹೇಗೂ ಒಂದು ಮನೆ ಬರುತ್ತದೆ ಎಂದು ಮನೆಯಲ್ಲಿ ಇದ್ದದ್ದನ್ನೆಲ್ಲಾ ಮಾರಾಟ ಮಾಡಿ ಸುಮ್ಮನೆ ಕುಳಿತುಕೊಳ್ಳುವ ಪರಿಸ್ಥಿತಿ ಬಂದಿದೆ.

ಸೈಟುಗಳನ್ನು ಹಂಚಿಕೆ ಮಾಡುವ ವಿಚಾರದಲ್ಲಿಯೂ ಸಹ ಅನೇಕ ನ್ಯೂನತೆಗಳು ಆಗುತ್ತಿವೆ. ನಮ್ಮ ತಾಲ್ಲೂಕಿನಲ್ಲಿ ಕೆಂಚನೂರು ಎಂಬಲ್ಲಿ ಹೇರಳವಾಗಿ ಭೂಮಿ ಇರುವ ಒಬ್ಬ ಮಹನೀಯರಿಗೆ 200–300 ಎಕರೆ ಜಮೀನನ್ನು ದರಕಾಸ್ತಿನಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಒಂದು ಇಂಚು ಭೂಮಿಯನ್ನು ಕೂಡ ಹರಿಜನರಿಗೆ ಸೈಟು ಕೊಡತಕ್ಕಂಥಾ ವ್ಯವಸ್ಥೆ ಮಾಡುವುದಕ್ಕೆ ಆಗುತ್ತಾ ಇಲ್ಲ. ಇಲ್ಲಿ ನಾವೇನು ಉದಾರ ಮನಸ್ಸಿನಿಂದ ಎಲ್ಲಾ ಕಾನೂನು ಮಾಡುತ್ತೇವೆ ಅವುಗಳು ಕಾರ್ಯಗತವಾಗುವಂತಹ ಹಿತ ಚಿಂತನೆ ಮಾಡಬೇಕು. ಏತಕ್ಕೆಂದರೆ ನಾವು ಮಾಡಿದಂತಹ ಕಾನೂನುಗಳು ಕಾರ್ಯಗತವಾಗುವಾಗ ಕೆಲವರ ಆಶೆ ಆಮಿಷಗಳಿಗೆ ತದ್ವಿರುದ್ಧವಾಗಿ ಆಗುತ್ತದೆ ಎಂದು ನಾನು ಈ ಸದನದ ಮುಂದೆ ಹೇಳಬಯಸುತ್ತೇನೆ.

ಆಹಾರ ಸಂಗ್ರಹಣೆಯ ವಿಚಾರದಲ್ಲಿ ಕೂಡ ಮಾನ್ಯ ಆಹಾರ ಖಾತೆಯ ಮಂತ್ರಿಗಳು ಬಹಳ ಹೆಚ್ಚಿನ ರೀತಿಯಲ್ಲಿ ಸಾಧನೆ ಮಾಡಿದ್ದಾರೆ. ಒಂದಕ್ಕೆರಡರಷ್ಟು ಸಂಗ್ರಹ ಮಾಡಿದ್ದಾರೆ. ಈಗಿರತಕ್ಕ ನ್ಯೂನತೆಗಳಿಂದ ಅಂತರ ಜಿಲ್ಲಾ ಸಾಗಾಣಿಕೆಯ ಮೇಲೆ ಏನು ನಿರ್ಬಂಧವನ್ನು ಹಾಕಿದ್ದಾರೆ, ಅದು ಸಂಪೂರ್ಣವಾಗಿ ಸಫಲವಾಗಿದೆಯೇ ಎಂದರೆ ಆಗಿಲ್ಲ. ಏತಕ್ಕೆಂದರೆ ಚಾಪೆ ಕೆಳಗೆ ನುಸಿಯುತ್ತಾರೆ ಎಂದರೆ ರಂಗೋಲೆ ಕೆಳಗೆ ನುಸಿಯುತ್ತಾರೆ. ಅಂಥಾ ಸಮಾಜ ದ್ರೋಹಿಗಳು ತಾಂಡವವಾಡುತ್ತಿದ್ದಾರೆ. ನೂರಾರು ಚೀಲ ಅಕ್ಕಿಯನ್ನು ಒಬ್ಬೊಬ್ಬರಾಗಿ ತಲೆಯ ಮೇಲೆ ಸಾಗಿಸಿಕೊಂಡು ಹೋಗುತ್ತಾರೆ. ಅದನ್ನು ತಡೆಯುವುದಕ್ಕೆ ಯಾರಿಂದಲೂ ಆಗುತ್ತಾ ಇಲ್ಲ. ಈ ವಿಚಾರದಲ್ಲಿ ಎಷ್ಟೇ ಎಚ್ಚರಿಕೆಯಿಂದ ಇದ್ದರೂ ಸಾಕಾಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ.

ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ವಿದ್ಯಾರ್ಥಿಗಳ ಸಂಖ್ಯೆ 1.6 ಲಕ್ಷ ಆಗಬಹುದು ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ನಾವು ಅನೇಕ ಜನ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ನಿರುದ್ಯೋಗಿಗಳನ್ನು ನಾವು ಕಾಣುತ್ತಿದ್ದೇವೆ. ಪ್ರತಿ ದಿವಸ ಅವರು ನಮ್ಮ ಹತ್ತಿರ ಬಂದು ಕೆಲಸಕ್ಕಾಗಿ ಅವರಿಗೆ ಫೋನ್ ಮಾಡಿ, ಇವರಿಗೆ ಫೋನ್ ಮಾಡಿ, ಎಂದು ಕೇಳುತ್ತಿದ್ದಾರೆ. ಇಂಥಾ ನಿರುದ್ಯೋಗಿ ವಿದ್ಯಾವಂತರ ಸೈನ್ಯವನ್ನು ಸೃಷ್ಟಿಮಾಡತಕ್ಕಂಥಾ ಏನು ನೀತಿಯನ್ನು ಇಟ್ಟುಕೊಂಡಿದ್ದೇವೆ. ಇದನ್ನು ಪುನರ್‌ಪರಿಶೀಲನೆ ಮಾಡಬೇಕಾಗುತ್ತದೆ. ಇವೊತ್ತು ಎಸ್.ಎಸ್.ಎಲ್.ಸಿ. ಪಾಸು ಮಾಡಿದನಂತರ ಅವರವರ ಅಭಿರುಚಿಗೆ ತಕ್ಕಂತೆ ಅವನು ತನ್ನ ಕಾಲಮೇಲೆ ತಾನು ನಿಂತುಕೊಂಡು ಜೀವನ ಮಾಡತಕ್ಕ ಒಂದು ವೃತ್ತಿ ಶಿಕ್ಷಣವನ್ನು ಕೊಡತಕ್ಕಂಥಾ ವ್ಯವಸ್ಥೆ ಮಾಡದೇ ಹೋದರೆ ಇವೊತ್ತು ದೇಶದಲ್ಲಿ ಏನು ಕಷ್ಟ ಕೋಟಲೆಗಳನ್ನು ಅನುಭವಿಸುತ್ತಿದ್ದಾರೆ ಅದರಿಂದ ವಿಮುಕ್ತರಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನು ಪುನರ್‌ಪರಿಶೀಲನೆ ಮಾಡಬೇಕು. ಅದಕ್ಕೆ ಕಾಲ ಸನ್ನಿಹಿತವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಮೀನುಗಾರಿಕೆಯ ವಿಷಯದಲ್ಲಿ ಪ್ರತಿ ಹಂತದಲ್ಲಿಯೂ ಪರಿಣಿತರನ್ನು ನೇಮಕ ಮಾಡ ಶಕ್ಕಂಥಾ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಫಿಷರೀಸ್ ಡಿಪಾರ್ಟ್‌ಮೆಂಟಿನಲ್ಲಿ ಇಂಥಾ ಪರಿಣಿತರ ಕೊರತೆ ಮತ್ತೆ ಮುಂದುವರಿದರೆ ಅದನ್ನು ಯೋಚನೆ ಮಾಡಿ ಸರಿಯಾದ ಪರಿಣಿತರನ್ನು ಪ್ರತಿಯೊಂದು ಹಂತದಲ್ಲಿಯೂ ನೇಮಕ ಮಾಡತಕ್ಕಂಥಾ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಉದ್ಯಮ ವಿಚಾರವನ್ನು ತೆಗೆದುಕೊಳ್ಳುವುದಾದರೆ ಈ ದೇಶದಲ್ಲಿ 100ಕ್ಕೆ 80 ಭಾಗ ಬೇಸಾಯ ಮಾಡಿಕೊಂಡು ಜೀವನ ಮಾಡತಕ್ಕ ವ್ಯವಸ್ಥೆ ಏನಿದೆ ಆ ವ್ಯವಸ್ಥೆ ಬದಲಾವಣೆಯಾಗದೇ ಹೋದರೆ ಆರ್ಥಿಕ ಕ್ರಾಂತಿಯಾಗುವುದಿಲ್ಲ. ಇವೊತ್ತು ನಮ್ಮ ದೇಶದಲ್ಲಿ ಕೈಗಾರಿಕೆಯ ಬೆಳವಣಿಗೆ ಆಗಬೇಕು, ಇದರಲ್ಲಿ ಇರತಕ್ಕ ನ್ಯೂನತೆಗಳು ಏನು ಎಂಬುದನ್ನು ಸರ್ಕಾರದವರು ಗಮನಿಸ ಬೇಕಾಗುತ್ತದೆ. ಒಬ್ಬ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಲೈಸೆನ್ಸ್ ಪಡೆಯ ಬೇಕಾದರೆ ಅವನು ಇಡೀ ಒಂದು ವರ್ಷ ಸತತವಾಗಿ ಪ್ರಯತ್ನ ಮಾಡಬೇಕಾಗುತ್ತದೆ. ಆದ್ದರಿಂದ ಇದರಲ್ಲಿರತಕ್ಕ ತೊಡಕುಗಳನ್ನು ನಿವಾರಣೆ ಮಾಡಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಯಾರು ಮುಂದೆ ಬರುತ್ತಾರೆ ಅವರಿಗೆ ಆದಷ್ಟು ಬೇಗ ಲೈಸೆನ್ಸ್ ಸಿಕ್ಕುವ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ನಮ್ಮ ಮಲೆನಾಡಿನ ವಿಚಾರದಲ್ಲಿ ಒಂದು ಬೃಹತ್ ಸಮಸ್ಯೆಯನ್ನು ಈ ಸದನದ ಮುಂದೆ ಇಡಬಯಸುತ್ತೇನೆ. 1947ನೇ ಇಸವಿಯಿಂದ ಫಾರೆಸ್ಟ್ ಸಿಕ್ಕುತ್ತದೆ ಎಂದು ಸಾಗುಮಾಡಿಕೊಂಡು ಬಂದಿರತಕ್ಕ ಅನೇಕ ಕುಟುಂಬಗಳು ಇವೆ. ಯಾವ ಪ್ರಯತ್ನವೂ ಇಲ್ಲದೆ ಫಾರೆಸ್ಟ್ ಜಮೀನನ್ನು ಕೊಡತಕ್ಕ ಕಾಲ ಒಂದು ಇತ್ತು. ಆದರೆ ಇವೊತ್ತು ಪರಿಸ್ಥಿತಿ ಬದಲಾಗಿದೆ. ನೂರಾರು ರೂಪಾಯಿಗಳನ್ನು ಖರ್ಚು ಮಾಡಿ, ಬೆವರು ಸುರಿಸಿ ಫಾರೆಸ್ಟ್ ಜಮೀನು ತಮಗೇ ಸಿಕ್ಕುತ್ತದೆ ಎಂದು 10-20, 30 ವರ್ಷಗಳಿಂದ ಸಾಗು ಮಾಡಿಕೊಂಡು ಬಂದಿದ್ದಾರೆ. ಅಂಥವ ರಿಗೆ ಇವೊತ್ತು ಸರ್ಕಾರದವರು ಫಾರೆಸ್ಟ್ ಜಮೀನು ಕೊಡುವುದಿಲ್ಲ ಎಂದರೆ ಅಂಥಾ ಕುಟುಂಬ ಗಳಿಗೆ ಗಧಾಪ್ರಹಾರವಾಗಿದೆ. ಸರ್ಕಾರದವರು ಇದನ್ನು ಗಮನಿಸಬೇಕು. ಅಂಥಾ ಕುಟುಂಬ ದವರು ಯಾರು ಹತ್ತಾರು ವರ್ಷಗಳಿಂದ ಫಾರೆಸ್ಟ್ ಜಮೀನನ್ನು ಯಾರು ಉಳುಮೆ ಮಾಡಿಕೊಂಡು ಬಂದಿದ್ದಾರೆ ಅವರಿಗೆ ನಿಜವಾಗಿ ಒಂದು ವ್ಯವಸ್ಥೆ ಮಾಡಬೇಕು. ಹಿಂದೆ ಶ್ರೀಮಾನ್ ಬದರೀನಾರಾ ಯಣ್ ಅವರ ಅಧ್ಯಕ್ಷತೆಯಲ್ಲಿ ಮಲೆನಾಡು ಇಂಪ್ರೂವ್‌ಮೆಂಟ್ ಬೋರ್ಡ್ ಎಂದು ಒಂದು ಬೋರ್ಡನ್ನು ಸರ್ಕಾರದವರು ರಚನೆ ಮಾಡಿದ್ದರು. ಆ ಬೋರ್ಡಿನವರು ಕೊಟ್ಟಿರತಕ್ಕ ವರದಿ ಯನ್ನು ತರಿಸಿ ಪುನಃ ಒಂದು ಮಲೆನಾಡು ಇಂಪ್ರೂವ್‌ಮೆಂಟ್ ಬೋರ್ಡ್ ಮಾಡಿ ಮಲೆನಾಡಿನಾ ದ್ಯಂತ ಅವರು ದೃಷ್ಟಿಯಲ್ಲಿ ಇಟ್ಟುಕೊಂಡು ಕೆಲಸ ಮಾಡುವಂತಹ ಒಂದು ಸ್ವತಂತ್ರವಾದ ಮಲೆ ನಾಡು ಇಂಪ್ರೂವ್‌ಮೆಂಟ್ ಬೋರ್ಡ್ ರಚನೆ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷಿಣಿಯವರೇ ಮಾನ್ಯ ಅರ್ಥ ಸಚಿವರು ಈ ಸಭೆಯ ಮುಂದೆ ಮಂಡಿಸಿರುವ 1974-75 ನೇ ಸಾಲಿನ ಆಯವ್ಯಯ ಪತ್ರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ನಾನು ತಮ್ಮ ಮುಂದೆ ನಿಂತಿದ್ದೇನೆ. ಮಾನ್ಯ ಹಣಕಾಸಿನ ಮಂತ್ರಿಗಳಾದ ಘೋರ್ಪಡೆಯವರು ಅವರ ಬಡ್ಜೆಟ್ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅವರು ತೆರಿಗೆಗಳ ಬಗ್ಗೆ ಮಾತನಾಡುತ್ತಾ, ತೆರಿಗೆಗಳು ಆದಷ್ಟೂ ಜನಗಳ ಮೇಲೆ ಬೀಳದ ಹಾಗೆ ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಅವರು ಹೇಳಿರುವ ಮಾತನ್ನು ತಮ್ಮ ಗಮನಕ್ಕೆ ತರುವುದಾದರೆ ಅವರು ತೆರಿಗೆಯ ಭಾರವು ಸಮನಾಗಿ ವಿಸ್ತರಿಸುವಂತೆ ಮತ್ತು ರಾಜ್ಯದ ಅಭಿವೃದ್ಧಿಗೆ ಕೊಂಚ ಹೆಚ್ಚು ತೆರಿಗೆ ಪಾವತಿ ಮಾಡಲು ಸಮರ್ಥರಾದವರ ಮೇಲೆ ಮುಖ್ಯವಾಗಿ ಬೀಳುವ ಹಾಗೆ ಎಚ್ಚರಿಕೆ ವಹಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಬೇರೆಯವರ ಮೇಲೆ ತೆರಿಗೆ ಯನ್ನು ಹಾಕಿಲ್ಲ ಎನ್ನುವ ಧಾಟಿಯಲ್ಲಿ ಮಾನ್ಯ ಅರ್ಥಸಚಿವರು ಹೇಳಿದ್ದಾರೆ. ಅವರು ಈ ಆಯ ವ್ಯಯ ಪತ್ರದಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಎಲ್ಲಾ ವಿಷಯ ಗಳ ಬಗ್ಗೆಯೂ ಸಹ ಮಾತನಾಡುವುದಕ್ಕೆ ಹೋಗದಿದ್ದರೂ ಕೂಡ ಡಿಮ್ಯಾಂಡುಗಳು ಬಂದಾಗ ಆ ವಿಷಯಗಳ ಮೇಲೆ ಮಾತನಾಡುತ್ತೇನೆ. ಈಗ ಕೆಲವು ಮುಖ್ಯ ಅಂಶಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತೆರಿಗೆಗಳ ವಿಷಯವನ್ನು ತೆಗೆದುಕೊಂಡರೆ ಇವುಗಳು ಅರ್ಥ ಸಚಿವರ ಹೇಳಿಕೆಯಂತೆ ವಾಸ್ತವಾಂಶಗಳಿಗನುಗುಣವಾಗಿ ಇವೆಯೇ, ತೆರಿಗೆಗಳು

ಜನಸಾಮಾನ್ಯರ ಮೇಲೆ ಬೀಳದಂತೆ ಯಾರು ತೆರಿಗೆಯನ್ನು ಕೊಡುವುದಕ್ಕೆ ಶಕ್ತಿ ಇದೆಯೋ, ಅಂಥವರ ಮೇಲೆ ಮಾತ್ರ ಈ ತೆರಿಗೆ ಬೀಳುತ್ತದೆಯೋ ಎಂಬುದನ್ನು ಸ್ವಲ್ಪಮಟ್ಟಿಗೆ ವಿಚಾರ ವಿನಿಮಯ ಮಾಡಬೇಕಾದ ಪರಿಸ್ಥಿತಿ ಬಂದಿದೆ. ತೆರಿಗೆಗಳ ವಿಷಯ ಬಂದಾಗ ಈ ಮನೆಯಲ್ಲಿ ಪ್ರಿಲಿಮಿನರಿ ಚರ್ಚೆಯಾಗಿದೆ ಅದಷ್ಟು ಮಟ್ಟಿಗೆ ಸರ್ಕಾರದ ಧೋರಣೆ ಏನಿರಬೇಕು ಎಂದರೆ ತೆರಿಗೆಗಳು ಸಾಮಾನ್ಯ ಜನಗಳ ಮೇಲೆ ಹೊರಿಸಕೂಡದು, ಸಾಮಾನ್ಯ ಜನಗಳು ತೆರಿಗೆಯನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ ಆದ್ದರಿಂದ ಶ್ರೀಮಂತರು, ವರ್ತಕರು, ಗುತ್ತೇದಾರರು, ಜಮೀನ್ದಾರರು ಇವರುಗಳಿಂದ ತೆರಿಗೆಯನ್ನು ಪಡೆಯಬೇಕು ಎಂದು ಎಲ್ಲರೂ ವಾದ ಮಾಡುತ್ತಾರೆ. ಇದನ್ನು ಅರ್ಥತಜ್ಞರು ಹೇಳುತ್ತಾರೆ. ರಾಜಕಾರಿಣಿಗಳು ಹೇಳುತ್ತಾರೆ. ಸರ್ಕಾರ ಸಹ ಮಾತಿನಲ್ಲಿ ಇದನ್ನು ಒಪ್ಪಿಕೊಂಡಿದೆ.

3-00 P.M.

ಯಾವ ಸರ್ಕಾರ ಸಮತಾವಾದವನ್ನು ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದರೋ ಆ ಸರ್ಕಾರ ಇವತ್ತು ಇದನ್ನು ಮಾತಿನಲ್ಲಿ ಒಪ್ಪಿಕೊಳ್ಳುತ್ತಾರೆ. ಆದರೆ ಕೃತಿಯಲ್ಲಿ ಇದನ್ನು ನೋಡಿದರೆ ತೆರಿಗೆಗಳೆಲ್ಲಾ ಜನಸಾಮಾನ್ಯರ ಮೇಲೆ, ಬಡವರ ಮೇಲೆ ಬೀಳುತ್ತಿವೆಯೇ ವಿನಹ ಶ್ರೀಮಂತರ ಮೇಲೆ ಹೆಚ್ಚು ಹೆಚ್ಚಾಗಿ ಬೀಳುತ್ತಿಲ್ಲ. ನಮ್ಮ ದೇಶದಲ್ಲಿ ಎರಡು ತರಹದ ತೆರಿಗೆಗಳು ಇವೆ. ತೆರಿಗೆಗಳನ್ನು ವಿಧಿಸುವಾಗ ಕೆಲವು ವಾದಗಳು ಬರುತ್ತವೆ. ಮೊದಲನೆಯ ವಾದ, ತೆರಿಗೆಗಳನ್ನು ಹಾಕದೆ ರಾಜ್ಯದ ಆಡಳಿತವನ್ನು ನಡೆಸುವುದಕ್ಕಾಗುವುದಿಲ್ಲ ಎಂದು ಕೆಲವರು ಹೇಳುತ್ತಾರೆ. ಮೊನ್ನೆಯ ದಿವಸ ಗವರ್ನರ್ ಭಾಷಣದ ಮೇಲೆ ವಿರೋಧಪಕ್ಷದವರು ಮಾತನಾಡುತ್ತ ಇದ್ದಾಗ, ತೆರಿಗೆಗಳು ಬೇಡವೇ ಎನ್ನುವ ರೀತಿಯಲ್ಲಿ ಮಂತ್ರಿಗಳು ಪ್ರಶ್ನೆಯನ್ನು ಅವರಿಗೆ ಕೇಳಿದರು. ನಿಜವಾಗಿಯೂ ನೋಡಿದರೆ ನಾವು ತೆರಿಗೆಗಳನ್ನು ಹಾಕಕೂಡದು ಎಂದು ಹೇಳುತ್ತಿಲ್ಲ. ಆದರೆ ಯಾರ ಮೇಲೆ ತೆರಿಗೆಯನ್ನು ಹಾಕಬೇಕು, ಯಾರ ಮೇಲೆ ಹಾಕಬಾರದು ಎನ್ನುವ ಪ್ರಶ್ನೆ ಮುಖ್ಯವಾಗಿ ಬರುತ್ತದೆ. ಯೋಜನೆಗಳನ್ನು ಮಾಡಬೇಕಾದರೆ, ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾದರೆ, ತೆರಿಗೆಗಳನ್ನು ಹಾಕಲೇಬೇಕಾಗುತ್ತದೆ. ಆದರೆ ಯಾರ ಮೇಲೆ ಹಾಕಬೇಕು ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ. ಸ್ವಾತಂತ್ರ್ಯ ಬಂದನಂತರ, ಕಾಂಗ್ರೆಸ್ ಎರಡು ಪಕ್ಷಗಳೂ ಒಂದಾಗಿದ್ದಾಗಲೂ ಮತ್ತು ಇಲ್ಲಿಯವರೆಗೂ ಡೈರೆಕ್ಟ ಟ್ಯಾಕ್ಸಗಳನ್ನು ಬಹಳ ಕಡಿಮೆಯಾಗಿಯೂ, ಇಂಡೈರೆಕ್ಟ ಟ್ಯಾಕ್ಸ್‌ಗಳನ್ನು ಹೆಚ್ಚು ಹೆಚ್ಚಾಗಿಯೂ ಹಾಕುತ್ತಿದ್ದಾರೆನ್ನುವುದು ನಮಗೆ ಕಂಡು ಬರುತ್ತದೆ. ಡೈರೆಕ್ಟ ಟ್ಯಾಕ್ಸ್ ಯಾರ ಮೇಲೆ ಬೀಳುತ್ತದೆ ಎಂದರೆ, ಶ್ರೀಮಂತರು, ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳ ಮೇಲೆ ನೇರವಾಗಿ ಬೀಳುತ್ತದೆ. ಗುತ್ತೇದಾರಿ ಬಂಡವಾಳಶಾಹಿಗಳ ಮೇಲೂ, ಕೋಟ್ಯಾಧೀಶ್ವರರ ಮೇಲೂ ಇದು ಬೀಳುತ್ತದೆ. ತೆರಿಗೆಯನ್ನು ಕೊಡುವುದಕ್ಕೆ ಶಕ್ತಿ ಇರುವವರ ಮೇಲೆ ಹಾಕಬೇಕು ಎನ್ನುವ ತತ್ವವನ್ನು ನಾವು ಒಪ್ಪುತ್ತೇವೆ. ಆದರೆ ಅವರ ಮೇಲೆ ತೆರಿಗೆಗಳು ಹೆಚ್ಚಿನ ರೀತಿಯಲ್ಲಿ ಕಡಿಮೆಯಾಗುತ್ತಾ ಹೋಗುತ್ತಿವೆ, ಬಡವರ ಮೇಲೆ ಶ್ರೀಸಾಮಾನ್ಯರ ಮೇಲೆ ತೆರಿಗೆಗಳು ಜಾಸ್ತಿ ಜಾಸ್ತಿಯಾಗಿ ಬೀಳುತ್ತಿವೆ. ಮಾನ್ಯ ಚವಾಣ ಅವರೂ ಬಡ್ಜೆಟ್ ಇಟ್ಟ ಮೇಲೂ ಮತ್ತು ಈ ಸರ್ಕಾರದವರು ಇಟ್ಟಿರತಕ್ಕ ಬಡ್ಜೆಟ್ಟನಲ್ಲಿ ಇದು ಸ್ಪಷ್ಟವಾಗಿದೆ. ಇದಕ್ಕೆ ನಾನು ಒಂದೆರಡು ಅಂಕಿ ಅಂಶಗಳನ್ನು ಕೊಟ್ಟರೆ ಇದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. 1938 ರಲ್ಲಿ ಡೈರೆಕ್ಟ ಟ್ಯಾಕ್ಸ್ ಎಷ್ಟು ಇತ್ತು ಎಂದರೆ, ಕೇಂದ್ರ ಸರ್ಕಾರಕ್ಕೆ ಇವತ್ತು ಎಷ್ಟು ಆದಾಯ ಬರುತ್ತದೆಯೋ ಅವರಲ್ಲಿ ಶೇಕಡ 19ರಷ್ಟು ಡೈರೆಕ್ಟ ಟ್ಯಾಕ್ಸ್ ಇತ್ತು. ಸ್ವಾತಂತ್ರ್ಯ ಬಂದನಂತರ 1948ನೇ ಇಸವಿಯಲ್ಲಿ ಇದು 19 ಪರ್ಸೆಂಟಿನಿಂದ 50 ಪರ್ಸೆಂಟಿಗೆ ಏರಿತು. ಸ್ವಾತಂತ್ರ್ಯ ಬಂದ ತಕ್ಷಣ ಜನಗಳ ಮನಸ್ಸಿನಲ್ಲಿ ಒಂದು ಪರಿಣಾಮವನ್ನು ಉಂಟುಮಾಡಬೇಕೆಂದು ಆಳುವ ಕಾಂಗ್ರೆಸ್ ಪಕ್ಷದವರು ಜನರನ್ನು ತಮ್ಮ ಕಡೆಗೆ ಎಳೆಯಬೇಕೆಂದು ಯೋಚನೆ ಮಾಡಿ ಟ್ಯಾಕ್ಸಗಳನ್ನು ಆದಷ್ಟು ಶ್ರೀಮಂತರ ಮೇಲೆ ಹಾಕಿದರು ಅನಂತರ ಇದು 1951 ರಲ್ಲಿ 40 ಪರ್ಸೆಂಟ್ ಆಯಿತು. 1961 ರಲ್ಲಿ ಇನ್ನೂ ಕಡಿಮೆಯಾಯಿತು. ಈಗ ಡೈರೆಕ್ಟ ಟ್ಯಾಕ್ಸ್ ಬಹಳ ಕಡಿಮೆಯಾಗಿವೆ. ಮೊನ್ನೆ ಚವಾಣ ಅವರ ಬಡ್ಜೆಟ್ಟಿನಲ್ಲಿ ಇದನ್ನು ನೋಡಿದರೂ ಕಾರ್ಪೋರೇಟ್ ಸೆಕ್ಟಾರ್ ಅನ್ನು ಅವರು ಪೂರ್ತಿಯಾಗಿ ಬಿಟ್ಟಿದ್ದಾರೆ. ಜನರ ಮೇಲೆ ಹೆಚ್ಚು ತೆರಿಗೆಯನ್ನು ಏರಿಸಿದ್ದಾರೆ. ಇನ್‌ಕಂ ಟ್ಯಾಕ್ಸ್ ವಿನಾಯಿತಿಯನ್ನು 6 ಸಾವಿರ ರೂಪಾಯಿಗಳವರೆಗೆ ಮಾತ್ರ ಮಾಡಿದ್ದಾರೆ, ಇದು ಸ್ವಲ ಮಟ್ಟಿಗೆ ರಿಲೀಫ್ ಕೊಟ್ಟಂತೆ ಕಾಣುತ್ತದೆ. ಇವರು ಕಾರ್ಪೋರೇಟ್ ಸೆಕ್ಟಾರ್ಸ್ ಮೇಲೆ ಹೆಚ್ಚಾಗಿ ತೆರಿಗೆಗಳನ್ನು ಹಾಕುವುದಕ್ಕೆ ತಯಾರು ಇಲ್ಲ, ಏತಕ್ಕೋಸ್ಕರ ತಯಾರಿಲ್ಲ ಎಂದು ನಾನು ಇವರನ್ನು ಪ್ರಶ್ನೆ ಮಾಡಬೇಕಾಗಿದೆ. ಡೈರೆಕ್ಟ್ ಟ್ಯಾಕ್ಸಸ್ ಬಗ್ಗೆ ಈ ರೀತಿಯಾಗಿದೆ, ಇದರ ಬಗ್ಗೆ ಕೆಲವು ಅಂಕಿಅಂಶಗಳನ್ನು ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. Layman's guide to

(ಶ್ರೀ ಎಂ. ಎಸ್. ಕೃಷ್ಣನ್)

Budget by R. C. Gupta. ಇದರಲ್ಲಿ ಟೋಟಲ್ ರೆವಿನ್ಯೂ ಫ್ರಂ ಡೈರೆಕ್ಟ್ ಟ್ಯಾಕ್ಸ್ ಎಷ್ಟು ಬರುತ್ತದೆ ಎನ್ನುವದನ್ನು ಒಂದು ಪಟ್ಟಿಯಲ್ಲಿ ಕೊಟ್ಟಿದ್ದಾರೆ ಅದರಂತೆ ಡೈರೆಕ್ಟ ಟ್ಯಾಕ್ಸ್ 1938 ರಲ್ಲಿ 19 ಪರ್ಸೆಂಟ್ ಇತ್ತು, 1948 ರಲ್ಲಿ 48 ಪರ್ಸೆಂಟ್, 1957 ರಲ್ಲಿ 43 ಪರ್ಸೆಂಟ್, 1963ರಲ್ಲಿ 31 ಪರ್ಸೆಂಟ್, 1968-69ರಲ್ಲಿ 26 ಪರ್ಸೆಂಟ್, 1969-70ರಲ್ಲಿ 24 ಪರ್ಸೆಂಟ್ ಆಯಿತು ಇದರಿಂದ ಸರ್ಕಾರದ ಒಲುವು ಯಾರ ಕಡೆಗೆ ಇದೆಯೆಂದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಯಾರ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ ಎನ್ನುವುದೂ ಗೊತ್ತಾಗುತ್ತದೆ. ಇವತ್ತು ಜನಗಳ ಮೇಲೆ ಬೀಳುವಂಥ, ಎಕ್ಸೈಜ್ ಡ್ಯೂಟಿಯನ್ನು, ಬೇಕಾದಷ್ಟು ಸಾಮುಗ್ರಿಗಳ ಮೇಲೆ ಹಾಕಿದ್ದಾರೆ. ಅದನ್ನು ನಾನು ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇದು ಎಷ್ಟು ದೂರ ಇವತ್ತು ಬಿದ್ದಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಪರ್ಸೆಂಟೇಜ ಆಫ್ ಇಂಡೈರೆಕ್ಟ ಟ್ಯಾಕ್ಸಸ್ ಈ ರೀತಿಯಾಗಿದೆ. 1948 ರಲ್ಲಿ 52 ಪರ್ಸೆಂಟ್ ಇದ್ದದ್ದು 1951 ರಲ್ಲಿ 57 ಪರ್ಸೆಂಟ್ ಆಯಿತು, 1961 ರಲ್ಲಿ 69 ಪರ್ಸೆಂಟ್ ಆಯಿತು, 1968-69 ರಲ್ಲಿ 74 ಪರ್ಸೆಂಟ್ ಆಯಿತು, 1969-70 ರಲ್ಲಿ 66 ಪರ್ಸೆಂಟ್ ಆಯಿತು. ನಮ್ಮ ಯೋಜನೆಗಳು ಕಾರ್ಯಗತವಾಗಬೇಕಾದರೆ, ಮತ್ತು ದೇಶ ಮುಂದುವರಿಯಬೇಕಾದರೆ, ದೇಶದ ಜನಸಾಮಾನ್ಯರ ಸಹಕಾರ ಬೇಕಾಗುತ್ತದೆ. ಆದರೆ, ಯಾರ ಮೇಲೆ ತೆರಿಗೆಯನ್ನು ಹಾಕಬೇಕು ಎನ್ನುವುದು ಸ್ಪಷ್ಟವಾಗಿರಬೇಕು. ಬಡವರ ಮೇಲೆ ತೆರಿಗೆಯನ್ನು ಹಾಕಿದರೆ ಖಂಡಿತ ಇದು ಸಾಧ್ಯವಾಗುವುದಿಲ್ಲ. 1969 ರಿಂದಲೂ ಡೈರೆಕ್ಟ ಮತ್ತು ಇಂಡೈರೆಕ್ಟ ಟ್ಯಾಕ್ಸಗಳನ್ನು ನೋಡಿದರೆ, ಡೈರೆಕ್ಟ ಟ್ಯಾಕ್ಸಸ್ ಕಡಿಮೆಯಾಗುತ್ತಾ ಬಂದಿದೆ, ಇಂಡೈರೆಕ್ಟ ಟ್ಯಾಕ್ಸಗಳು ಜಾಸ್ತಿ ಜಾಸ್ತಿಯಾಗುತ್ತಾ ಬಂದಿವೆ. ಇಂಡೈರೆಕ್ಟ ಟ್ಯಾಕ್ಸಗಳು ಜನಗಳ ಮೇಲೆ ಬೀಳುವಂಥಾದ್ದು, ಅದನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ತಯಾರಾಗಿಲ್ಲ. ಇದರ ಬಗ್ಗೆಯೂ ನಿಮ್ಮ ದೃಷ್ಟಿಯಲ್ಲಿ, ಮತ್ತು ನಿಮ್ಮ ಬಡ್ಜೆಟ್ಟನ್ನು ನೋಡಿದರೂ ಇದು ಗೊತ್ತಾಗುತ್ತದೆ. ಈ ದಿಸೆಯಲ್ಲಿ ತಾವು ಏನೂ ಯಶಸ್ವಿಯಾಗಿಲ್ಲ.

ಇನ್ನು ವೆಲ್ತ್ ಟ್ಯಾಕ್ಸ್ ಹಾಕಿದ್ದೀರಿ, ಗಿಫ್ಟ್ ಟ್ಯಾಕ್ಸ್ ಹಾಕಿದ್ದೀರಿ, ಆಸ್ತಿ ಟ್ಯಾಕ್ಸ್ ಹಾಕಿದ್ದೀರಿ. ಭಾರಿ ಭಾರಿ ಶ್ರೀಮಂತರ ಮೇಲೆ ತೆರಿಗೆಯನ್ನು ಹಾಕಿದ್ದೇವೆ, ಸಮಾಜವಾದಕ್ಕೆ ಅನುಗುಣವಾಗಿ ತೆರಿಗೆಯನ್ನು ಹಾಕಿದ್ದೇವೆಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದೀರಿ. ಕೊಚ್ಚಿಕೊಳ್ಳುವ ಜನರಿಗೆ ನಾನು ಹೇಳಬೇಕಾಗಿದೆ, ಇದರಿಂದ ಎಲ್ಲಾ ಸೇರಿ ದೇಶಕ್ಕೆ 20 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. The amount you get by taxation by virtue of wealth tax, Gift tax and Expenditure tax is only Rs. 20 crores. It cannot be called as progressive taxation. ನಿಜವಾಗಿಯೂ ನೀವು ಶ್ರೀಮಂತರನ್ನೂ ಮುಟ್ಟಿಯೇ ಇಲ್ಲ.

ಶ್ರೀ ಎಸ್. ಹಮೀದ್ ಷಾ.— ಯಾವ ತರಹ ತೆರಿಗೆಯನ್ನು ಹಾಕಬೇಕು ಎನ್ನುವುದನ್ನು ಹೇಳಿ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ವೆಲ್ತ್ ಟ್ಯಾಕ್ಸ್ ಯಾರನ್ನು ಮುಟ್ಟುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ಅದರ ಪ್ರಮಾಣ ಬಹಳ ಕಡಿಮೆಯಾಗಿದೆ. ಇದು ಪ್ರೊಗ್ರೆಸ್ಸೀವ್ ಟ್ಯಾಕ್ಸೇಷನ್ನೇ, ರಿಗ್ರೆಸ್ಸೀವ್ ಟ್ಯಾಕ್ಸೇಷನ್ನೇ ಎಂದು ಎಕ್ಸಾಮಿನ್ ಮಾಡುತ್ತಿದ್ದೇನೆ. ಎಕ್ಸಾಮಿನ್ ಮಾಡಿದರೆ, ಆಕ್ಚುಯಲ್ಆಗಿ ಇದು ಪ್ರೋಗ್ರೆಸ್ಸೀವ್ ಟ್ಯಾಕ್ಸೇಷನ್ ಅಲ್ಲ. ಪ್ರೋಗ್ರೆಸ್ಸೀವ್ ಟ್ಯಾಕ್ಸೇಷನ್ ಆಗಿದ್ದರೆ, ಭಾರಿ ಭಾರಿ ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹಾಕಬೇಕಾಗಿತ್ತು. ಅದನ್ನು ನೀವು ಮಾಡಲಿಲ್ಲ. ಮಾನ್ಯ ಚವಾಣ್ ಅವರ ಬಡ್ಜೆಟ್ಟನ್ನು ನಾನು ಓದಿದ್ದೇನೆ. ಭಾರಿ ಭಾರಿ ಕೈಗಾರಿಕೋದ್ಯಮಿಗಳಾದ, ಟಾಟಾ, ಬಿರ್ಲಾ, ಡಾಲ್ಮಿಯಾ ಇಂಥವರು ಬೇಕಾದಷ್ಟು ಜನ ಇದ್ದಾರೆ. ಇಂಥವರು 75 ಮನೆತನಗಳು ಇವೆ. ಒಂದು ಪಟ್ಟಿಯನ್ನು ಇಟ್ಟಿದ್ದಾರೆ. ಎಷ್ಟು ಟ್ಯಾಕ್ಸಗಳನ್ನು ಅವರ ಮೇಲೆ ಹಾಕಿದ್ದೀರಾ ? ಈಗ ಪ್ರಶ್ನೆ ಏನೆಂದರೆ, ಯೂನಿಯನ್ ಬಜೆಟ್ಟಿನಲ್ಲಿ ಡೈರೆಕ್ಟ್ ಮತ್ತು ಇಂಡೈರೆಕ್ಟ್ ಟ್ಯಾಕ್ಸಸ್ ಏನಿವೆ, ಅವು ಕೇಂದ್ರಕ್ಕೂ ಅನ್ವಯಿಸುತ್ತದೆ, ರಾಜ್ಯಗಳಿಗೂ ಅನ್ವಯಿಸುತ್ತದೆ. ಇದರ ಪ್ರಮಾಣ ಸ್ವಲ್ಪ ಹೆಚ್ಚು ಕಮ್ಮಿ ಇರಬಹುದಷ್ಟೆ. ಮೂಲಭೂತವಾಗಿ ನಮ್ಮ ರಾಜ್ಯದಲ್ಲಿ ಕೂಡ ಹೆಚ್ಚು ತೆರಿಗೆಗಳನ್ನು ಯಾರ ಮೇಲೆ ಹೊರಿಸಿದ್ದಾರೆ ಅಂದರೆ ಅದು ಬರೀ ಬಡವರ ಮೇಲೆ. ಇನ್ನು ಮಾನ್ಯ ಪೋರ್ಪಡೆಯವರು ಹೋದ ಸಾರಿ ಏನು ತೆರಿಗೆಗಳನ್ನು ಹಾಕಿದ್ದಾರೆ, ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ.

1969 ರ ತನಕ ಇರುವ ಅಂಕಿ ಅಂಶಗಳನ್ನು ನಾನು ಕೊಟ್ಟಿದ್ದೇನೆ. ಈಗ ನಾವು 1974 ನೇ ಇಸವಿಯಲ್ಲಿದ್ದೇವೆ. ಈಗ ಶೇಕಡಾ 20-22 ರಷ್ಟು ಇನ್‌ಡೈರೆಕ್ಟ್ ಟ್ಯಾಕ್ಸಸ್ ಜಾಸ್ತಿಯಾಗಿದೆ. ಇದರಿಂದ ಸಾಮಾನ್ಯ ಜನತೆಯ ಮೇಲೆ ಒಂದು ದೊಡ್ಡ ಹೊರೆ ಹೊರಿಸಿದ ಹಾಗೆ ಆಗುತ್ತದೆ.

ಇನ್ನು ನಮ್ಮ ರಾಜ್ಯಕ್ಕೆ ಬಂದರೆ, ನಮ್ಮ ಘೋರ್ಪಡೆಯವರ ವಾದವೇನೆಂದರೆ ಸಾಮಾನ್ಯ ಜನರ ಮೇಲೆ ಯಾವ ಒಂದು ಹೊರೆ ಬೀಳದ ಹಾಗೆ ಟ್ಯಾಕ್ಸ್ ಹಾಕಿದ್ದೇವೆ ಎಂದು ಹೇಳಿದ್ದಾರೆ. ಈಗ ಒಂದೊಂದು ತೆರಿಗೆಯ ಬಗ್ಗೆ ವಿಚಾರ ಮಾಡೋಣ. ಮೊದಲನೆಯ ತೆರಿಗೆ ಎಕ್ಸೈಸ್ ಮೇಲೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಸಾರಾಯಿ ಮತ್ತು ಸೇಂದಿ ಯಾರ್ಯಾರು ಕುಡಿಯುವವರಿದ್ದಾರೆ, ಅವರು ಕೊಡಲಿ.

ಶ್ರೀ ಕೆ. ಎಚ್. ಹನುಮೇಗೌಡ.—ಅಶೋಕ ಹೋಟೆಲಿನಲ್ಲಿ ಹೋಗಿ ಬಾಟಲ್‌ಗೆ 200-300 ರೂಪಾಯಿ ಕೊಡುವ ಪಾರ್ಟಿಯವರನ್ನು ಇವರು ಟಚ್ಚೇ ಮಾಡಲಿಲ್ಲ. ಅದರ ಬಗ್ಗೆ ಏನು ಹೇಳುತ್ತೀರಿ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳುವುದು ಫಾರಿನ್ ಲಿಕರ್ಸ್ ಮೇಲೆ ಹಾಕಿಲ್ಲ ಎಂದು. ಬೀರ್ ಮತ್ತು ಅರಕನ್ನು ಸಾಮಾನ್ಯ ಜನರು ಸಹ ಕುಡಿಯುತ್ತಿದ್ದಾರೆ. ಅವರಿಗೂ ಇದರಿಂದ ಎಫೆಕ್ಟಾಗುತ್ತದೆ. ಅದೇ ರೀತಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನ್ನು 60 ಪರ್ಸೆಂಟಿನಿಂದ 100 ಪರ್ಸೆಂಟಿಗೆ ಏರಿಸಿದ್ದಾರೆ. ಇದರಿಂದ ಸಿನಿಮಾಕ್ಕೆ ಹೋಗುವವರಿಗೆ ಏನೂ ತೊಂದರೆಯಾಗುವುದಿಲ್ಲವೇ ? 1—40 ಪೈಸೆ ಕೊಡುತ್ತಿದ್ದವನು 1—50 ಕೊಡಬೇಕಾಗುತ್ತದೆ ಅತೀ ಕೆಳದರ್ಜೆಯ ಕ್ಲಾಸಿಗೆ ಹೋಗುವವನು ಸಹ 10 ಪೈಸೆ ಜಾಸ್ತಿ ಕೊಡಬೇಕಾಗುತ್ತದೆ. 2—90 ಕೊಡುತ್ತಿದ್ದವರು ಇನ್ನು ಮುಂದೆ 3—15 ಕೊಡಬೇಕಾಗುತ್ತದೆ. ಇದನ್ನು ಹೇಳುವಾಗ ಸಿನಿಮಾಕ್ಕೆ ಜಾಸ್ತಿ ಜನರು ಏಕೆ ಹೋಗುವುದು ಎಂದು ಕೇಳಬಹುದು. ಮಾನ್ಯ ಚನ್ನಬಸಪ್ಪನವರ ಹಾಗೆ ಎಲ್ಲರೂ ಇರುವುದಕ್ಕೆ ಸಾಧ್ಯವೇ ? ಸಾಮಾನ್ಯ ಜನರಿಗೆ ಬೇರೆ ಯಾವ ರಿಕ್ರಿಯೇಶನ್ ಇದೆ ? ಯಾವುದೂ ಇಲ್ಲ. ಪ್ರಶ್ನೆ ಏನೆಂದರೆ ಇದರಿಂದ ಸಾಮಾನ್ಯ ಜನರಿಗೆ ಬಹಳ ಹೊರೆಯಾಗಿದೆ. ಇನ್ನು ಸರ್ಕಾರದವರು ಮಿನಿ ತಿಯೇಟರುಗಳನ್ನು ಕಟ್ಟಿಸುತ್ತೇವೆಂದು ಹೇಳುತ್ತಿದ್ದಾರೆ. ಮಿನಿ ತಿಯೇಟರುಗಳನ್ನು ಕಟ್ಟಿದರೂ ಜನರು ಅದನ್ನು ನೋಡುವುದಕ್ಕೆ ಹೋಗಬೇಕಲ್ಲ. ಬೇರೆ ನಾಟಕ ಅಥವಾ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಇರುವುದು ಬಹಳ ಕಡಿಮೆ. ಆದರೂ ಜನರು ಹೆಚ್ಚಾಗಿ ಸಿನಿಮಾಕ್ಕೆ ಹೋಗುತ್ತಿದ್ದಾರೆ.

ಇನ್ನು ಶೋ ಟ್ಯಾಕ್ಸನ್ನು ಡಬಲ್ ಮಾಡಿದ್ದೀರಿ. ಇದು ಸಹ ಜನರ ಮೇಲೆ ಬೀಳುವುದಿಲ್ಲವೆಂದು ಹೇಳುತ್ತಿದ್ದೀರಾ ? ಇದು ಸಿನಿಮಾ ತಿಯೇಟರ್ ಮಾಲಿಕನ ಮೇಲೆ ಬಿದ್ದರೆ ಆತನು ಅದನ್ನು ಕೊಡುವುದಕ್ಕೆ ತಯಾರಾಗಿಲ್ಲ. ಅದನ್ನು ಜನರ ಮೇಲೆ ಹಾಕಿಯೇ ಹಾಕುತ್ತಾನೆ.

ಇನ್ನು ಅರ್ಬನ್ ಲ್ಯಾಂಡ್ ಟ್ಯಾಕ್ಸ್ ಹಾಕಿದ್ದಾರೆ. ಇದರಲ್ಲಿ ಕಲವು ಉದಾಹರಣೆಗಳನ್ನು ಕೊಟ್ಟು ಒಂದು ಸ್ಕ್ವೈರ್ ಫೂಟಿಗೆ ಒಂದು ರೂಪಾಯಿ ಎಂದಿದ್ದರೆ, 80 – 60 ಸೈಟಿನ ಮೇಲೆ ಏನೂ ಬೀಳುವುದಿಲ್ಲವೆಂದು ಹೇಳಿದ್ದಾರೆ. ಆ ಮೇಲೆ ಯಾರು ಮನೆಯಲ್ಲಿ ವಾಸ ಮಾಡುತ್ತಾರೆ, ಅಂಥವರ ಮೇಲೆ ಬೀಳುವುದಿಲ್ಲವೆಂದು ಹೇಳಿದ್ದಾರೆ. ಈಗ ಪ್ರಶ್ನೆ ಏನೆಂದರೆ, ಒಂದು ಚದರ ಅಡಿಗೆ ಒಂದು ರೂಪಾಯಿ ಅಂದರೆ ಒಂದು ಚದರ ಗಜಕ್ಕೆ 9 ರೂಪಾಯಿ ಆಯಿತು. ಒಂದು ಚದರ ಗಜಕ್ಕೆ 9 ರೂಪಾಯಿ ಬೆಂಗಳೂರು ಬಿಡಿ, ನಿಮ್ಮ ಬಳ್ಳಾರಿ, ಹುಬ್ಬಳ್ಳಿ, ಮಂಗಳೂರು ಅಥವಾ ಬೆಳಗಾಂ ಎಲ್ಲಿಯಾದರೂ ಇದೆಯೇ ಮತ್ತು ಆ ದರದಲ್ಲಿ ಇವರು ಕೊಡುವುದಕ್ಕೆ ತಯಾರಾಗಿದ್ದಾರೆಯೇ ಎಂದು ಕೇಳುತ್ತೇನೆ. ನಮ್ಮ ಪಕ್ಕದ ದಾಸರಹಳ್ಳಿ ಮತ್ತು ಪೀಣ್ಯದಂತಹ ಊರುಗಳಲ್ಲಿಯೇ ಒಂದು ಚದರ ಗಜಕ್ಕೆ 30—40 ರೂಪಾಯಿ ಬೆಲೆ ಇದೆ. ಆದ್ದರಿಂದ ಮಂತ್ರಿಯವರು ಒಂದು ಚದರ ಅಡಿಗೆ ಒಂದು ರೂಪಾಯಿ ಇದೆ ಎಂದು ಹೇಳುವುದು ನಮ್ಮ ಕಣ್ಣಿಗೆ ಮಣ್ಣೆರಚುವುದಕ್ಕೆ ಹೇಳುವುದಲ್ಲದೆ ಮತ್ತೆ ಯಾವುದಕ್ಕೂ ಅಲ್ಲ. ಈ ತೆರಿಗೆ ಬೆಂಗಳೂರು ಸಿಟಿಗೆ ಮಾತ್ರವಲ್ಲದೆ ಇತರ ಅನೇಕ ರಾಜ್ಯದ ಪಟ್ಟಣಗಳಿಗೂ ಅನ್ವಯಿಸುತ್ತದೆ. ಇದರಲ್ಲಿ ಇನ್ನೊಂದು ಏನೆಂದರೆ, ಮನೆ ಮಾಲೀಕ ತಾನೇ ವಾಸವಾಗಿದ್ದರೆ ಟ್ಯಾಕ್ಸ್ ಕೊಡಬೇಕಾಗಿಲ್ಲ. ಆದರೆ ಅವನು ಬಾಡಿಗೆಗೆ ಕೊಟ್ಟಿದ್ದರೆ, ಅಂಗಡಿಗೆ ಕೊಟ್ಟಿದ್ದರೆ ಕೊಡಬೇಕಾಗುತ್ತದೆ. ಬಾಡಿಗೆಗೆ ಕೊಟ್ಟಿದ್ದರೆ ಯಾರು ಅದನ್ನು ಕೊಡುವುದು ? ಬೆಂಗಳೂರು ನಗರದಲ್ಲಿ ಶೇಕಡಾ 50 ಪರ್ಸೆಂಟ್ ಜನರು ಬಾಡಿಗೆ ಮನೆಯಲ್ಲಿ ವಾಸಮಾಡುತ್ತಿದ್ದಾರೆ. ಮನೆ ಮಾಲೀಕ ಅದನ್ನು ಕೊಡುವುದಕ್ಕೆ ತಯಾರಿಲ್ಲ. ಆತನು ಅದನ್ನು ಬಾಡಿಗೆ ಮನೆಯಲ್ಲಿ ಇರುವವರ ಮೇಲೆ ಹಾಕುತ್ತಾನೆ. ಇದರಿಂದಾಗಿ ಬಾಡಿಗೆ ಇನ್ನೂ ದುಬಾರಿಯಾಗುತ್ತದೆ. ಹೀಗೆ ಆದರೆ ಸಾಮಾನುಗಳ ಬೆಲೆ ಜಾಸ್ತಿಯಾಗುವುದ ಜೊತೆಗೆ ಮನೆ ಬಾಡಿಗೆ ಜಾಸ್ತಿಯಾಗುತ್ತದೆ, ನೀರಿನ ಬೆಲೆ ಜಾಸ್ತಿಯಾಗುತ್ತದೆ ಮತ್ತು ಎಲೆಕ್ಟ್ರಿಸಿಟಿಯ

(ಶ್ರೀ ಎಂ. ಎಸ್. ಕೃಷ್ಣನ್)

ದರವನ್ನು ಸಹ ಜಾಸ್ತಿ ಮಾಡಲು ಚೆನ್ನಬಸಪ್ಪನವರು ಯೋಚನೆ ಮಾಡುತ್ತಿರಬಹುದು. ಆದ್ದರಿಂದ ಮಾನ್ಯ ಶ್ರೀ ಘೋರ್ಪಡೆಯವರ ವಾದ ಏನಿದೆಯೋ ಅದು ಜನಸಾಮಾನ್ಯರ ಮೇಲೆ ಬೀಳುವುದಿಲ್ಲ. ಶುದ್ಧ ಶಾಸ್ತ್ರಾಂಶಗಳಿಗೆ ವಿರೋಧವಾಗಿದೆ. ಇದರಿಂದ ಮಧ್ಯಮ ವರ್ಗದವರಿಗೆ ಖಂಡಿತವಾಗಿ ತೆರಿಗೆ ಜಾಸ್ತಿಯಾಗಿ ಬೀಳುತ್ತದೆ. ಅವರು ತೆರಿಗೆ ಬಾಕಿಯನ್ನು ಜಾಸ್ತಿ ಕೊಡಬೇಕಾಗುತ್ತದೆ. ನಿಕೃಷ್ಟದಲ್ಲಿರುವ ಜನಗಳ ಮೇಲೆ ಈಗಾಗಲೇ ತೆರಿಗೆ ಜಾಸ್ತಿಯಾಗಿದೆಯೋ ಅಥವಾ ಕಡಿಮೆಯಾಗಿದೆಯೋ ಎಂಬುದು ಒಂದು ಪ್ರಶ್ನೆ. ಯಾವಾಗಲೂ ತೆರಿಗೆಗಳನ್ನು ಹಾಕಬೇಕಾದರೆ ಒಂದು ಪ್ರಶ್ನೆ ಬರುತ್ತಿತ್ತು. ನಗರದ ಆಸ್ತಿಗಳ ಮೇಲೆ ಹಾಕಬೇಕೋ ಅಥವಾ ಅಗ್ರಿಕಲ್ಚರಲ್ ಸೆಕ್ಟರ್ ಮೇಲೆ ಹಾಕಬೇಕೋ ಎಂದು ; ಅನೇಕ ರೀತಿಯಲ್ಲಿ ವಾದವಿವಾದಗಳು ನಡೆಯುತ್ತಿತ್ತು. ಇದೊಂದು ಪುಸ್ತಕ. Incidence of Taxation in Mysore State ಎಂಬುದು. ಇದರಲ್ಲಿ National Council of Applied Economic Research ಸಂಸ್ಥೆಯವರು ರಿಸರ್ಚ್ ಮಾಡಿ ಪರಿಸ್ಥಿತಿ ಯಾವರೀತಿ ಇದೆಯೆಂಬುದನ್ನು ಹೇಳಿದ್ದಾರೆ. 1972ನೇ ಮಾರ್ಚ್ ತಿಂಗಳಲ್ಲಿ ಪಬ್ಲಿಷ್ ಆಗಿರುವುದು ಇದು. ಅದರಲ್ಲಿ ಏನು ಹೇಳಿದೆಯೆಂಬುದನ್ನು ತೆಗೆದುಕೊಂಡು ನೋಡುವುದಾದರೆ ಅದರಲ್ಲಿ ಈ ರೀತಿ ಹೇಳಿದೆ.

"It is also useful to look at the picture of incidence of indirect taxes separately in relation to the expenditure of households. The distribution of the burden of indirect taxes is progressive in the urban but does not show such progress in the rural sector. It continuously increases in the urban areas from 5.8 to 16.7 per cent, but in the rural areas, the tax proportion is almost the same in both the highest and the lowest expenditure classes (7.7 per cent), with small fluctuations around 6 to 7 per cent in the intervening classes." ಈಗಲೂ ಕೂಡ ಅರ್ಬನ್ ಸೆಕ್ಟರ್ ಮೇಲೆ ತೆರಿಗೆಗಳು ಜಾಸ್ತಿಯಾಗುತ್ತಲೇ ಇವೆ. ಮಾನ್ಯ ಶ್ರೀ ಘೋರ್ಪಡೆಯವರು ಏನೋ ಒಂದು ಮಾತನ್ನು ಹೇಳುತ್ತಾರೆ. ಅದು ಸರಿಯಲ್ಲ. This is not in the direction of socialism nor is it a principle of socialism ಎಂಬುದಾಗಿ ನಾನು ಹೇಳಬೇಕಾಗಿದೆ. ಇದರಿಂದ ಯಾವ ಒಂದು ಪ್ರೋಗ್ರೆಸ್ಸಿಗೂ ವಿರೋಧವಾಗಿ ಸರ್ಕಾರ ನಡೆದುಕೊಂಡಿದೆಯೆಂದು ಹೇಳಿದರೆ ತಪ್ಪಾಗುವುದಿಲ್ಲ. ಈಗ ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಜಾಸ್ತಿಮಾಡಿದ್ದಾರೆ. ಬಂಗ್ಲಾ ದೇಶದ ರೆಫ್ಯೂಜಿಗಳಿಗೆ ಸಹಾಯಮಾಡುತ್ತಿದ್ದೇವೆಂದು ಬಹಳ ಜೋರಾಗಿ ಹೇಳಿದ್ದಾರೆ. ಹಿಂದೆ ಈ ಟ್ಯಾಕ್ಸನ್ನು 44 ರೂಪಾಯಿಗಳಂತೆ ಕೊಡುತ್ತಿದ್ದರು. ಅದರಲ್ಲಿ ಬಂಗ್ಲಾ ದೇಶದ ರೆಫ್ಯೂಜಿಗಳಿಗೆ ಸಹಾಯ ಮಾಡುವುದಕ್ಕಾಗಿ 4 ರೂಪಾಯಿಗಳನ್ನು ಹೆಚ್ಚಿಗೆ ವಿಧಿಸುತ್ತಿದ್ದರು. ಇವತ್ತು 50 ರೂಪಾಯಿಗಳಿಗೆ ಈ ಟ್ಯಾಕ್ಸನ್ನು ಏರಿಸಿದುದರಿಂದ ಆ ನಾಲ್ಕು ರೂಪಾಯಿಗಳನ್ನು ತೆಗೆದುಹಾಕಿದರೂ ಮತ್ತೆ 6 ರೂಪಾಯಿಗಳನ್ನು ಹೆಚ್ಚಿಸಿದ್ದಾರೆ. ಅದನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಎಂಬುದಾಗಿ ಹಾಕಿದ್ದಾರೆ. ಅದಲ್ಲದೆ ಈಗ ಸೇಲ್ಸ್ ಟ್ಯಾಕ್ಸನ್ನು ಇಂಡಿಯಾ ಸರ್ಕಾರದವರು ಪ್ರತಿಯೊಂದು ಐಟಂ ಮೇಲೆ, ಪ್ರತಿಯೊಂದು ಪಾಯಿಂಟ್ ಮೇಲೆ ಹಾಕಿದ್ದಾರೆ. ಈಗ ಬೆಲೆಗಳು ಸಿಕ್ಕಾಪಟ್ಟೆ ಜಾಸ್ತಿಯಾಗಿವೆ. ಇದು ಯಾರ ಮೇಲೆ ಬೀಳುತ್ತದೆ ಎಂಬುದನ್ನು ಯೋಚನೆಮಾಡಬೇಕು. ಪೆಟ್ರೋಲ್ ರೇಟ್ ಏನೆಂಬುದು ಸರ್ಕಾರಕ್ಕೆ ಗೊತ್ತಿದೆ. ಒಂದೇಸಾರಿ ಯಾರೂ ಕಾರ್‌ನಲ್ಲಿ ಬರಬೇಡಿ ಎಂದು ಹೇಳಿಬಿಡಿ. ಇದರಿಂದ ಅನೇಕರು ಈಗ ಕಾರ್‌ಗಳನ್ನು ಉಪಯೋಗಿಸುವುದಕ್ಕಾಗುತ್ತಾ ಇಲ್ಲ. ಸರ್ಕಾರದ ಅಧಿಕಾರಿಗಳಿಗೂ ಮತ್ತು ಮಂತ್ರಿಗಳಿಗೂ ಮಿನಿ ಬಸ್‌ಗಳನ್ನು ಮಾಡಿ. ಅವರೂ ಸಹ ಬಸ್ಸುಗಳಲ್ಲಿಯೇ ಓಡಾಡಲಿ. ಏನೇ ಆಗಲೀ ಸರ್ಕಾರದವರು ಈ ರೀತಿಯಾಗಿ ಕಪಟನಾಟಕವನ್ನು ಆಡುತ್ತಿದ್ದಾರೆ. ಜನರಿಗೆ ಹೆಚ್ಚು ಹೆಚ್ಚಾಗಿ ತೆರಿಗೆಗಳನ್ನು ಹೊರಿಸುತ್ತಲೇ ಇದ್ದಾರೆ. ಜನರಿಗೆ ಕಷ್ಟಕಾರ್ಪಣ್ಯಗಳನ್ನು ಜಾಸ್ತಿ ಮಾಡಿಸುತ್ತಿದ್ದಾರೆ. ಆ ರೀತಿ ಏಕೆ ಮಾಡುತ್ತಾರೋ ಗೊತ್ತಿಲ್ಲ. ಸೂಪರ್ ಟ್ಯಾಕ್ಸೇಷನ್ ಆನ್ ಪ್ಯಾಸೆಂಜರ್ಸ್ ಅಂಡ್ ಗೂಡ್ಸ್ ಎಂಬುದಾಗಿ ಕಡೆಯದೊಂದಿದೆ. ಸೇಲ್ಸ್ ಟ್ಯಾಕ್ಸಿನಿಂದ ನಮ್ಮ ದೇಶಕ್ಕೆ ಮ್ಯಾಗ್ಜಿಮಂ ಈಲ್ಡ್ ಬರುತ್ತವೆ ಎಂದು ದೊಡ್ಡದಾಗಿ ಬರೆ ಎಳೆದಿದ್ದಾರೆ. ಈಗ ಸೇಲ್ ಟ್ಯಾಕ್ಸ್ ಲಿಸ್ಟ್ ನೋಡಿದರೆ ಸಿಕ್ಕಾಪಟ್ಟೆ ಬರೆ ಎಳೆದಿದ್ದಾರೆ. ಟ್ಯಾಕ್ಸೇಷನ್ ರಿಸೋರ್ಸಸ್ ಕಮಿಟಿ ಮತ್ತು ಭೂತಲಿಂಗಂ ಕಮಿಟಿಯವರು ಹೇಳಿದ್ದಕ್ಕೂ ಮೀರಿ ನಡೆದುಕೊಂಡು ತೆರಿಗೆಯನ್ನು

ಸಾಮಾನ್ಯ ಜನರ ಮೇಲೆ ಹೆಚ್ಚಿಗೆ ಹಾಕಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಸಹ ಯಾವು ಯಾವುದರ ಮೇಲೆ ತೆರಿಗೆ ಹಾಕಬೇಕು, ಯಾವುದರ ಮೇಲೆ ತೆರಿಗೆ ಹಾಕಬಾರದೆಂಬುದನ್ನು ಸ್ವಲ್ಪ ಮಟ್ಟಿಗೆ ಯೋಚನೆ ಮಾಡಬೇಕಾಗಿತ್ತು. ಏಕೆಂದರೆ ಇದೆಲ್ಲಾ ಕೊಂಡುಕೊಳ್ಳುವವರ ಮೇಲೆಯೇ ಬೀಳುತ್ತದೆ. ಒಂದು ಕಡೆ ಬೆಲೆಗಳು ಜಾಸ್ತಿಯಾಗುತ್ತಿವೆ. ಸಾಮಾನ್ಯ ಜನರು ಉಪಯೋಗಿಸುವ ಸಿಗರೇಟ್ ಕೇಸಿನ ಮೇಲೆ, ವಾಚಸ್, ಟೈಂ ಪೀಸ್‌ಗಳ ಮೇಲೆ, ಇನ್ನೂ ಅನೇಕ ದಿನನಿತ್ಯ ಬಳಕೆಯ ವಸ್ತುಗಳ ಮೇಲೆ ಹೇರಳವಾಗಿ ತೆರಿಗೆಯನ್ನು ಹಾಕಿದ್ದಾರೆ. ಪೆಟ್ರೋಲ್ ಮೇಲೆ ಸೇಲ್ಸ್ ಟ್ಯಾಕ್ಸನ್ನು ಸೇಕಡ 10 ರಿಂದ 12ರವರೆಗೆ ಜಾಸ್ತಿ ಮಾಡಿದ್ದಾರೆ. ಕಾಫಿ ಸೀಡ್ಸ್ ಹಾಗೂ ಕಾಫಿ ಪೌಡರ್ ಮೇಲೆಯೂ ಜಾಸ್ತಿ ತೆರಿಗೆಯನ್ನು ಹಾಕಿದ್ದಾರೆ. ಆದರೆ ಕಾಫಿ ಕುಡಿಯುವುದಕ್ಕೆ ಹೋಟಲಿಗೆ ಹೋದರೆ ಮಾತ್ರ ತೆರಿಗೆ ಇಲ್ಲ. ಕಾಫಿ ಸೀಡ್ಸ್ ಮತ್ತು ಪೌಡರ್‌ಗೆ ತೆರಿಗೆ ಉಂಟು. ಹೆಚ್ಚಿಗೆ ಜನರು ಅವನ್ನೇ ಉಪಯೋಗವಾಡುವುದು ಹೆಚ್ಚು. ಅಂಥಾವುಗಳ ಮೇಲೆ ಹೆಚ್ಚಿಗೆ ತೆರಿಗೆಯನ್ನು ಹಾಕಿದ್ದಾರೆ. ಇದರಿಂದಾಗಿ ಜನರು ತುಂಬಾ ಪರಿತಾಪ ಮಾಡುತ್ತಿದ್ದಾರೆ. ಇವರು ಚಿಕ್ಕ ಮಕ್ಕಳನ್ನೂ ಸಹ ಬಿಟ್ಟಿಲ್ಲ. ಅವರು ಉಪಯೋಗಿಸತಕ್ಕ ಬೈಸಿಕಲ್ಸ್, ಟ್ರೈಸಿಕಲ್ಸ್ ಮೇಲೆ ಹೆಚ್ಚಿನ ತೆರಿಗೆ ಹಾಕಿದ್ದಾರೆ. ಮಾನ್ಯ ಶ್ರೀ ಚನ್ನಬಸಪ್ಪನವರು ಸೋವಿಯತ್ ಯೂನಿಯನ್ನಿಗೆ ಹೋಗಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ಕಳುಹಿಸಿಕೊಟ್ಟರೆ ಹೋಗಿ ಬರುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೆ ಬೇಕಾದಷ್ಟು ಇನ್‌ಫ್ಲುಯನ್ಸ್ ಇದೆ. ಬೇಕಾದಷ್ಟು ಶಕ್ತಿ ಇದೆ. ಹೋಗಬಹುದು. ಆದರೆ ಆ ಸೋಷಿಯಲಿಜಂ ನಿಮಗೆ ಬೇಡ. ಅದು ಆಗುವುದಿಲ್ಲ. ಅಲ್ಲಿ ಮಕ್ಕಳನ್ನು ಯಾವ ರೀತಿಯಲ್ಲಿ ಬೆಳೆಸುತ್ತಾರೆ. ಯಾವ ರೀತಿಯಲ್ಲಿ ಪೋಷಣೆ ಮಾಡುತ್ತಾರೆ ಎಂಬುದನ್ನು ನೋಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ಟ್ರೈಸಿಕಲ್, ಬೈಸಿಕಲ್, ಟಾಯ್ಸ್, ಒಳ್ಳೆಯ ಜೀಪುಗಳೂ ಸಹ ಬಹಳ ಕಡಿಮೆ ಬೆಲೆಯಲ್ಲಿ ಸಿಗುತ್ತವೆ. ಇಲ್ಲಿ 10–20 ರೂಪಾಯಿಗಳಿಗೆ ಸಿಗುವ ಸಾಮಾನುಗಳು ಅಲ್ಲಿ 10 20 ಪೈಸೆಗೆ ಸಿಗುತ್ತವೆ. ಅಲ್ಲಿನ ಅನೇಕ ಗ್ರಾಮಗಳಿಗೂ ನಾನು ಹೋಗಿ ನೋಡಿದ್ದೇನೆ. ಆ ಮಕ್ಕಳ ತಂದೆ ತಾಯಿಗಳು ತಂತಮ್ಮ ಮಕ್ಕಳನ್ನು ಬಹಳ ಚೆನ್ನಾಗಿ ಸಾಕುತ್ತಾರೆ. ಆದ್ದರಿಂದ ಅನೇಕ ಸಾಮಾನುಗಳನ್ನು ವಿಪರೀತವಾಗಿ ಮಧ್ಯಮವರ್ಗದ ಜನರೇ ಹೆಚ್ಚಿಗೆ ಉಪಯೋಗಿಸುತ್ತಾರೆ. ಅಂದ ಮೇಲೆ ನಿಮಗೆ ಚಿಕ್ಕ ಮಕ್ಕಳ ಮೇಲೆ ಏಕೆ ಕಣ್ಣು ? ಒಟ್ಟಿನಲ್ಲಿ ಅರ್ಥವಿಲ್ಲದ ರೀತಿಯಲ್ಲಿ ಸೇಲ್ಸ್ ಟ್ಯಾಕ್ಸ್ ಹಾಕಿದ್ದೀರಿ. ಮಕ್ಕಳು ತಿನ್ನತಕ್ಕ ಕೇಕ್ಸ್ ಮತ್ತು ಬಿಸ್ಕತ್ತುಗಳ ಮೇಲೆ ಮತ್ತು ಪೆಪ್ಪರ್‌ಮೆಂಟ್‌ಗಳ ಮೇಲೆ ಹೆಚ್ಚಿಗೆ ಟ್ಯಾಕ್ಸ್ ಹಾಕಿದ್ದಾರೆ. ಅದು ಸರಿಯಲ್ಲ. ಮಾನ್ಯ ಶ್ರೀ ಸಿದ್ಧವೀರಪ್ಪನವರಿಗೆ ಹೇಳಬೇಕಾಗಿದೆ. ಅವರ ಆಶೀರ್ವಾದ ಬೇಕಾಗಿದೆ. ಆಯುರ್ವೇದ ಔಷಧಗಳಿಗೆ ಟ್ಯಾಕ್ಸ್ ಹೆಚ್ಚಿಗೆ ಹಾಕಬೇಡಿ. ಇನ್ನು ಮಿಲ್‌ಯಾರನ್ ಮೇಲೆ ಬೇರೆ ಟ್ಯಾಕ್ಸ್ ಜಾಸ್ತಿಯಾಗಿ ಹಾಕಿದ್ದಾರೆ. ಕೆಮಿಕಲ ಫರ್ಟಿಲೈಜರ್ಸ್ ಮೇಲೆ ಹೆಚ್ಚಿಗೆ ತೆರಿಗೆಯನ್ನು ಹಾಕಿದ್ದೀರಿ. ನಾವೇನಾದರೂ ಇಂತಹ ವಿಷಯಗಳ ಬಗ್ಗೆ ಮಾತನಾಡಿದರೆ, ನಮಗೆ ರೈತರ ವಿಷಯಗಳು ಗೊತ್ತಿಲ್ಲವೆಂದು ಹೇಳುತ್ತೀರಿ. ನಿಮಗೆ ಮಾತ್ರ ಅವರ ಬಗ್ಗೆ ಪ್ರೇಮ ಮತ್ತು ವಿಶ್ವಾಸ ಉಕ್ಕಿ ಬರುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಜಾಗ್ರತೆ ಅವರ ಭಾಷಣವನ್ನು ಮುಗಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಇವರು ಹೇಳಿರುವ ವಾದದಲ್ಲಿ ತಿರುಳಿಲ್ಲ ಜನಸಾಮಾನ್ಯರ ಮೇಲೆ ತೆರಿಗೆ ಸ್ಪಷ್ಟವಾಗಿ ಬೀಳುತ್ತದೆ ಎಂದು ಒತ್ತಿ ಒತ್ತಿ ಹೇಳಬೇಕಾಗಿದೆ.

[MR. DEPUTY SPEAKER in the Chair]

3–30 P.M.

ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಯಾವರೀತಿ ಇದೆ ಎನ್ನುವುದನ್ನು ಕೂಡ ಅಭ್ಯಸಿಸಿದ್ದೇನೆ. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಈ ಹೊತ್ತು ಇಂಥ ಪರಿಸ್ಥಿತಿ ಇಲ್ಲ. ಕಮಾಡಿಟಿ ಟ್ಯಾಕ್ಸೇಷನ್ ಇನ್ ಇಂಡಿಯಾ ಎನ್ನುವ ಪುಸ್ತಕದಲ್ಲಿ ಬರೆದಿರುವುದನ್ನು ಮಾನ್ಯ ಸಭೆಯ ಅವಗಾಹನೆಗಾಗಿ ಓದುತ್ತೇನೆ.

Commodity Taxation in India—D. T. Lakdawala & K. V. Nambiar
(Sardar Patel Institute of Economic and Social Research.)

"In countries where there is overlapping system at various levels (the U.S.A. and Canada), while as mentioned above, the excise duties

(ಶ್ರೀ ಎಸ್. ಎಂ. ಕೃಷ್ಣ)

are restricted mainly to selected items, the rates of other taxes, whether they are excises or selective sales taxes or general sales taxes, are pitched low so as to reduce their cumulative price impact. As far as general sales taxes are concerned, they range between 2 per cent and 3 per cent in the U.S.A. and Canada ; majority of the States in the U.S.A. levy a general sales tax at the rate of only 3 per cent."

Majority of the States in U.S.A. levey general sales tax at the rate of 3 per cent. These are the facts in regard to sales tax.

It is a crushing burden upon the poor people. ಈ ರೀತಿ ತೆರಿಗೆಯನ್ನು ಹೊರಿಸಿದರೆ ಜನ ಸುಮ್ಮನೆ ಬಿಡುವುದಿಲ್ಲ. ಗುಜರಾತಿನಲ್ಲಿ ಆಗಿರುವ ರೀತಿಯಲ್ಲಿ ನಮ್ಮಲ್ಲಿಯೂ ಆಗುತ್ತದೆ.

ನಮ್ಮ ಯೋಜನೆಗಳನ್ನು ಒಳ್ಳೆಯ ರೀತಿಯಿಂದ ನಡೆಸುತ್ತೇವೆಂದು ಹೇಳಿದ್ದಾರೆ. ಯೋಜನೆಗಳ ಬಗ್ಗೆ ನಾನು ಮೊನ್ನೆ ಮಾತನಾಡಿದೆ ಈಗ ಹೇಳಬೇಕಾಗಿರುವುದೇನೆಂದರೆ ಯೋಜನೆಗಳು ಯಾವ ದಾರಿಯಲ್ಲಿ ಯಾವ ದೃಷ್ಟಿಯಲ್ಲಿ ಹೋಗುತ್ತಿವೆ ಎಂದು ನೋಡಿದರೆ ಮೂಲಭೂತವಾಗಿ ನಮ್ಮ ರಾಜ್ಯದ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಹೆಚ್ಚಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕೇಂದ್ರದವರು ಹೇಳುವಂತೆ ಇಲ್ಲಿ ಒಪ್ಪಬೇಕು ಎನ್ನುವ ರೀತಿಯಲ್ಲಿ ಹೋಗುತ್ತಾರೆ. ಇದು ಸರಿಯಲ್ಲ. ಉದಾಹರಣೆಗೆ ಹೇಳಬೇಕು ಎಂದರೆ ಅನ್ಯುಯಲ್ ಪ್ಲಾನ್‌ನಲ್ಲಿ 5.01 ಕೋಟಿ ರೂಪಾಯಿಗಳನ್ನು ಕೈಗಾರಿಕೆಗೆ ತೋರಿಸಿರುವುದು. ಒಂದು ದೇಶದಲ್ಲಿ ಕೈಗಾರಿಕೆಯು ಬೆಳವಣಿಗೆಯಾಗದೆ ಹೋದರೆ ಯಾವರೀತಿ ಜನಸಾಮಾನ್ಯರ ಜೀವನಮಟ್ಟವನ್ನು ಹೆಚ್ಚಿಸುವುದಕ್ಕೆ ಸಾಧ್ಯ ? ಕೈಗಾರಿಕೆಯು ಬೆಳವಣಿಗೆಯಾಗದೆ ಹೋದರೆ ನಿರುದ್ಯೋಗ ಸಮಸ್ಯೆ ಬಗೆಹರಿಯುವುದು ಹೇಗೆ ? ಅರ್ಧ ಮಿಲಿಯನ್ ಜನರಿಗೆ ಉದ್ಯೋಗ ಕೊಡುವಂಥ ಯೋಜನೆ ಕಣ್ಣುಮುಚ್ಚಾಲೆ ನಾಟಕವಾಗುತ್ತದೆಯೇ ಹೊರತು ಬೇರೇನೂ ಅಲ್ಲ. ಇದೆಲ್ಲ ಬರೀ ತೋರಿಕೆಗೆ ಮಾತ್ರ ಮಾಡುತ್ತಿದ್ದಾರೆಯೇ ವಿನಾ ಮತ್ತೇನೂ ಅಲ್ಲ ಇರಿಗೇಷನ್ ಅಂಡ್ ಪವರ್‌ಗೆ ಕಡಿಮೆ ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯಕ್ಕೆ ಯಾವುದು ಮುಖ್ಯ ಎಂದು ನೋಡಿದರೆ ಸರ್ಕಾರದ ದೃಷ್ಟಿ ಬೇರೆ ಕಡೆ ಇರಬೇಕಾಗಿತ್ತು, ಇವರು ಹೋಗತಕ್ಕ ದಾರಿ ಸರಿಯಲ್ಲವೆಂದು ಹೇಳುತ್ತೇನೆ.

ಸಾಮಾನ್ಯ ಜನಗಳ ಬೇಡಿಕೆಗಳನ್ನು ಪೂರೈಸುವುದಕ್ಕೋಸ್ಕರ ಒಂದು ಮುಖ್ಯವಾದ ಯೋಜನೆ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ, ಜನತಾ ವಸತಿ ಯೋಜನೆಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಹಣಕಾಸಿನ ಮಂತ್ರಿಗಳು ಅದಕ್ಕಾಗಿ ಐದು ಕೋಟಿ ರೂಪಾಯಿಗಳನ್ನು ಇಟ್ಟಿರುವುದಾಗಿ ಹಿಂದಿನ ವರ್ಷ ಹೇಳಿದ್ದರು. ಈ ಸಲ ಎರಡೂವರೆ ಕೋಟಿ ರೂಪಾಯಿ ಇಟ್ಟಿದ್ದಾರೆ. ಐದು ಕೋಟಿ ರೂಪಾಯಿಗಳಿಂದ ಎರಡೂವರೆ ಕೋಟಿ ರೂಪಾಯಿಗೆ ಇಳಿಯಿತು. ಮುಂದೆ ಹೋಗುವುದಕ್ಕೆ ಬದಲಾಗಿ ಹಿಂದಕ್ಕೆ ಹೋಗುತ್ತಿದ್ದಾರೆಂದು ಹೇಳಬೇಕಾಗಿದೆ.

ದೇಶದಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಬಂದಿದೆ. ತೆರಿಗೆಗಳನ್ನು ಹೊರಿಸಿ ಬೆಲೆಗಳು ಜಾಸ್ತಿಯಾಗಿ, ಹಣದುಬ್ಬರ ಜಾಸ್ತಿಯಾಗಿದೆ. ಇದರ ಜೊತೆಗೆ ಪೆಡಂಭೂತವಾಗಿ ಲಂಚಗುಳಿತನ ಸ್ವಜನಪಕ್ಷಪಾತ ಹೆಚ್ಚುತ್ತಿದೆ. ಯಾರು ಲಂಚ ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿ, ಅವರ ಮೇಲೆ, ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳುತ್ತಾರೆ. ನಾನು ಒಂದೆರಡು ನಿದರ್ಶನಗಳನ್ನು ಹೇಳುತ್ತೇನೆ. ಕರ್ನಾಟಕ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ಅದರ ಮುಖಾಂತರ ರೋಸ್‌ವುಡ್ ಮಾರಾಟ ಮಾಡಬೇಕೆಂಬ ತೀರ್ಮಾನವನ್ನು ಸರ್ಕಾರದವರು ಕೈಗೊಂಡು ಆರ್ಡರ್ ಕೂಡ ಹೊರಡಿಸಿದರು ರೋಸ್‌ವುಡ್ ಎಲ್ಲ ಕರ್ನಾಟಕ ಫಾರೆಸ್ಟ್ ಇಂಡಸ್ಟ್ರೀಸ್ ಹತ್ತಿರ ಬರಬೇಕು, ಟೆಂಡರ್ ಕರೆದು ಯಾರು ಜಾಸ್ತಿ ಕೊಡುತ್ತಾರೆ ಅವರಿಗೆ ಕಾರ್ಪೊರೇಷನ್‌ನವರು ಮಾರಿ ಲಾಭ ಪಡೆದು ಮಾರಾಟ ಮಾಡಬೇಕು ಎಂದು ಮಾಡಿದರು. ರೋಸ್‌ವುಡ್ ಬೆಲೆ ಬಹಳ ಜಾಸ್ತಿ ಇದೆ. ಇವರು ಏನು ಮಾಡಿದ್ದಾರೆಂದರೆ ಒಂದು ಜಪಾನೀಸ್ ಫರ್ಮ್‌ನೊಡನೆ ಮಾತುಕತೆ ನಡೆಸಿ ಮ್ಯಾಕ್ಸಿಮಂ ಆಕ್ಷನ್ ರೇಟ್ ಏನಿರುತ್ತದೆ ಅದಕ್ಕಿಂತ 18 ಪರ್ಸೆಂಟ್ ಜಾಸ್ತಿ ಕೊಡಬೇಕು ಎಂದು ಮಾತಿನಲ್ಲಿ ಒಪ್ಪಂದ ಮಾಡಿಕೊಂಡಿದ್ದಾರೆ. ಆ ಮೇಲೆ

ಆರ್ಡರ್ ನಡೆಯಿತು, ಸರ್ಕಾರದ ಪ್ರತಿನಿಧಿಗಳು ಆಕ್ಷನ್ ಮಾಡಿದ್ದಾರೆ. ಆಕ್ಷನ್ ಮಾಡಿದ ಮೇಲೆ ಮಾಲನ್ನು ಮದ್ರಾಸಿಗೆ ಕಳುಹಿಸಿದರು. ಜಪಾನ್ ಫರ್ಮ್‌ನವರು ಅದನ್ನು ಲಿಫ್ಟ್ ಮಾಡಲಿಲ್ಲ. ಏಕೆ ಮಾಡಲಿಲ್ಲವೆಂದರೆ ರೇಟ್ ಬಹಳ ದುಬಾರಿಯಾಗಿದೆಯಾದ್ದರಿಂದ ಲಿಫ್ಟ್ ಮಾಡಲಿಲ್ಲವೆಂದು ಹೇಳುತ್ತಾರೆ. ಏಕೆ ಹೀಗಾಯಿತು, ಏಕೆ ಟೆಂಡರುಗಳನ್ನು ಕರೆಯಲಿಲ್ಲ ? ಬರಹ ಮೂಲಕ ಏಕೆ ಒಪ್ಪಂದ ಮಾಡಿಕೊಳ್ಳಲಿಲ್ಲ ? ಇದರಲ್ಲಿ ಯಾರ ಕೈವಾಡವಿದೆ ? ಮಂತ್ರಿಗಳ ಜವಾಬ್ದಾರಿ ಇದರಲ್ಲಿಲ್ಲವೇ? ಮಂತ್ರಿಗಳ ಜವಾಬ್ದಾರಿ ಇದ್ದರೆ ಅಪಾದನೆ ಹೊರಿಸುವುದಕ್ಕಾಗುತ್ತದೆಯೋ ಇಲ್ಲವೋ ? ಇದರಲ್ಲಿ ಯಾರು ಯಾರು ಯಾವ ಯಾವ ರೀತಿ ಕೈವಾಡ ನಡೆಸಿದ್ದಾರೆ ? ಕೋಟಿಗಟ್ಟಲೆ ರೂಪಾಯಿ ನಷ್ಟ ಇದರಲ್ಲಿ ಆಗಿದೆ. ಜಪಾನ್ ಫರ್ಮ್‌ನವರು ಗದಗ್ ಹುಲಕೋಟಿ ಟೆಕ್ಸ್‌ಟೈಲ್ ಮಿಲ್‌ಗೆ ವುಡ್ ಪ್ಯಾನಲ್ ಮಾಡಿದ್ದಾರೆಂದು ಗೊತ್ತಾಗಿದೆ. ಅದರ ಅರ್ಥವೇನು ಎನ್ನುವುದು ನನಗೆ ಗೊತ್ತಿಲ್ಲ. ಇದರ ಬಗ್ಗೆ ವಿಚಾರಣೆ ನಡೆಸಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸ್ವಜನಪಕ್ಷಪಾತ ಹೇಗಿದೆ ಎನ್ನುವುದಕ್ಕೆ ಒಂದು ಮಾತನ್ನು ಹೇಳುತ್ತೇನೆ. ಸೋಮಯ ಷುಗರ್ ಫ್ಯಾಕ್ಟರಿಯಲ್ಲಿ ಬೆಂಕಿ ಬಿದ್ದು ನಷ್ಟವಾಯಿತು ಎಂದೆಲ್ಲ ಪತ್ರಿಕೆಗಳಲ್ಲಿ ಬಂದಿತ್ತು. ಅವರು ಏನು ಮಾಡಿದರು ಎಂದರೆ ಒಂದು ಕೋಟಿ ರೂಪಾಯಿ ನಷ್ಟವಾಗಿದೆ, ಅದಕ್ಕೆ ಪರಿಹಾರವನ್ನು ಕೊಡಬೇಕು ಎಂದು ಸರ್ಕಾರವನ್ನು ಕೇಳಿದರು. ನಮಗೆ ಗೊತ್ತಿರುವ ಹಾಗೆ ಸರ್ಕಾರದವರು 30 ಲಕ್ಷ ರೂಪಾಯಿ ಜನವರಿ ತಿಂಗಳಿನಲ್ಲಿ ಮಂಜೂರು ಮಾಡಿದರು. ಏನು ಪ್ರೋಸೆಸ್‌ನಲ್ಲಿ ಇಷ್ಟು ಹಣವನ್ನು ಮಂಜೂರು ಮಾಡಿದ್ದಾರೆ ? ಯಾವನಾದರೂ ಮಿಲ್ ಮಾಲಿಕ ಕಾರ್ಖಾನೆಯನ್ನು ಇನ್‌ಷ್ಯೂರ್ ಮಾಡಿರುತ್ತಾನೆ, ಪಿನ್ ಟು ಪಿನ್ ಇನ್‌ಷ್ಯೂರ್ ಮಾಡಿರುತ್ತಾನೆ. ಅವರು ಇನ್‌ಷ್ಯೂರ್ ಮಾಡಿದ್ದಾರೆಯೋ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳಲಿಲ್ಲ, ನಷ್ಟವಾಗಿದೆಯೋ ಎಂದು ತಿಳಿದುಕೊಳ್ಳಲಿಲ್ಲ, ಏನೂ ತಿಳಿದುಕೊಳ್ಳಲಿಲ್ಲ. ಏನೇನು ಪ್ರೊಸೀಜರ್ ಬೇಕೋ ಅದೊಂದನ್ನೂ ಮಾಡದೆ 30 ಲಕ್ಷ ರೂಪಾಯಿ ಕೊಟ್ಟರು. ಇದರಿಂದ ಯಾರ ಗಂಟು ಹೋಯಿತು? ಇಂತಹವರನ್ನು ಕಂಡು ಹಿಡಿಯುವುದು ಕಷ್ಟ ಎಂದು ಸರಕಾರದವರು ಹೇಳುತ್ತಾರೆ. ಇಂದು ಸರಕಾರದಲ್ಲಿ ಇನ್ನೂ ಬ್ಯೂರಾಕ್ರಸಿ ಇರುವುದರಿಂದ ಲಂಚ ತೆಗೆದುಕೊಳ್ಳುವ ಅಧಿಕಾರಿಗಳೇ ಜಾಸ್ತಿ ಇರುತ್ತಾರೆ. ಇರುವ ಅಧಿಕಾರಿಗಳಲ್ಲಿ ಮುಕ್ಕಾಲು ಭಾಗ ಅಂತಹವರೇ ಇದ್ದಾರೆ. ಕಾಲು ಭಾಗ ಮಾತ್ರ ಅಂತಹವರು ಇರಲಾರರು. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ದೊಡ್ಡದಾಗಿ ನಮ್ಮನ್ನು ಕೇಳಬಹುದು ಯಾರು ಎಷ್ಟು ತೆಗೆದುಕೊಳ್ಳುತ್ತಿದ್ದಾರೆ ಎಂದು. ಇದರ ಬಗ್ಗೆ ನಾವು ಸವಾಲು ಮಾಡುವುದಕ್ಕಾಗುವುದಿಲ್ಲ. ನನಗಂತೂ ಇದು ಗೊತ್ತಿಲ್ಲ. ಇನ್ನು ನಮ್ಮ ರಾಜ್ಯದ ಜನತೆಯ ಮೇಲೆ ತೆರಿಗೆ ಹೊರೆಯನ್ನು ಜಾಸ್ತಿ ಮಾಡಿದ್ದಾರೆ. ಇದರಿಂದ ಇನ್ನಷ್ಟು ಕರಪ್ಷನ್ ಹೆಚ್ಚಾಗಲು ಅವಕಾಶವಾಗುತ್ತದೆಯೋ ವಿನಾ ಜನಕ್ಕೆ ಏನೂ ಅನುಕೂಲವಾಗುವುದಿಲ್ಲ. 1973-74ರಲ್ಲಿ ನಿಮ್ಮ ಫೈನಾನ್‌ಷಿಯಲ್ ಪೊಸಿಷನ್ ನೋಡಿದರೆ ಅದು ಖಂಡಿತ ರಿಟ್ರ್ಯಾಡ್ ಆಗುತ್ತದೆ ಮತ್ತು ಇಂದು ಇರುವ ದೇಶದ ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಇದಲ್ಲದೆ ನಮ್ಮ ಸರಕಾರ ದವರು ಕೆಲವು ಮಂತ್ರಿಗಳನ್ನು ಕಿತ್ತು ಹಾಕಿದರು ಮತ್ತು ಕೆಲವರನ್ನು ತೆಗೆದುಕೊಂಡರು. ಇದು ಅವರ ಪಕ್ಷಕ್ಕೆ ಸಂಬಂಧಪಟ್ಟ ವಿಚಾರ. ನಾನು ಇದರ ಬಗ್ಗೆ ಹೇಳುತ್ತಿಲ್ಲ. ಆದರೆ ಮಾನ್ಯ ಶ್ರೀ ಬಸವಲಿಂಗಪ್ಪ ನವರು ಮಂತ್ರಿಗಳಾಗಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದರು. ಇವರನ್ನೇಕೆ ತೆಗೆದರೋ ಗೊತ್ತಿಲ್ಲ. ಬಸವಲಿಂಗಪ್ಪನವರೇನೂ ಅಂತಹ ತಪ್ಪುಗಳನ್ನು ಮಾಡಿದವರಲ್ಲ, ಏನೋ ಒಂದು ಕಡೆ ಮಾತಾಡಿ ದರು ಎಂದು ಅವರನ್ನು ತೆಗೆಯುವುದರ ಔಚಿತ್ಯವಾದರೂ ಏನಿತ್ತು ? ನನಗಂತೂ ಗೊತ್ತಾಗಲಿಲ್ಲ. ಬಹಳ ಡೈನಮಿಕ್ ಆಗಿ ಹಾಗೂ ಒಳ್ಳೆಯ ಉತ್ಸಾಹದಿಂದ ಕೆಲಸ ಮಾಡುತ್ತಿದ್ದ ಶ್ರೀ ಅಜೀಜ್‌ಸೇಟ್ ರವರನ್ನು ತೆಗೆದರು. ಅವರಿಗೆ ಲೇಬರ್ ವಿಚಾರ ಚೆನ್ನಾಗಿ ಗೊತ್ತಿತ್ತು ಮತ್ತು ಎಲ್ಲರ ಪ್ರೀತಿಗೂ ಪಾತ್ರರಾಗಿದ್ದವರು. ಇವರು ಇಂದು ಶ್ರೀ ಚನ್ನಬಸಪ್ಪನವರು ಹೇಳಿಕೆ ಕೊಟ್ಟಂತ ಕೊಡುತ್ತಿರಲಿಲ್ಲ. ಲೇಬರ್ ವಿಚಾರದಲ್ಲಿ ಅವರು ವಿಚಾರ ಮಾಡಿ ಹೇಳಿಕೆ ಕೊಡುತ್ತಿದ್ದರು. ಇಂದು ಶ್ರೀ ಅಜೀಜ್ ಸೇಟರನ್ನು ತೆಗೆದು ಇಲ್ಲಿಗೆ ಶ್ರೀ ಯಾಹ್ಯಾರವರನ್ನು ತಂದಿದ್ದಾರೆ. ಇವರಿಗೆ ಲೇಬರು ಬಗ್ಗೆ ಅಷ್ಟು ಅನುಭವ ಇದೆಯೋ ಇಲ್ಲವೋ ಗೊತ್ತಿಲ್ಲ. ಇಂದು ಇಲ್ಲಿ ಒಂದು ಹೇಳಿಕೆ ಕೊಟ್ಟಾಗ ಕಾಳಿ ನದಿ ಯೋಜನೆಯಲ್ಲಿ ಕೆಲಸ ಮಾಡುವ ಕೆಲಸಗಾರರು ಒಂದು ಯೂನಿಯನ್ ಮಾಡಲು ಅವಕಾಶ ಕೊಡುವುದಿಲ್ಲ ಎಂದು ಹೇಳಿದರು ಮತ್ತು ವರ್ಕ್ ಚಾರ್ಜ್ ಕೆಲಸ ಮಾಡುವ ಕೂಲಿ ಜನರನ್ನು ತೆಗೆಯಬೇಕೆಂದು ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರು ಸೂಚನೆ ಕೊಟ್ಟಿದ್ದಾರೆಂದು ನನಗೆ ತಿಳಿದು ಬಂದಿದೆ. ಈ ರೀತಿಯಾಗಿ ನಿಮ್ಮಲ್ಲಿ ಒಬ್ಬರನ್ನು ಕಿತ್ತುಹಾಕುವುದು ಇನ್ನೊಬ್ಬರನ್ನು ತೆಗೆದುಕೊಳ್ಳುವುದು ಹೀಗೆ ಮಾಡುವುದರಿಂದ ಇನ್‌ಸ್ಟೆಬಿಲಿಟಿ ನಿಮ್ಮಲ್ಲಿ ಆಗುತ್ತದೆ. ಇದನ್ನು ನೀವು ಸರಿ ಮಾಡಿಕೊಳ್ಳದಿದ್ದರೆ ನಮ್ಮ ರಾಜ್ಯ ಹಾಳಾಗುತ್ತದೆ. ಮುಂದೆ ಇಲ್ಲೂ ಕೂಡ

(ಶ್ರೀ ಎಂ. ಎಸ್. ಕೃಷ್ಣನ್)

ಗುಜರಾತಿನಂತೆ ಆದರೂ ಆಗಬಹುದು, ಬೀದಿಗಳಲ್ಲಿ ಮಂತ್ರಿಗಳು ಬಂದರೆ ಅಟ್ಟಿಸಿಕೊಂಡು ಹೊಡೆಯಬಹುದು ಚಪ್ಪಲಿ ಹಾರಗಳನ್ನೂ ಹಾಕಬಹುದು. ಅಂತಹ ಪರಿಸ್ಥಿತಿಗೆ ಅವಕಾಶ ಮಾಡಿ ಕೊಡಬೇಡಿ ಎಂದು ನಾನು ಸಲಹೆ ಮಾಡುವುದು. ಆಡಳಿತ ಪಕ್ಷದವರು ಹೋಗುತ್ತಿರುವ ದಾರಿ ಸರಿಯಾದುದಲ್ಲ. ಇದಕ್ಕಾಗಿ ನಾನು ಇಷ್ಟು ವಿಚಾರಗಳನ್ನು ಸರಕಾರದ ಗಮನಕ್ಕೆ ತರಬೇಕಾಗಿ ಬಂತು. ನಾನು ಹೆಚ್ಚು ಕಾಲ ತೆಗೆದುಕೊಂಡಿದ್ದಕ್ಕಾಗಿ ಅಧ್ಯಕ್ಷರು ಕ್ಷಮಿಸಬೇಕು ಮತ್ತು ಇಷ್ಟು ಮಾತಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಉತ್ತರಹಳ್ಳಿ).—ಮಾನ್ಯ ಅಧ್ಯಕ್ಷರೇ, ನನ್ನ ವಿಚಾರದಲ್ಲಿ ಮಂತ್ರಿಯಾಗಿದ್ದಾಗ ಕೆಲಸ ಮಾಡಿದ ವಿಚಾರದಲ್ಲಿ ಶ್ರೀಮಾನ್ ದೇವೇಗೌಡರವರು ಹಾಗೂ ಶ್ರೀಮಾನ್ ಕೃಷ್ಣನ್‌ರವರು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಆಗ ಕೆಲಸ ಮಾಡಿರತಕ್ಕದ್ದು ನಮ್ಮ ಕಾಂಗ್ರೆಸ್ಸು ಪಕ್ಷದ ಒಬ್ಬ ಸದಸ್ಯನಾಗಿ ಮಾಡಿದ್ದೇನೆ ಮತ್ತು ನಮ್ಮ ಮಂತ್ರಿಮಂಡಲದ ಪರವಾಗಿ ಮಾಡಿದ್ದೇನೆ. ವೈಯುಕ್ತಿಕವಾಗಿ ನನಗೆ ಯಾವ ಗೌರವವೂ ಬೇಕಿಲ್ಲ. ನನ್ನ ಕೆಲಸದಿಂದ ಏನಾದರೂ ಜನ ಸಂತೋಷಪಟ್ಟಿದ್ದರೆ ನನಗೆ ಅಷ್ಟೇ ಸಂತೋಷ. ಅವರಿಗೆ ಮೆಚ್ಚಿಗೆಯಾಗುವಂತೆ ಆಗಿದ್ದರೆ ಅದರಿಂದ ದೇಶಕ್ಕೂ ಮೆಚ್ಚಿಗೆಯಾದಂತಾಗುತ್ತದೆ. ಇಷ್ಟು ಹೇಳಿ ಆಯುವ್ಯಯದ ಪಟ್ಟಿಯ ಬಗ್ಗೆ ಮಾತಾಡಲು ಇಚ್ಛಿಸುತ್ತೇನೆ. ಇದರ ಅಂಕೆ ಅಂಶಗಳನ್ನು ನನ್ನ ಸ್ನೇಹಿತರು ಹಲವಾರು ಸದಸ್ಯರು ಇಲ್ಲಿ ಆಗಲೇ ಹೇಳಿದ್ದಾರೆ. ಆದಾಯ ಎಷ್ಟು ಬರಬೇಕು ? ಎಷ್ಟು ಖರ್ಚು ಮಾಡಬೇಕು ಮತ್ತು ಎಷ್ಟು ತೆರಿಗೆ ಹಾಕಬೇಕು ಮತ್ತು ಹಾಗೆ ಹಾಕುವುದರ ಔಚಿತ್ಯ ಮತ್ತು ಅನೌಚಿತ್ಯಗಳ ಬಗೆಗೆ ಬಹಳ ದೀರ್ಘವಾದ ಭಾಷಣಗಳನ್ನೂ ಮಾಡಿದ್ದಾರೆ. ನಾನು ಇದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ವಿಷಯವನ್ನು ನಾನು ಇಲ್ಲಿ ಸ್ಪಷ್ಟಪಡಿಸಬೇಕೆಂದು ನನ್ನ ಇಚ್ಛೆ. ಆಯುವ್ಯಯದ ಪಟ್ಟಿಯನ್ನು ತಯಾರುಮಾಡುವುದಕ್ಕೆ ಮುಂಚಿತವಾಗಿ ನಾಲ್ಕು ಜನ ಮಂತ್ರಿಗಳು ಮತ್ತು ಇಬ್ಬರು ಸ್ಟೇಟು ಸಚಿವರು ರಾಜಿನಾಮೆ ಕೊಟ್ಟಿದ್ದಾರೆ. (ಈಗ ನಿವೃತ್ತರಾಗಿರುವವರು) ಹೋದವರು ಅವರ ಸ್ಥಾನದಲ್ಲಿಯೇ ವಾಸವಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಆಯುವ್ಯಯದ ಪಟ್ಟಿಯನ್ನು ತಯಾರು ಮಾಡಲಾಗಿದೆ. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಘೋರ್ಪಡೆಯವರು ಒಂದು ಪುಟ್ಟ ರಾಜವಂಶಕ್ಕೆ ಸೇರಿದವರು. ಅವರು ತನಗೆ ತಿಳಿದಂತೆ ಸಮಾಜವಾದಿ ಸಮಾಜವನ್ನು ಕಟ್ಟಲು ಈ ಒಂದು ಆಯುವ್ಯಯ ಪಟ್ಟಿಯನ್ನು ತಯಾರು ಮಾಡಿದ್ದಾರೆ. ಮುಖ್ಯವಾಗಿ ಬ್ಯೂರೋಕ್ರಸಿ ಎಂದು ಏನು ಹೇಳುತ್ತೇನೆ ಅಂತಹ ಒಂದು ಅಧಿಕಾರಶಾಹಿ ವರ್ಗದವರು ಜಾಣ್ಮೆಯಿಂದ ಈ ಆಯುವ್ಯಯ ಪಟ್ಟಿಯನ್ನ ಸಂಪ್ರದಾಯಬದ್ಧವಾಗಿ ತಯಾರು ಮಾಡಿದ್ದಾರೆ. ಆಯುವ್ಯಯಪಟ್ಟಿಯನ್ನು ಇಂಥಹ ಸನ್ನಿವೇಶದಲ್ಲಿ ತಯಾರು ಮಾಡಲಾಗಿದೆ. ಇದರಲ್ಲಿ ಅಲ್ಲಿ ಇಲ್ಲಿ ನ್ಯೂನತೆಗಳು ಇರುವುದು ಸಹಜ. ವಿರೋಧಪಕ್ಷದವರು ಸ್ವೇಚ್ಛೆಯಾಗಿ ಟೀಕೆ ಮಾಡುವುದು ಸರಿಯೇ ಎಂಬುದು ನಮ್ಮ ಮುಂದೆ ಇರುವ ಪ್ರಶ್ನೆ.

ಶ್ರೀ ಎಂ. ಎಸ್. ಕೃಷ್ಣನ್.—ಆಗ ಮಾನ್ಯ ಸಚಿವರು ಬ್ಯೂರಾಕ್ರಸಿ ಮಂತ್ರಿಗಳಾಗಿರಲಿಲ್ಲ ಎಂತಲೋ ಹೀಗೆ ಹೇಳುತ್ತಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ಕಮ್ಯೂನಿಸ್ಟು ಪಾರ್ಟಿ ಹಾಗೂ ಕಾಂಗ್ರೆಸ್ ಪಾರ್ಟಿಗಳಲ್ಲೂ ಎಲ್ಲ ತರಹ ಜನಗಳೂ ಇರುತ್ತಾರೆ. ಕಮ್ಯುನಿಸ್ಟು ಪಾರ್ಟಿಯಲ್ಲೂ ಮಹಾರಾಜರುಗಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಯಾರು ರಾಜರಿದ್ದಾರೋ ನನಗೆ ಗೊತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈ ಹಿನ್ನೆಲೆಯಲ್ಲಿ ಮಾನ್ಯ ವಿರೋಧಪಕ್ಷದ ಸದಸ್ಯರು ಉಗ್ರವಾಗಿ ಟೀಕೆ ಮಾಡುವುದಕ್ಕೆ ಹೋಗಬಾರದು. ನಮ್ಮ ಕಾಂಗ್ರೆಸ್ ಪಕ್ಷದವರು ನಿಷ್ಠೆಯಿಂದ ತಮ್ಮ ಎಲ್ಲ ಕಾರ್ಯಕ್ರಮಗಳನ್ನೂ ಜಾರಿ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಜನರ ಬೆಂಬಲ ನಮ್ಮ ಪಕ್ಷಕ್ಕೇ ವಿನಃ ಬೇರೆ ಪಕ್ಷಕ್ಕೆ ಇಲ್ಲ ಎಂದು ಸ್ಪಷ್ಟಪಡಿಸುತ್ತಿದ್ದೇನೆ. ಇದಕ್ಕೆ ಉದಾಹರಣೆ ಕೊಡುವುದಾದರೆ, ಮೊನ್ನೆ ಪಾಂಡಿಚೆರಿಯಲ್ಲಿ ನಡೆದ ಚುನಾವಣೆಯಲ್ಲಿ ಎರಡು ಕಾಂಗ್ರೆಸ್‌ನವರು ಒಂದು ಒಪ್ಪಂದ ಮಾಡಿಕೊಂಡಿದ್ದರೂ ಸಹ ಕಾಂಗ್ರೆಸ್ 'ಒ' ಪಾರ್ಟಿಯಿಂದ 3 ಜನರು ಮಾತ್ರ ಆರಿಸಿ ಬಂದರು, ಉಳಿದವರು ನಮ್ಮ ಕಾಂಗ್ರೆಸ್ ಪಕ್ಷದಿಂದ ಆರಿಸಿ ಬಂದರು. ಆದಕಾರಣ ಜನರ ಒಲವು ನಮ್ಮ ಪಕ್ಷದ ಕಡೆಗೆ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿಯಾಗಿ ಒಪ್ಪಂದ ಮಾಡಿಕೊಳ್ಳದೆ ಬೇರೆ ಬೇರೆಯಾಗಿ ಚುನಾವಣೆಯಲ್ಲಿ ಭಾಗವಹಿಸಿದ್ದರೆ ಯಾರೂ ಸಹ ಆರಿಸಿ ಬರುತ್ತಿರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಜನರ ಸೇವೆ ಮಾಡಬೇಕು, ಜನರಿಗೆ ಒಳ್ಳೆಯ ಅನುಕೂಲಗಳನ್ನು ಕಲ್ಪಿಸಿಕೊಡಬೇಕು ಎಂಬ ಇಚ್ಛೆ ಯಾವ ಪಕ್ಷಕ್ಕಾದರೂ ಇದ್ದರೆ, ಅದು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಇದೆ ಎಂದು ನನಗನ್ನಿಸುತ್ತದೆ. ನಾನು ಮಂತ್ರಿಮಂಡಲದಲ್ಲಿ ಇರಬಹುದು, ಅಥವಾ ಇಲ್ಲದಿರಬಹುದು; ಅದು ಅಷ್ಟು ಮುಖ್ಯವಲ್ಲ; ಮಂತ್ರಿಗಳಾಗಿ ಕೆಲಸ ಮಾಡುವ ಉತ್ಸುಕತೆ, ಶಕ್ತಿ ಮತ್ತು ಸಾಮರ್ಥ್ಯ ಕೆಲವರಿಗೆ ಇರುತ್ತದೆ, ಕೆಲವರಿಗೆ ಇರುವುದಿಲ್ಲ; ಆದರೆ ನಮ್ಮ ಪಾರ್ಟಿ ಈಗ ಸರ್ಕಾರ ನಡೆಸುತ್ತಿರುವುದರಿಂದ, ನಮ್ಮ ಪಾರ್ಟಿಯಲ್ಲಿರುವವರ ಪೈಕಿ ಯಾರನ್ನಾದರೂ ಮಂತ್ರಿಗಳನ್ನಾಗಿ ಮಾಡುತ್ತೇವೆ; ಅವರು ಏನಾದರೂ ಸರಿಯಾಗಿ ಕೆಲಸ ಮಾಡದಿದ್ದರೆ, ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಅವರನ್ನು ಹಿಂದಕ್ಕೆ ಕರೆಸಿ, ಅವರ ಜಾಗಕ್ಕೆ ದಕ್ಷರನ್ನು ಇಟ್ಟು ಕೆಲಸ ಮಾಡಿಸುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಾರರ್ಮ್ಸ್ ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ಮಂತ್ರಿಗಳಿಗೆ ಹೇಳಿದರೆ ಚೆನ್ನಾಗಿರುತ್ತದೆ. ಆದರೆ ಇವರಲ್ಲಿ ನಾರರ್ಮ್ಸ್ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಯಾರು ಮಂತ್ರಿಗಳಾಗಿರುತ್ತಾರೆ, ಯಾರು ಆಗಿರುವುದಿಲ್ಲ ಎಂಬ ಕಡೆಗೆ ಮಾನ್ಯ ಸದಸ್ಯರ ಮನಸ್ಸು ಅಷ್ಟಾಗಿ ಹರಿಸಬಾರದು. ನಾನು ಎರಡು ಸಲ ಮಂತ್ರಿಯಾಗಿದ್ದೆ; ಆ ಒಂದು ಅನುಭವದಿಂದ ಹೇಳುವುದಾದರೆ, ಈ ಅಧಿಕಾರ ವರ್ಗದವರು ಏನಿದ್ದಾರೆ, ಅವರು ಜನರ ಕಷ್ಟಕ್ಕೆ ವಿರುದ್ಧವಾಗಿ ನಡೆಯುವ ಮನೋಭಾವವನ್ನು ಹೊಂದಿದ್ದಾರೆ. ನೂರಕ್ಕೆ ನೂರರಷ್ಟು ಅಧಿಕಾರ ವರ್ಗದವರು ಈ ಮನೋಭಾವನೆ ಹೊಂದಿದ್ದಾರೆಂದು ನಾನು ಹೇಳುವುದಿಲ್ಲ; ಆದರೆ ಬಹುಭಾಗದ ಅಧಿಕಾರಿಗಳಿಗೆ ಜನರ ಸೇವೆ ಮಾಡಬೇಕು, ಸರ್ಕಾರ ಏನು ಉದ್ದೇಶ ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಹೊರಟಿದೆ, ಅದನ್ನು ಕಾರ್ಯಗತ ಮಾಡಬೇಕು, ಮತ್ತು ಅದನ್ನು ನಿಗದಿಯಾದ ವೇಳೆಯಲ್ಲಿ ಮುಗಿಸಬೇಕು ಎಂಬ ಇಚ್ಛೆ ಇಲ್ಲ. ಸರ್ಕಾರದ ಕೆಲಸಗಳನ್ನು ಅಭಿಮಾನದಿಂದ ಮತ್ತು ನಿಷ್ಠೆಯಿಂದ ಜಾರಿಗೆ ತರುವ ಬಗ್ಗೆ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಸಹ ಇದ್ದಾರೆ. ಆದರೆ ಸರ್ವೇಸಾಮಾನ್ಯವಾಗಿ ನೋಡುವುದಾದರೆ, ಪ್ರಜೆಗಳ ವಿರುದ್ಧವಾಗಿ ಏನಾದರು ಕೆಲಸ ಮಾಡಿ, ಆಳುವ ಪಕ್ಷಕ್ಕೆ ಕೆಟ್ಟ ಹೆಸರು ತಂದು ಆ ಪಾರ್ಟಿಯ ಆಡಳಿತವನ್ನು ಬದಲಾಯಿಸಬೇಕೆಂಬ ಮನೋಭಾವ ಇರುವವರೇ ಬಹಳ ಮಂದಿ ಇದ್ದಾರೆ. ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳ ಮೇಲಾದರೂ ಸಹ ನಾವು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ನೋಡಿದರೆ ಅಲ್ಲಿಯ ಜನರು ದಿವಸಕ್ಕೆ ಸರಾಸರಿ 40 ಪೈಸೆಗೂ ಕಡಿಮೆ ಕೂಲಿ ತೆಗೆದುಕೊಂಡು ಕೆಲಸ ಮಾಡಿ ಜೀವನ ಮಾಡುತ್ತಿರುವುದನ್ನು ನೋಡಬಹುದಾಗಿದೆ. ಅವರ ಮಕ್ಕಳುಮರಿಗಳು ಹಂದಿ ನಾಯಿಗಳಂತೆ ಜೀವಿಸುತ್ತಿದ್ದಾರೆ. ಈ ಬಡಜನರು ಒಂದು ರೀತಿಯ ತುಳಿತಕ್ಕೆ ಸಿಕ್ಕಿ ನರಳುತ್ತಿದ್ದಾರೆ. ಇವರುಗಳನ್ನು ಮುಂದೆ ತರಬೇಕೆಂದು ಇಲ್ಲಿಯವರೆಗೆ ಆಡಳಿತ ನಡೆಸಿದ ಸರ್ಕಾರಗಳು ಒಳ್ಳೆಯ ಸದುದ್ದೇಶದಿಂದ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತರುವಾಗ ಮಧ್ಯಸ್ಥಗಾರರು ಮತ್ತು ಈ ಅಧಿಕಾರ ವರ್ಗದವರು ಸೇರಿಕೊಂಡು ಯಾವ ಒಂದು ಅನುಕೂಲಗಳು ಅವರಿಗೆ ಸಿಕ್ಕದಂತೆ ಮಾಡಿದ್ದಾರೆ. ಈ ಕಾರಣದಿಂದಲೇ ಕ್ಯೂಬಾ ದೇಶದ ಪ್ರಧಾನಮಂತ್ರಿ ಫಿಡಲ್ ಕ್ಯಾಸ್ಟ್ರೋ ಹೀಗೆ ಹೇಳಿದ್ದಾನೆ:—

> "I do not want to give direct democracy to the people because the middle men will eat away what is intended for the people."

ಬಡವರಿಗೆ ಸಿಕ್ಕುವ ಅನುಕೂಲಗಳನ್ನು ಮಧ್ಯಸ್ಥಗಾರರು ಹೊಡೆದುಕೊಂಡು ಹೋಗುವ ಕಾರಣ ನೇರವಾದ ಪ್ರಜಾಪ್ರಭುತ್ವವನ್ನು ಕೊಡುವುದಿಲ್ಲ ಎಂದು ಆತ ಹೇಳಿದ. ಕಳೆದ 25 ವರ್ಷಗಳಿಂದ ಆಡಳಿತ ನಡೆಸಿದವರು ಜನಸಾಮಾನ್ಯರಿಗೆ ಅನುಕೂಲ ಮಾಡಬೇಕೆಂದು ಇಷ್ಟಪಟ್ಟಿದ್ದರೂ ಸಹ ಈ ಅಧಿಕಾರ ವರ್ಗದವರಿಂದ ಮತ್ತು ಮಧ್ಯಸ್ಥಗಾರರಿಂದ ಅದು ಕಾರ್ಯರೂಪಕ್ಕೆ ಬರದೆ ಅವರ ಸ್ಥಿತಿ ಅದೇ ರೀತಿ ಮುಂದುವರೆದುಕೊಂಡು ಬಂದಿದೆ. ಇದರಿಂದ ಇಂದು ಕೆಲವೇ ಜನರು ಭೋಗಜೀವನ ಮಾಡುವುದಕ್ಕೆ ಅವಕಾಶವಾಗಿದೆ. ಸುಲಭವಾದ ಜೀವನ ಮಾಡುವುದಕ್ಕೆ ಕೆಲವರು ಹೊರಟಿದ್ದಾರೆ. ಎಲ್ಲ ಸಂಪತ್ತನ್ನು ಕೆಲವೇ ಜನರು ತಮ್ಮ ಕೈಯಲ್ಲಿ ಇಟ್ಟುಕೊಂಡು ವ್ಯವಹಾರ ನಡೆಸುತ್ತಿದ್ದಾರೆ. ಸರ್ಕಾರದವರು ಉದ್ದೇಶಪಟ್ಟಿದ್ದನ್ನು ಅಧಿಕಾರವರ್ಗದವರು ಕಾರ್ಯಗತ ಮಾಡಿದ್ದಾರೆ ಈ ಬಡಜನರು ಇಂದು ಇಷ್ಟೊಂದು ಕಷ್ಟಪಡಬೇಕಾಗಿರಲಿಲ್ಲ; ಮತ್ತು ಅವರ ಒಂದು ಕಷ್ಟಗಳು

(ಶ್ರೀ ಬಿ. ಬಸವಲಿಂಗಪ್ಪ)

ಸಲೀಸಾಗಿ ಪರಿಹಾರವಾಗುತ್ತಿದ್ದವು ಎಂದು ನನಗನ್ನಿಸುತ್ತದೆ. ಈ ಅಧಿಕಾರ ವರ್ಗದವರ ತಪ್ಪನ್ನು ನಾವು ತಿಳಿದುಕೊಳ್ಳದೆ, ಅಧಿಕಾರದಲ್ಲಿರುವ ರಾಜಕೀಯ ಪಕ್ಷದವರನ್ನು ಅಧಿಕಾರದಲ್ಲಿರು ತ್ತಾರೋ, ನೇರವಾಗಿ ಟೀಕೆ ಮಾಡುವುದನ್ನು ನಾವು ಬೆಳೆಸಿಕೊಂಡು ಬಂದಿದ್ದೇವೆ. ಇದರ ಜೊತೆಗೆ ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ ನಾವುಗಳು ಯಾರೂ ಕಠಿಣವಾಗಿ ವರ್ತನೆ ಮಾಡುತ್ತಿಲ್ಲ. ಈ ಕಾರಣದಿಂದಲೇ ಅಧಿಕಾರವರ್ಗದವರು ಇವರು ಏನು ಮಾಡುತ್ತಾರೆಯೇ ನೋಡೋಣ ಎಂದು ಹೇಳುತ್ತಿದ್ದಾರೆ. ಇವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ ಅವರು ರಾಜ್ಯಾಂಗದಲ್ಲಿರುವ 311ನೇ ಕಲಮನ್ನು ತೋರಿಸುತ್ತಾರೆ. ಅಂದರೆ ಅವರನ್ನು ಸಸ್ಪೆಂಡ್ ಮಾಡಬೇಕಾದರೆ ಅಥವಾ ಡಿಸ್‌ಮಿಸ್ ಮಾಡಬೇಕಾದರೆ ನೋಟೀಸ್ ಕೊಡಬೇಕಾಗು ತ್ತದೆ. ಈ ಒಂದು ಕಲಮನ್ನು ತಿದ್ದುಪಡಿ ಮಾಡುವುದಕ್ಕೆ ಇನ್ನೂ ಪ್ರಯತ್ನ ಮಾಡಲಿಲ್ಲ ; ಭ್ರಷ್ಟ ಅಧಿಕಾರಿಗಳ ವಿರುದ್ಧ, ದೇಶದ ಜನರ ಹಿತದ ವಿರುದ್ಧ ನಡೆಯುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ ಏನು ಕೆಲಸ ಮಾಡಿದ್ದೇವೆ ? ಇಂದು ಈ ಭ್ರಷ್ಟ ಅಧಿಕಾರಿಗಳು ಲಂಚ ರುಷುವತ್ತುಗಳನ್ನು ತೆಗೆದುಕೊಂಡು ಜೀವನ ಮಾಡುತ್ತಿದ್ದಾರೆ. ಸುಖಭೋಗ ಜೀವನ ಮಾಡುತ್ತಿ ದ್ದಾರೆ. ಅವರ ಸಂಬಳಕ್ಕಿಂತ ಜಾಸ್ತಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇಂತಹವರ ವಿರುದ್ಧ ನಾವು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ; ಉದಾಹರಣೆಗೆ ಹೇಳುವುದಾದರೆ ಅಸಿಸ್ಟೆಂಟ್ ಇಂಜಿನಿಯರುಗಳು, ಸಬ್-ಓವರ್‌ಸಿಯರ್‌ಗಳು ಚೀಫ್-ಇಂಜಿನಿಯರ್‌ಗಳು, ಕಂಟ್ರಾಕ್ಟರ್‌ಗಳೇ ಮೊದಲಾದವರು ಇಂದು ಪ್ಯಾಲೇಸ್-ಆರ್ಚರ್ಡ್‌ನಲ್ಲಿ 2-3 ಲಕ್ಷ ರೂಪಾಯಿ ಬೆಲೆ ಬಾಳುವ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇಂದು ಬರುವ ಸಂಬಳದಲ್ಲಿ ಜೀವನ ಮಾಡುವುದೇ ಕಷ್ಟವಾಗಿರುವಾಗ ಇಂತಹ ಅಧಿಕಾರಿಗಳು ಎರಡು ಮೂರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಎರಡು ಮೂರು ಕಾರುಗಳನ್ನು ಇಟ್ಟುಕೊಂಡಿದ್ದಾರೆ. ಭೋಗ ಜೀವನ ಮಾಡುತ್ತಿದ್ದಾರೆ. ಇದನ್ನು ನಾವು ಸಹಿಸಿಕೊಂಡು ಬಂದಿಲ್ಲವೇನು ? ಮುಖ್ಯವಾಗಿ ನಾನು ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಇನ್ನು ಮುಂದೆ ಮಂತ್ರಿಗಳ ಬಗ್ಗೆ ಟೀಕೆ ಮಾಡುವುದನ್ನು ಬಿಟ್ಟು ಅಧಿಕಾರವರ್ಗದವರ ಕಡೆಗೆ ಹೆಚ್ಚು ಗಮನಕೊಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕೆಲವು ಜನ ಮಂತ್ರಿಗಳು ಇಂತಹ ಅಧಿಕಾರಿಗಳನ್ನೇ ವಸೂಲಿ ಏಜೆಂಟರನ್ನಾಗಿ ಇಟ್ಟುಕೊಂಡರೆ ಏನು ಮಾಡುವುದು ?

ಶ್ರೀ ಬಿ. ಬಸವಲಿಂಗಪ್ಪ.-ಯಾರು ತಪ್ಪು ಮಾಡಿದರೂ ತಪ್ಪೇ, ಅಪರಾಧ ಅಪರಾಧವೇ ಆಗುತ್ತ ದೆಂದು ನಾನು ಮಾನ್ಯ ಪುಟ್ಟಸ್ವಾಮಯ್ಯನವರ ಜೊತೆಗೆ ಧ್ವನಿ ಸೇರಿಸಿ ಹೇಳುತ್ತೇನೆ. ಲಂಚರುಷು ವತ್ತುಗಳನ್ನು ಅಧಿಕಾರಿಗಳೇ ತೆಗೆದುಕೊಳ್ಳಲಿ, ಮಂತ್ರಿಗಳೇ ತೆಗೆದುಕೊಳ್ಳಲಿ, ಅಥವಾ ಸದಸ್ಯರೇ ತೆಗೆದುಕೊಳ್ಳಲಿ, ಯಾರು ತೆಗೆದುಕೊಂಡರೂ ಭ್ರಷ್ಟಾಚಾರಿಗಳಾಗುತ್ತಾರೆ ಈ ಲಂಚಗುಳಿತನ ಎಂಬುದು ಎಲ್ಲಿಯವರೆಗೆ ಈ ದೇಶದಲ್ಲಿ ಹೋಗುವುದಿಲ್ಲ ಅಲ್ಲಿಯವರೆಗೆ ನಾವು ಬಡ್ಜೆಟ್ ಮೇಲೆ ಭಾಷಣ ಮಾಡಿದರೆ ಅದರಿಂದ ಏನು ಉಪಕಾರವಾಗುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ತಮಗೆ ಹೆಸರುಗಳು ಗೊತ್ತಿದ್ದರೆ ಹೇಳಿ.

ಇದು ನನ್ನ ಒಬ್ಬನ ಜವಾಬ್ದಾರಿಯೇ ಅಲ್ಲ. ಎಲ್ಲರ ಜವಾಬ್ದಾರಿಯೂ ಇದೆ. ಬಡವರಿಗೆ ಹೋಗುವಂತಹ ಹಣ ಮತ್ತು ಬಡವರಿಗೆ ಹೋಗತಕ್ಕಂಥಾ ಅನುಕೂಲತೆಗಳನ್ನು ಕೆಲವೇ ಜನ ತಿಂದು ಭೋಗ ಜೀವನ ಮಾಡತಕ್ಕವರು ಇದ್ದಿದ್ದರೆ ಆ ಜನರನ್ನು ಹಿಡಿದು ಕಿತ್ತು ಹಾಕುವುದಕ್ಕೆ ಪ್ರಯತ್ನ ಮಾಡದೇ ಹೋದರೆ ಜನಗಳಿಗೆ ಅನುಕೂಲ ಮಾಡುತ್ತೇವೆ ಎಂದು ಹೇಳುವುದು ಬರೀ ಬೂಟಾಟಿಕೆಯ ಮಾತಾಗುತ್ತದೆ. ಸಾಮಾನ್ಯ ಜನಗಳಿಗೆ ಬಡ ಜನಗಳಿಗೆ ಸಿಕ್ಕುವಂತಹ ಅನು ಕೂಲತೆಗಳನ್ನು ಸೌಲಭ್ಯಗಳನ್ನು ಕೆಲವೇ ಜನಗಳು ತಿನ್ನುವಂತಹ ಪ್ರಯತ್ನ ಮಾಡಿದಾಗ ನಾವು ನೀವು ಎಲ್ಲರೂ ಸೇರಿ ಅದನ್ನು ತಪ್ಪಿಸದೇ ಹೋದರೆ ಈ ದೇಶದಲ್ಲಿ ಜನಗಳಿಗೆ ಅನುಕೂಲ ಮಾಡ ಬೇಕು ಎಂದು ಎಷ್ಟೇ ಪ್ರಯತ್ನ ಮಾಡಿದರೂ ಅದು ಹೇಗೆ ಆದೀತು? ಆದ್ದರಿಂದ ನಮ್ಮ ಜವಾಬ್ದಾರಿ ಬಹಳ ಅತೀವವಾಗಿದೆ. ಎಲ್ಲಿ ಇಂಥಾ ಒಂದು ಭ್ರಷ್ಟಾಚಾರ ಕಾಣುತ್ತದೆ, ಅವ್ಯವಹಾರ ಕಾಣುತ್ತದೆ, ಲಂಚಗುಳಿತನ ಕಾಣುತ್ತದೆ ; ಆಗ ಎಲ್ಲರೂ ಕೂಡಿಕೊಂಡು ನಿರ್ದಾಕ್ಷಿಣ್ಯವಾಗಿ ಲಂಚ ತೆಗೆದುಕೊಂಡ ಅಧಿಕಾರಿ ಅಧಿಕಾರದಲ್ಲಿರುವುದಕ್ಕೆ ಲಾಯಕ್ಕಿಲ್ಲ ನಾಲಾಯಕ್ ಎಂದು ಹೇಳತಕ್ಕಂಥಾ ಕೆಚ್ಚು ಎದೆ

ತಮಗೆಲ್ಲರಿಗೂ ಬರಬೇಕು. ಆದ್ದರಿಂದ ಇನ್ನು ಮೇಲೆ ದೇಶದ ಹಿತಕ್ಕೆ ವಿರೋಧವಾಗಿ ಕೆಲಸ ಮಾಡುವ, ಭೋಗ ಜೀವನ ಮಾಡುವ ಅಧಿಕಾರಿಗಳ ಬಗ್ಗೆ ಟೀಕೆ ಮಾಡುವುದು ಅಲ್ಲ ಅವನ್ನು ತಡೆಗಟ್ಟುವುದಕ್ಕೆ ನಾವು ನೀವು ಇಬ್ಬರೂ ಸೇರಿ ಪ್ರಯತ್ನ ಮಾಡಿದರೆ ಎಲ್ಲವೂ ಸರಿಹೋಗುತ್ತದೆ.

ಶ್ರೀ ಟಿ. ಎಂ. ಮಂಜನಾಥ್.—ನಿಮಗೆ ಆದ ಹಾಗೆ ನಮಗೂ ಆಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನನಗೆ ಏನೂ ಆಗಿಲ್ಲ. ನಾನೊಬ್ಬ ಕರ್ಮಯೋಗಿ, ಸಮಾಜವಾದಿ, ಸಮಾಜದ ಕಾರ್ಯಕರ್ತ ಎಂದು ನಾನು ಹೇಳಿದ್ದೇನೆ. ನಾನು ಹೇಳುವುದು ಕೆಲವರಿಗೆ ಪ್ರಿಯವಾಗಬಹುದು, ಕೆಲವರಿಗೆ ಅಪ್ರಿಯವಾಗಬಹುದು. ಅದು ಅಪ್ರಿಯವಾಗುವವರಿಗೆ ನಾನು ಸಮಾಧಾನ ಮಾಡುವುದಕ್ಕೆ ಬಂದಿಲ್ಲ. ನಾನು ಏನಾದರೂ ಒಂದು ಕೆಲಸ ಮಾಡಿದರೆ ಅದು ನನ್ನ ಆತ್ಮಕ್ಕೆ ಮೆಚ್ಚಿಗೆಯಾಗಬೇಕು, ಸಮಾಜಕ್ಕೆ ಮೆಚ್ಚಿಗೆಯಾಗಬೇಕು. ರಾಜ್ಯಾಂಗದಲ್ಲಿರತಕ್ಕ ನಿರ್ದೇಶಕ ತತ್ವಗಳು ಕಲಮು 36 ರಿಂದ 51ರ ವರೆಗೆ ಇರತಕ್ಕ ಕಲಮುಗಳು ಏನಿವೆ ಆ ಕಲಮುಗಳು ಸಮಾಜವಾದವನ್ನು ಸೃಷ್ಟಿ ಮಾಡತಕ್ಕ ಕಲಮುಗಳು ಅವುಗಳನ್ನು ಯಾರೂ ಸರಿಯಾಗಿ ನೋಡುತ್ತಿಲ್ಲ, ಅವುಗಳನ್ನು ಅಧಿಕಾರವರ್ಗದವರೂ ಓದುತ್ತಿಲ್ಲ, ರಾಜ್ಯಭಾರ ನಡೆಸತಕ್ಕವರೂ ಓದುತ್ತಿಲ್ಲ. ಎರಡು ವರ್ಷಗಳ ಕಾಲ ನಾನು ಮಂತ್ರಿಯಾಗಿದ್ದೆ. ಆ ಕಾಲದಲ್ಲಿ ನನ್ನ ಅನುಭವವನ್ನು ಹೇಳಬೇಕು ಎಂದರೆ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಏನಿದೆ ಅದರಲ್ಲಿ ಅಡಕವಾಗಿರತಕ್ಕ ಪ್ರಾಶಸ್ತ್ಯ ಮತ್ತು ಕಲ್ಯಾಣ ಕಾರ್ಯಕ್ರಮ ಏನಿವೆ ಆ ಕಾರ್ಯಕ್ರಮಗಳ ಬಗ್ಗೆ ನಾನು ಓದಿ ತಿಳಿದುಕೊಂಡಿದ್ದೇನೆ. ಆಡಳಿತದಲ್ಲಿ ಅವನ್ನು ಅಳವಡಿಸಿಕೊಂಡು ಮಾಡತಕ್ಕಂಥಾ ಮನೋಭಾವ ಇರತಕ್ಕವರು ಬಹಳ ಕಡಿಮೆ. ನಾವೇನಾದರೂ ಹೇಳಿದರೆ ಅದನ್ನು ಮಾಡಬೇಕು ಎನ್ನುವ ಮನೋಭಾವ ಇರುವವರು ಕಡಿಮೆ. ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಏನಿದೆ ಅದರಲ್ಲಿ 47—49 ಕಲಮುಗಳನ್ನು ಬಿಟ್ಟರೆ ಉಳಿದ ಯಾವ ಕಲಮುಗಳನ್ನೂ ಸ್ಪಷ್ಟವಾಗಿ ಜಾರಿಗೆ ಕೊಟ್ಟಿಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. 49ನೇ ಕಲಂ ಪ್ರಕಾರ ಹಳೆಯ ಗುಡಿ ಗುಂಡಾರಗಳು, ಶಿಲಾಶಾಸನಗಳು ಏನಿವೆ ಇವುಗಳನ್ನು ಭೂಮಿ ಬಗೆದು ಹೊರಕ್ಕೆ ತೆಗೆದು ಪುನಃ ಪ್ರದರ್ಶನ ಮಾಡತಕ್ಕದ್ದು ಕಾನ್‌ಸ್ಟಿಟ್ಯೂಷನ್‌ನಲ್ಲಿದೆ. ಇದರ ಅವಶ್ಯಕತೆ ಜರೂರು ಏನಿದೆ! ಇದಕ್ಕೆ ಒಂದು ಇಲಾಖೆಯನ್ನು ಮಾಡಿ ಗುಡಿ ಗುಂಡಾರಗಳನ್ನು ಬಗೆದು ತೆಗೆಯುವುದಕ್ಕೆ ಹೊರಟಿದ್ದಾರೆ. ಕಾರ್ಮಿಕರ ಬಗ್ಗೆ, ಬಡವರ ಬಗ್ಗೆ, ಕೂಲಿಗಾರರ ಬಗ್ಗೆ ಏನು ರಾಜ್ಯಾಂಗದ ನಿರ್ದೇಶನ ತತ್ವಗಳು ಇವೆ ಅವುಗಳನ್ನು ಅಳವಡಿಸಿಕೊಂಡು ಮನಸ್ಸಿನಲ್ಲಿಟ್ಟುಕೊಂಡು ಬಡ್ಜೆಟ್ಟನ್ನು ತಯಾರು ಮಾಡುವ ಕಾಲದಲ್ಲಿ ಸರ್ಕಾರವನ್ನು ನಡೆಸುವವರು ಮನಸ್ಸಿನಲ್ಲಿ ಇಟ್ಟುಕೊಂಡು ನಡೆಸದೇ ಇರುವ ಒಂದು ಶೂನ್ಯತೆಯನ್ನು ನಾನು ಕಂಡಿದ್ದೇನೆ. ಆ ಬಗ್ಗೆ ನಾನು ಪ್ರಯತ್ನ ಮಾಡಿದ್ದೇನೆ. ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ಕಾನ್‌ಸ್ಟಿಟ್ಯೂಷನ್ ಏನಿವೆ ಅವುಗಳನ್ನು ಸಮಾಜವಾದೀ ಸಮಾಜವನ್ನು ಸೃಷ್ಟಿ ಮಾಡುವುದಕ್ಕೆ ಅಳವಡಿಸಿಕೊಂಡು ಕೆಲಸ ಮಾಡಬೇಕು ಎಂದು ನಾನು ಹೇಳಿದ್ದೇನೆ. ಆದರೆ ಅಧಿಕಾರ ವರ್ಗದವರು ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳತಕ್ಕಂಥಾ ಒಂದು ಮನೋಭಾವವನ್ನು ಪ್ರದರ್ಶನ ಮಾಡಿದ್ದಾರೆ. 25—30 ವರ್ಷಗಳಾದರೂ ನಾವು ಜನತೆಗೆ ಏನು ಅನುಕೂಲ ಮಾಡಲು ಸಾಧ್ಯವಾಗಿದೆ? ಒಂದು ಪಕ್ಷ ಅಧಿಕಾರದಲ್ಲಿರುತ್ತದೆ. ಇನ್ನೊಂದು ಕಡೆ ಖಾಯಂ ಆಗಿ ಅಧಿಕಾರ ವರ್ಗ, ರಾಜ್ಯಾಂಗದ ನಿರ್ದೇಶನಗಳನ್ನು ಜಾರಿಗೆ ಕೊಡದೆ ಭ್ರಷ್ಟಾಚಾರದಿಂದ ಜೀವನ ಮಾಡತಕ್ಕ ಅಧಿಕಾರ ಮಾಡುವ ಜನಗಳು ಬಹಳ ಇರುವಾಗ ನಾವು ಹೇಗೆ ಈ ಒಂದು ಸಮಾಜವಾದಿ ಸಮಾಜವನ್ನು ಸೃಷ್ಟಿ ಮಾಡಿ ಎಲ್ಲಾ ಜನಗಳ ಕಲ್ಯಾಣ ಸಾಧನೆ ಮಾಡುವುದಕ್ಕೆ ಆಗುತ್ತದೆ? ಇದನ್ನು ನಿರೀಕ್ಷಿಸುವುದು ಒಂದು ಭ್ರಾಂತಿ. ಇದನ್ನು ಸರಿಪಡಿಸುವುದು ಹೇಗೆ? ಇದನ್ನು ಕಾರ್ಯಾಚರಣೆಗೆ ತರತಕ್ಕಂಥಾ ಒಂದು ಹೊಸ ಕಾರ್ಯ ಇದೆ. ಅದನ್ನು ರಾಜ್ಯಪಾಲರು ಮಾಡಬೇಕು. 154ನೇ ಕಲಂ ಪ್ರಕಾರ ಎಲ್ಲಾ ಅಧಿಕಾರವೂ ರಾಜ್ಯಪಾಲರ ಕೈಯಲ್ಲಿ ಇರುತ್ತದೆ. ಸರ್ಕಾರದ ಎಲ್ಲಾ ಆಗುಹೋಗುಗಳು, ಹುಕುಂಗಳು ಏನಿವೆ ಅವು 166ನೇ ಕಲಂ ಪ್ರಕಾರ ಅವರ ಹೆಸರಿನಲ್ಲಿ ಪ್ರಕಟವಾಗಬೇಕು. ಎಂದರೆ ರಾಜ್ಯದ ಅಧಿಕಾರ ರಾಜ್ಯಪಾಲರಿಗೆ ಇರುತ್ತದೆ. ಸರ್ಕಾರದ ಅಧಿಕಾರ ನಿಜವಾಗಿಯೂ ಅವರಲ್ಲಿ ಅಡಕವಾಗಿದೆ. ಸರ್ವಾಧಿಕಾರಿ ಜನಗಳು ಯಾರನ್ನು ತಮ್ಮ ಪ್ರತಿನಿಧಿಗಳನ್ನಾಗಿ ಚುನಾವಣೆ ಮಾಡಿದ್ದಾರೆ, ನಂತರ ರಚಿಸಲ್ಪಟ್ಟ ಮಂತ್ರಿಮಂಡಲ ಮುಖ್ಯವೇ ವಿನಾ ರಾಜ್ಯಪಾಲರು ಮುಖ್ಯಸ್ಥರಲ್ಲ ಎಂದು ಕೆಲವರು ವಾದ ಮಾಡಿದ್ದಾರೆ. ಅಮೇರಿಕಾದಲ್ಲಿರತಕ್ಕ ಪರಿಸ್ಥಿತಿ ಏನಿದೆ ಅಂದರೆ ಅಧ್ಯಕ್ಷರು ಎಗ್ಸಿಕ್ಯುಟೀವ್ ಹೆಡ್ ಆಗಿದ್ದಾರೆ. ನಮ್ಮ ದೇಶದ ರಾಜ್ಯಾಂಗದ ಪ್ರಕಾರ ಅಧ್ಯಕ್ಷರು ಮತ್ತು ಗವರ್ನರ್‌ಗಳು ಘಟನಾತ್ಮಕ ಮುಖ್ಯರೂ ಮತ್ತು ಕಾರ್ಯಾಂಗದ ಮುಖ್ಯಸ್ತರೂ ಆಗಿದ್ದಾರೆ. ಈಗ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಏನಿದೆ ಅದನ್ನು ಅಳವಡಿಸಿಕೊಂಡು ಅದರ ಪ್ರಕಾರ ಯಾವ ಸರ್ಕಾರ

(ಶ್ರೀ ಬಿ. ಬಸವಲಿಂಗಪ್ಪ)

ನಡೆಯುವುದಿಲ್ಲ ಆಗ ಅದನ್ನು ನೆರವೇರಿಸುವುದಕ್ಕೆ ರಾಜ್ಯಪಾಲರು ಕೈಹಾಕಬೇಕು. ಆ ರೀತಿ ಅವರು ಕೈಹಾಕುವುದಕ್ಕೆ ರಾಜ್ಯಾಂಗದಲ್ಲಿ ಅವಕಾಶ ಇದೆ ಎಂದು ನನ್ನ ವಾದ. ಘಟನಾತ್ಮಕವಾದ ಮತ್ತು ಕಾರ್ಯಾಂಗದ ಅಧಿಕಾರ ರಾಜ್ಯಪಾಲರಲ್ಲಿ ಇದೆ. ಅದೇ ರೀತಿ ಕರ್ನಾಟಕ ರಾಜ್ಯಪಾಲರಿಗೂ ಅಧಿಕಾರ ಇದೆ. ಅದೇ ರೀತಿ ಕೇಂದ್ರ ಮಟ್ಟದಲ್ಲಿ ಅಧ್ಯಕ್ಷರಿಗೆ ಅಧಿಕಾರ ಇದೆ. ಆದ್ದರಿಂದ ಯಾವ ಸರ್ಕಾರವಾಗಲೀ, ಯಾವ ಅಧಿಕಾರಿಯಾಗಲೀ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಏನಿದೆ ಅದರ ಪ್ರಕಾರ ನಡೆಯದಿದ್ದರೆ ಆಗ ಮಧ್ಯೆ ಕೈಹಾಕಿ ಅವರು ನಿರ್ದೇಶನಗಳನ್ನು ಜಾರಿಗೆ ಕೊಡಬೇಕೆಂದು ಸರ್ಕಾರಕ್ಕೆ ಆದೇಶ ಕೊಡುವ ಅಧಿಕಾರ ರಾಜ್ಯಪಾಲರಲ್ಲಿ ಇದೆ ಎಂದು ನನ್ನ ಸ್ಪಷ್ಟ ಅಭಿಪ್ರಾಯ.

ನಮ್ಮ ರಾಜ್ಯಾಂಗದಲ್ಲಿ ಫಂಡಮೆಂಟಲ್ ರೈಟ್ಸ್ ಏನು ಅದೆ, ಮೂಲಭೂತವಾದ ಹಕ್ಕುಗಳು ಏನು ಇವೆ, ಅವುಗಳನ್ನು ಯಾರಾದರೂ ವಿರೋಧ ಮಾಡಿದರೆ ಕೋರ್ಟಿಗೆ ಹೋಗಬಹುದು. ಕೋರ್ಟಿಗೆ ಹೋಗಿಬಿಟ್ಟು ನಮ್ಮ ಹಕ್ಕುಗಳನ್ನು ನಾವು ಚಲಾಯಿಸಿಕೊಳ್ಳಬಹುದು. ಆದರೆ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಏನು ಇದೆ. ಇದನ್ನು ಸರ್ಕಾರ ಜಾರಿಗೆ ಕೊಡದೆ ಹೋದರೆ ಯಾರೂ ಕೋರ್ಟಿಗೆ ಹೋಗುವ ಹಾಗಿಲ್ಲ. ಕೋರ್ಟಿಗೆ ಹೋಗಬಾರದು ಎಂದು ಪ್ರಾವಿಷನ್ ಇದೆ.

Sri H. SIDDAVEERAPPA.—May I inte vene for a minute if the H n Member yields?

Sri B. BASAVALINGAPPA.—Very willingly. The Hon. Minister may please tell.

Sri SIDDAVEERAPPA.—So far as the Directive Principles of the Constitution are concerned, the Hon. Member is quite well aware that they are only guide lines. They are not shown justiciable in l w. No-body can go to t e court of law and say, Here is a principle; they are not followed; therefore, the Court must give its ruling. They are only desire of the people as expressed. Otherwise they could have put it under the fundamental rights in the Constitution. I am unable to understand the principle enunciated by the Hon. Member that the Governor can govern. After all, as we all know, the sovereignty lies with the people and by way of derivation goes to the representatives of the people. The Governor is only a Constitutional Governor to effect or administer according to the Constitution, If anything goes wrong in the administration, it is the Government that is responsible and not the Governor.

ಶ್ರೀ ಕೆ. ಪ್ರಭಾಕರ್.—ಫಂಡಮೆಂಟಲ್ ರೈಟ್ಸ್ ಏನು ಇದ್ದಾವೆ, ಅವುಗಳನ್ನು ಸಂದರ್ಭ ಬಂದಾಗ ಕೋರ್ಟಿಗೆ ಹೋಗಿ ಸಾಧನೆ ಮಾಡುವುದಕ್ಕೆ ಹಕ್ಕು ಇದೆ; ಎನ್ನುವುದು ಸಹಜ, ಆದರೆ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಬಗ್ಗೆ ಕಾನೂನಿನ ರಕ್ಷಣೆ ದೊರೆಯುವುದಿಲ್ಲ. ಗವರ್ನರ್ ಎಂಬಾಡಿಮೆಂಟ್ ಆಫ್ ದಿ ಕಾನ್‌ಸ್ಟಿಟ್ಯೂಷನ್, ಆ ರೀತಿ ನೀವು ಇದನ್ನು ಮಾಡಿಲ್ಲ, ಮಾಡಿ ಎಂದು ಹೇಳಿದರೆ, ಗವರ್ನರ್ ನಮ್ಮನ್ನು ಕೋರ್ಟಿಗೆ ಹಾಕಿದ ಎಂದು ಭಾವನೆ ಮಾಡಬಾರದು. ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಮೇಲೆ ಗವರ್ನರ್‌ಗೆ ಅಧಿಕಾರ ಇದೆ. ಅವರು ಅದನ್ನು ಸಮರ್ಥನೆ ಮಾಡಿದ್ದಾರೆ. ಇದು ಸವಾಂಜಸವಾಗಿದೆ.

Sri B. BASAVALINGAPPA.—My former colleague should have waited until I finish my argument because, he knows, I am practi-

sing for many years as a lawyer. The Directive Principles of the Constitution, ಕಾನ್‌ಸ್ಟಿಟ್ಯೂಷನ್ 37 ಕಲಂನಲ್ಲಿ ಹೀಗೆ ಇದೆ.

> "The provisions contained in this part shall not be enforceable by any Court. But the principle therein laid down are nevertheless fundamental in the governance of the country and it shall be the duty of the State to apply these principles in making laws"

It is as fundamental for the enforcement of the provisions laid down in the Directive Principles of the Constitution. ಮೂಲಭೂತ ಹಕ್ಕುಗಳು ಉಲ್ಲಂಘನೆಯಾದರೆ ಕೋರ್ಟಿಗೆ ಹೋಗಲಿಕ್ಕೆ ಏನು ಹಕ್ಕು ಇದೆ, ಅಂಥಹ ಹಕ್ಕು ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ನ ವಾಯಲೇಷನ್ ನಿರ್ದೇಶನಗಳು ಉಲ್ಲಂಘನೆಯಾದರೆ ಕೋರ್ಟಿಗೆ ಹೋಗುವುದಕ್ಕೆ ಎಲ್ಲಾ ನಾಗರೀಕರಿಗೂ ಹಕ್ಕು ಇರಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದು 25 ವರ್ಷಗಳಾದವು. ಜನಗಳ ಪರಿಸ್ಥಿತಿ ಏನಾಗಿದೆ. ಕೆಲವೇ ಜನಗಳ ಪರಿಸ್ಥಿತಿ ಇವತ್ತು ಸುಧಾರಿಸಿದೆ. ಬಹು ಭಾಗದ ಜನಗಳ ಪರಿಸ್ಥಿತಿ ಸುಧಾರಿಸಿಲ್ಲ, ಇದು ಎಲ್ಲರೂ ಒಪ್ಪತಕ್ಕ ಮಾತು. ಯಾವ ಮುಗ್ಧತೆಯಿಂದಲೋ, ಅಂಧಕಾರದಿಂದಲೋ ಅಥವಾ ಯಾವುದೋ ಆರ್ಥಿಕ ಮುಗ್ಗಟ್ಟಿನಿಂದಲೋ ಸಮಾಜ ಬೆಳೆದು ಬಂದಿರತಕ್ಕ ಹಿನ್ನೆಲೆಯಲ್ಲಿಯೋ ಅವರು ಇವತ್ತು ಕಷ್ಟಪಡುತ್ತಿದ್ದಾರೆ. ಈ ಕಷ್ಟವನ್ನು ವಿವೇಚನೆ ಮಾಡಬೇಕಾದಂತಹ ಇಚ್ಛೆ ನಮಗೆ ಇದ್ದರೆ, ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ನ್ನು ಸರ್ಕಾರದವರು ಇದನ್ನು ಜಾರಿಗೆ ಕೊಟ್ಟರೆ ಅವರ ಕಷ್ಟ ನಿವಾರಣೆಯಾಗುತ್ತದೆಂದು ನನ್ನದಾದರೂ ಇಚ್ಛೆ. ಇದುವರೆಗೂ ಅದನ್ನು ಯಾರು ಮಾಡಿಲ್ಲ. ಮುಂದೆ ಮಾಡುತ್ತಾರೆನ್ನುವ ಭರವಸೆಯನ್ನು ಹೇಗೆ ಇಡುವುದು ? ಭರವಸೆ ಇಡತಕ್ಕದ್ದು ಒಳ್ಳೆಯದು. ಭರವಸೆ ಇಟ್ಟು 25 ವರ್ಷಗಳ ಅನುಭವವನ್ನು ನೋಡಿದರೆ ಮುಂದುವರೆಯುವುದು ಹೇಗೆ ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ನನಗಂತೂ ಇದು ಆಗುವವರೆಗೂ ನಂಬಿಕೆ ಇರುವುದಿಲ್ಲ. ಕೆಲವು ಜನ ಪರಿಸ್ಥಿತಿಗೆ ಹೊಂದಿಕೊಂಡು, ಅನುಕೂಲಗಳನ್ನು ಸಾಧನೆ ಮಾಡಿಕೊಂಡು ಮುಂದೆ ಹೆಜ್ಜೆಯನ್ನು ಇಡುತ್ತಿದ್ದಾರೆ. ನನ್ನ ವಾದ ಇಷ್ಟೆ, ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಏನು ಇದ್ದಾವೆ, ಅವೆಲ್ಲವನ್ನೂ ಕೂಡ ಫಂಡಮೆಂಟಲ್ ರೈಟ್ಸ್ ಆಗಿ ಪರಿವರ್ತನೆ ಮಾಡಿ ರಾಜ್ಯಾಂಗವನ್ನು ತಿದ್ದುಪಡಿ ಮಾಡಿದ್ದರೆ ದೇಶಕ್ಕೆ ಕಲ್ಯಾಣವಾಗುತ್ತದೆ ಎಂದು ನನಗಾದರೂ ನಂಬಿಕೆ ಇಲ್ಲ. ಇದನ್ನು ನಾನು ಇವತ್ತು ಸ್ಪಷ್ಟಪಡಿಸಿದ್ದೇನೆ, ಇವನ್ನು ಫಂಡಮೆಂಟಲ್ ರೈಟ್ಸ್ ಆಗಿ ತಿದ್ದುಪಡಿ ಮಾಡುವವರೆಗೂ ಕೋರ್ಟಿನಲ್ಲಿ ನಾವು ಇವುಗಳ ಮೇಲೆ ಹಕ್ಕನ್ನು ಚಲಾಯಿಸುವುದಕ್ಕಾಗುವುದಿಲ್ಲ. ಸಂಪೂರ್ಣವಾಗಿ ನಾನು ಇದನ್ನು ಒಪ್ಪುತ್ತೇನೆ. ಅದಕ್ಕೆ ನಮ್ಮ ಈ ಸರ್ಕಾರಗಳು ಈ ಕೆಲಸವನ್ನು ಮಾಡದೇ ಹೋದರೆ ಯಾವ ಜನರ ಕಲ್ಯಾಣವಾಗುವುದಿಲ್ಲ. ಯಾರೂ ಈ ಬಗ್ಗೆ ಕೋರ್ಟಿಗೆ ಹೋಗಿಲ್ಲ, ಇದನ್ನು ನಾವು ಮಾಡಲಿಕ್ಕೆ ಪ್ರಯತ್ನ ಮಾಡಿಲ್ಲ ಎನ್ನುವುದು ಸರಿಯಲ್ಲ. ನಮ್ಮ ಈಗಿನ ಶಕ್ತಿಯಲ್ಲಿ ನಂಬಿಕೆ ಇಟ್ಟುಕೊಂಡು ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತರಬೇಕು. ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಅನ್ನು ಫಂಡಮೆಂಟಲ್ ರೈಟ್ಸ್ ಆಗಿ ತಿದ್ದುಪಡಿ ಮಾಡಬೇಕು. ಇದರಲ್ಲಿ ನ್ಯೂನತೆಗಳು ಬಹಳ ಬರುತ್ತವೆ. ನಮಗೆ ಸರ್ಕಾರ ನಡೆಸುವುದೇ ಬಹಳ ಕಠಿಣವಾದೀತು ಎನ್ನುವ ವಾದವನ್ನು ಕೆಲವರು ಮಾಡಬಹುದು. ಆದರೆ ಇಂಥಾದ್ದು ಇದ್ದೇ ಇರುತ್ತದೆ. ಇದಕ್ಕೆ ಏನಾದರೂ ನೀತಿನಿಯಮಗಳನ್ನು ಹಾಕಿಬಿಟ್ಟು ಯಾವ ರೀತಿಯಾಗಿ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಅನ್ನು ಕಾರ್ಯಗತಮಾಡಬೇಕು ಎನ್ನತಕ್ಕದನ್ನು ಯೋಚನೆ ಮಾಡಬೇಕು. ಇದನ್ನು ಮಾಡಲ್ಲಿಕ್ಕೆ ನಾವೆಲ್ಲಾ ಪ್ರಯತ್ನ ಮಾಡಬೇಕು ಎಂದು ವಿನಯಪೂರ್ವಕವಾಗಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಕಲ್ಮಣಕರ್.—ನಮ್ಮಲ್ಲಿ ಗವರ್ನರ್ ಕಾನ್‌ಸ್ಟಿಟ್ಯೂಷನಲ್, ಸ್ಟೇಟಸ್, ಮತ್ತು ಯು. ಎಸ್. ಎ. ಪ್ರಸಿಡೆಂಟ್ ಸ್ಟೇಟಸ್ ಇವೆರಡಕ್ಕೂ ವ್ಯತ್ಯಾಸ ಇದೆಯೋ ಅಥವಾ ಇಲ್ಲವೇ, ಇದ್ದರೆ ಈಗ ಸಾವರ್ನಿಟ್ ಲೈಸ್ ವಿತ್ ದಿ ಪೀಪಲ್. ಅಡ್ಮಿನಿಸ್ಟ್ರೇಷನ್ ಸರಿಯಾಗಿ ಇಲ್ಲದಿದ್ದರೆ. ಅದರ ಜವಾಬ್ದಾರಿ ಗವರ್ನರ್ ಮೇಲೆ ಬೀಳುತ್ತದೆಯೋ ಅಥವಾ ಗವರ್ನಮೆಂಟಿನ ಮೇಲೆ ಬರುತ್ತದೆಯೋ ?

ಶ್ರೀ ಬಿ. ಬಸವಲಿಂಗಪ್ಪ.—ಅಮೆರಿಕಾ ದೇಶದಲ್ಲಿರತಕ್ಕ ಪದ್ಧತಿ ಅವರು ಅಲ್ಲಿ ಎಕ್ಸಿಕುಟೀವ್ ಅಥಾರಿಟಿ, ಇದರ ಜೊತೆಗೆ ಕಾನ್‌ಸ್ಟಿಟ್ಯೂಷನಲ್ ಹೆಡ್ ಆಗತಕ್ಕಂಥಾದ್ದು ಕೂಡ ಇಲ್ಲಿ ಇದೆ ! ಎಂದು ನಾನು ಹೇಳಿದ್ದೇನೆ. ಪ್ರಜಾಪ್ರತಿನಿಧಿಗಳು ಮಂತ್ರಿಮಂಡಲವನ್ನು ಅಧಿಕಾರಕ್ಕೆ ತರುತ್ತಾರೆ.

(ಶ್ರೀ ಬಿ. ಬಸವಲಿಂಗಪ್ಪ)

ಇವರು ಪ್ರಜೆಗಳಿಗೆ ಜವಾಬ್ದಾರರಾಗುವುದಿಲ್ಲ, ರಾಜ್ಯಾಂಗದ 166ನೇ ಕಲಂ, 154ನೇ ಕಲಂ ಅನ್ನು ಒದಿದರೆ Governor is the constitutional head as well as executive Head ಗವರ್ನರ್, ಕಾನ್ಸ್ಟಿಟ್ಯೂಷನಲ್ ಹೆಡ್, ಅಸ್ ವೆಲ್ ಅಸ್ ಎಕ್ಸಿಕ್ಯುಟೀವ್ ಹೆಡ್. ಎರಡೂ ಅವರ ಕೈಯಲ್ಲಿದೆ. ಘಟನಾತ್ಮಕವಾದಂಥ ಗವರ್ನರ್ ಎಂದು ತಿಳಿದುಕೊಳ್ಳಬೇಕು ಆದರೆ ಅವರು ಯಾವ ಅಧಿಕಾರವನ್ನು ಕೂಡ ಚಲಾವಣೆ ಮಾಡುವುದಕ್ಕೆ ಹೋಗುವುದಿಲ್ಲ. ಗವರ್ನರ್‌ಗಳು ಇನ್ನು ಮೇಲೆ ಯಾರೇ ಸರ್ಕಾರ ನಡೆಸಲಿ, ಇವತ್ತು ನಮ್ಮ ಸರ್ಕಾರ ಇದೆ, ನಾಳೆ ಇನ್ನೊಂದು ಸರ್ಕಾರ ಬರಬಹುದು ಡೆಮಾಕ್ರಸಿಯಲ್ಲಿ ಯಾರೇ ಬಂದರೂ ಕೂಡ ಗವರ್ನರ್ ಆಗಿ ಇರತಕ್ಕ ವ್ಯಕ್ತಿ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ದಿ ಕಾನ್ಸ್ಟಿಟ್ಯೂಷನ್ ಅದನ್ನು ಜಾರಿಗೆ ಕೊಡವೆ ಹೋದರೆ, ಜಾರಿಗೆ ಕೊಡತಕ್ಕದ್ದು ಅದರಲ್ಲಿ ಇದೆ ಎನ್ನತಕ್ಕದ್ದನ್ನು ನಾನು ಸ್ಪಷ್ಟಪಡಿಸಿದ್ದೇನೆ. ಶ್ರೀಮಾನ್ ಕಲ್ಮಣಕರ್ ಅವರಲ್ಲಿ ಹೇಳುತ್ತೇನೆ, ನಾನು ಇದನ್ನು ಓದಿ ವಿಚಾರಮಾಡಿ ತಮ್ಮ ಮುಂದಿಟ್ಟಿದ್ದೇನೆ, ತಾವೂ ಕೂಡ ಇದರ ಬಗ್ಗೆ ಗಮನ ಕೊಡಬೇಕು.

ರಾಜ್ಯಾಂಗದಲ್ಲಿ ಮೊದಲನೆಯ ಕಲಮು ಸೋಶಿಯಲ್ ಜಸ್ಟಿಸ್ ಬಗ್ಗೆ ಇದೆ. ಇವತ್ತು ಸೋಶಿಯಲ್ ಜಸ್ಟಿಸ್ ಬಗ್ಗೆ ನಾವು ಏನು ಮಾಡಿದ್ದೇವೆ ? ಯಾರ್ಯಾರು ಯಾವ ಯಾವ ರೀತಿ ವ್ಯಾಖ್ಯಾನ ಮಾಡುತ್ತಾರೋ, ಅದೇ ಸೋಶಿಯಲ್ ಜಸ್ಟಿಸ್ ಆಗಿದೆ ಯಾವ ಅಧಿಕಾರಿಯು ಮೂಗುನೇರಕ್ಕೆ ಸರಿಯೆಂದು ಕಾಣುತ್ತದೆ ಅದೇ ಸೋಶಿಯಲ್‌ಜಸ್ಟಿಸ್ ಒಬ್ಬ ಬಡವನಿಗೆ ಮೂರು ನಾಲ್ಕು ಎಕರೆ ಜಮೀನು ಕೊಡಬೇಕೆಂದರೆ, ಅದು ಒಬ್ಬ ಅಧಿಕಾರಿಯ ದೃಷ್ಟಿಯಲ್ಲಿ ಕೊಡಬಾರದು ಎಂದು ಇದ್ದರೆ, ಅದೇ ಸೋಶಿಯಲ್ ಜಸ್ಟಿಸ್. ಇದಕ್ಕೆ ಕೋರ್ಟು ಸಹ ಹೊರತಾಗಿಲ್ಲ. ರಾಜ್ಯಾಂಗದಿಂದ ಸಹ ಜಾತಿಯನ್ನು ತೆಗೆದು ಹಾಕಿಲ್ಲ. ಅದನ್ನು ಆಧಾರವಾಗಿಟ್ಟುಕೊಂಡು ಬಹುಭಾಗ ರಾಜ್ಯಾಧಿಕಾರವನ್ನು ಆಡಳಿತವನ್ನು ನಡೆಸುತ್ತಿದ್ದಾರೆ. ಅದನ್ನು ನಾವು ತಪ್ಪಿಸಬೇಕು. ನಡೆಸಲಾಗುತ್ತಿದೆ, ಇದನ್ನು ನೋಡಿಕೊಂಡು ನಾವು ಎಷ್ಟು ಸಮಯ ಇರುವುದು ? ಈ ತಾರತಮ್ಯ ಜೀವನವನ್ನು ಕೊನೆಗಾಣಿಸಲೇಬೇಕು. ದೇಶದಲ್ಲಿ ಜಾತಿ ಜಾತಿ ಎಂದು ಏನು ಹೇಳುತ್ತಿದ್ದಾರೆ, ಅದು ಹೋಗಬೇಕು. ಮಾನ್ಯ ಕೃಷ್ಣನ್‌ರವರು ಬಸವಲಿಂಗಪ್ಪನವರು ಹರಿಜನರ ಪರವಾಗಿ ಏನೋ ಮಾತನಾಡಿದರೆಂದು ಅವರನ್ನು ಮಂತ್ರಿ ಸ್ಥಾನದಿಂದ ಏಕೆ ತೆಗೆದಿದ್ದೀರಿ ಎಂದು ಕೇಳಿದರು. ಆದರೆ ನಾನು ಇವತ್ತು ಏನಾದರೂ ಮಾತನಾಡಿದರೆ ಅದು ಹರಿಜನರ ಪರವಾಗಿ ಮಾತನಾಡುತ್ತಾ ಇಲ್ಲ. ನಾನು ಹರಜನ, ಹರಿಜನ ಅಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಮಾತನಾಡಿದುದರ ತಿರುಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಾವು ಹರಿಜನರ ಪರವಾಗಿ ಮಾತನಾಡಿದ್ದೀರಿ ಎಂದು ಹೇಳಿಲ್ಲ. ಅನೇಕ ವಿಚಾರಗಳ ಬಗ್ಗೆ ಮಾತನಾಡಿದ್ದೀರಿ ಎಂದು ಹೇಳಿದ್ದೇನಷ್ಟೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಏನು ಹೇಳಿದರೂ ಅದು ಜಾತಿಯ ಪರವಾಗಿ ಹೇಳುತ್ತಿದ್ದೇನೆ ಎಂದು ನೀವು ಏಕೆ ತಿಳಿದುಕೊಳ್ಳುತ್ತಿದ್ದೀರಿ ? ನಾನು ಒಬ್ಬ ನಾಗರೀಕ, ಸಾಮಾಜಿಕ ನ್ಯಾಯಕ್ಕೋಸ್ಕರ ಏನಾದರೂ ಮಾತನಾಡಿದರೆ ಅದನ್ನು ಜಾತಿಯ ಪರವಾಗಿ ಮಾತನಾಡುತ್ತಿದ್ದೇನೆ ಎಂದು ಏಕೆ ಹೇಳುತ್ತಿದ್ದೀರಿ ! ನಾನು ಏನಾದರೂ ಮಾತನಾಡಿದ್ದರೆ ಅದು ಮಾನವೀಯತೆಯ ದೃಷ್ಟಿಯಿಂದ ಸಾಮಾಜಿಕ ನ್ಯಾಯಕ್ಕೋಸ್ಕರ ಮಾತನಾಡುತ್ತಿದ್ದೇನೆ. ಕೆಲವು ಭೋಗ ಜೀವನ ಮಾಡುತ್ತಿದ್ದ ಜನರಿಗೆ ಇಂಥ ಮಾತುಗಳನ್ನು ಕೇಳಿ ಸಿಟ್ಟು ಬರುತ್ತದೆ. ಅಂಥ ಜನರು ನಾನು ಹರಿಜನರಿಗೋಸ್ಕರ ಮಾತನಾಡುತ್ತಿದ್ದೇನೆ ಎಂದು ಎತ್ತಿ ಕಟ್ಟಿ ಜನರ ಮನಸ್ಸನ್ನು ಕಲಕತಕ್ಕ ಪ್ರಯತ್ನ ಮಾಡುತ್ತಿದ್ದಾರೆ. ಇಂಥ ಜನರು ಜಾತಿಯ ವ್ಯಾಮೋಹದಿಂದ ಅಧಿಕಾರವನ್ನು ನಡೆಸುತ್ತಿದ್ದಾರೆ. ಅವರಿಗೆ ಯಾವ ಒಂದು ಹೆದರಿಕೆಯೂ ಸಹ ಇಲ್ಲ. ಆದ ರಿಂದ ಅದರ ಬಗ್ಗೆ ನಾವು ಯಾವ ಕ್ರಮವನ್ನು ತೆಗೆದುಕೊಂಡಿದ್ದೇವೆ ? ಎಂಬುದನ್ನು ನೋಡಬೇಕು.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.— ತಾವು ಜಾತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಆಡಳಿತವನ್ನು ನಡೆಸುತ್ತಿದ್ದ ಜನರು ಎಂದು ಹೇಳುತ್ತಿದ್ದೀರಿ. ಅದು ಯಾರು ಎಂದು ಸ್ಪೆಸಿಫಿಕ್ ಆಗಿ ಹೇಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅಧಿಕಾರ ವರ್ಗದವರು ಎಂದು ಆಗಲೇ ನಾನು ಹೇಳಿದ್ದೇನೆ. ಈ ಒಂದು ಜಾತಿಯ ಜಾಡ್ಯ ಕೋರ್ಟುಗಳ ನ್ಯಾಯಾಧೀಶರೇನಿಸಿದ್ದಾರೆ ಏನಿದ್ದಾರೆ ಅವರನ್ನು ಸಹ ಹೊರತುಪಡಿಸಿಲ್ಲ. ನಾನು 25 ವರ್ಷಗಳಿಂದ ಲಾಯರಾಗಿ ಇವುಗಳನ್ನು ನೋಡುತ್ತಿದ್ದೇನೆ. ಒಬ್ಬ

ನ್ಯಾಯಾಧೀಶರರ ಮುಂದೆ ಅದೇ ಜಾತಿಯ ಲಾಯರ್ ಹೋದರೆ ಆತನಿಗೆ ಅನುಕೂಲಕರವಾದ ಹುಕುಂ ಸಿಗುತ್ತದೆ, ಇಲ್ಲದಿದ್ದರೆ ಇಲ್ಲ. ಆದ್ದರಿಂದ ಕೋರ್ಟುಗಳಿಗಾದರೂ ಗೌರವ ಏಕೆ ಕೊಡಬೇಕೆಂದು ಕೇಳುತ್ತೇನೆ. ಇನ್ನು ಹೌಸಿಂಗ್ ಬೋರ್ಡಿನ ಪ್ರಕರಣ. ನಾನು ಹೌಸಿಂಗ್ ಬೋರ್ಡನ್ನು ಸುಪರ್‌ಸೀಡ್ ಮಾಡಬೇಕೆಂದು ನೋಟೀಸ್ ಕೊಟ್ಟೆ. ಅದಕ್ಕೆ ಸ್ಟೇ ಕೊಟ್ಟರು. ನೋಟೀಸ್ ಕೊಟ್ಟು, ಅದಕ್ಕೆ ಉತ್ತರ ಬಂದ ಮೇಲೆ, ಅದನ್ನು ಸಮಾಜಾಯಿಷಿ, ಕೇಳಿ ಆ ನಂತರ ಸುಪರ್‌ಸೀಡ್ ಮಾಡುವುದೋ ಬಿಡುವುದೋ ಎಂಬ ಪ್ರಶ್ನೆ ಬರುತ್ತದೆ.

Sri H. SIDDAVEERAPPA.—May I respectfully bring to the notice of the hon. Member that the matter is still sub judice. It is left to him either to continue or ponder over it.

Sri B. BASAVALINGAPPA.—I know my limitations; I know what is sub judice and what is not.

Sri D. B. KALMANKAR.—I want to know whether the discharge of duties by the courts, particularly the High Court, can be brought here.

Sri B. BASAVALINGAPPA.—I am not questioning the judgements or orders. I am only saying how the whole thesis is built up.

Mr. DEPUTY SPEAKER. I may tell the hon. Member that going into the details will be embarrassing.

Sri B. BASAVALINGAPPA.—This caste order is projected into the administration of the State not only now but since centuries and it is continued. How long we have to continue it? We have to take a decision to put an end to this projection of this caste order into the magistracy, into the courts, in our private life and public life. Suppose I pose a question as to how long we should continue like this? I become a bad man. Let the whole world would call me a bad man; I don't bother about it. I will stand alone and tell the world that I will fight for the eradication of this evil until I die If all the hon. Members join me it is a pleasure and I wou'd welcome them.

ಎರಡನೆಯ ಸಾರಿ ನೋಟೀಸ್ ಕೊಟ್ಟೆ. ಅಲ್ಲಿ ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿರತಕ್ಕಂತಹ ಒಬ್ಬ ಮನುಷ್ಯ ಮೂರು ನಾಲ್ಕು ಸಾವಿರ ಬೆಲೆ ಬಾಳತಕ್ಕ ಜಮೀನನ್ನು 50-60 ಸಾವಿರ ರೂಪಾಯಿಗೆ ಕೊಂಡುಕೊಂಡು ಬೋರ್ಡಿನ ಹಣವನ್ನು ದುರುಪಯೋಗಪಡಿಸಿದ್ದಾರೆ. ಸರ್ಕಾರದ ಹುಕುಂ ಇಲ್ಲದೆ ಖರ್ಚು ಮಾಡಬಾರದ್ದನ್ನು ಖರ್ಚು ಮಾಡಿದ್ದಾರೆ. ಒಟ್ಟು ಅವರು ಸುಮಾರು 17 ಲಕ್ಷ ರೂಪಾಯಿಯ ಜಮೀನು ವ್ಯವಹಾರ ಮಾಡಿದ್ದಾರೆ. ಆ ರೀತಿಯ ವ್ಯವಹಾರ ಮಾಡುವಾಗ ಏಕೆ ಮಾಡಿದೆ ಎಂದು ಕೇಳಿದರೆ ಅದು ತಪ್ಪೇ? ಅವರು ಮೊನ್ನೆ 9ನೇ ತಾರೀಕಿಗೆ ಮನೆಗೆ ಹೋಗಿದ್ದಾರೆ. ಆದ್ದರಿಂದ ಅಧ್ಯಕ್ಷರ ಉದ್ದೇಶ ಸಫಲವಾಯಿತು. ಅಡ್ಮಿನಿಸ್ಟ್ರೇಷನ್ ಮಾಡತಕ್ಕ ಜವಾಬ್ದಾರಿ ಕೋರ್ಟಿಗೆ ಇರುವುದೋ ಅಥವಾ ನಮಗೆ ಇರುವುದೋ ಎಂದು ನೋಡಬೇಕು. ಸ್ವಾಮಿ, ರಾಜ್ಯಪಾಲರಿಗೆ ಅಧಿಕಾರ ರಾಜ್ಯಾಂಗದಲ್ಲಿ ಇರುವಾಗ ಕೆಲವು ಸಂದರ್ಭಗಳಲ್ಲಿ ಅವರು ಕೆಲವು ವಿಚಾರಗಳಿಗೆ ಕೈ ಹಾಕತಕ್ಕದ್ದು ಅವರ ಕರ್ತವ್ಯವೆಂದು ಹೇಳಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ಅದಕ್ಕೆ ಸಹಕಾರ ಕೊಡುತ್ತಾರೆಂದು ನನಗೆ ಪೂರ್ಣ ನಂಬಿಕೆ ಇದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಈ ದೇಶದಲ್ಲಿರತಕ್ಕ ಬಡ ಜನಗಳು ಬಹಳ ಶಾಂತಚಿತ್ತರಾಗಿದ್ದಾರೆ. ನಾವು ಇಲ್ಲಿ ಏನೇನು ಮಾಡುತ್ತಿದ್ದೇವೋ ಅದನ್ನೆಲ್ಲಾ ನೋಡುತ್ತಿದ್ದಾರೆ. ನಾವು ಹೇಳಿದ್ದನ್ನೆಲ್ಲಾ ಕೇಳುತ್ತಿದ್ದಾರೆ. ಅವರು ಯಾರೂ ಇನ್ನೂ ದಂಗೆಯೇಳುವುದಕ್ಕೆ ಪ್ರಯತ್ನಲಿಲ್ಲ. ಇವತ್ತು ಇನ್ನೂ ಏಳಲಿಲ್ಲ, ಮುಂದೆ ಏಳುತ್ತಾರೋ ಏನೋ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಬಹಳ ದಿನಗಳು ಹೀಗೆಯೇ ಇರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಜನಗಳು ಇಷ್ಟೊಂದು ಕಷ್ಟದಿಂದ ನರಳುತ್ತಿದ್ದರೂ ಕೂಡ ಅವರಿಗೆ ಇನ್ನೂ ದಂಗೆಯೇಳುವ ಮನೋಭಾವ ಬಂದಿಲ್ಲ. ನಮ್ಮ ಸಂಸ್ಕೃತಿ ಆ ರೀತಿಯಾಗಿ ಮೊದಲನಿಂದಲೂ ಇದ್ದೇ ಇದೆ, ನಮ್ಮ ಜಾತಿಯವರು ಅಧಿಕಾರದಲ್ಲಿದ್ದಾರೆ. ಎಷ್ಟು ಅನ್ಯಾಯ ಮಾಡಿದರೂ ನಾವು ಸಹಿಸಿಕೊಂಡು ಹೋಗೋಣವೆಂಬ ಮನೋಭಾವವನ್ನು ಬೆಳೆಸಿಕೊಂಡು ಬಂದಿದ್ದೇವೆ. ಇದನ್ನು ಕೊನೆಗಾಣಿಸಬೇಕು. ಬಡ್ಜೆಟ್ಟಿನಲ್ಲಿ ಆದಾಯ ವೆಚ್ಚದ ಬಗ್ಗೆ ಅಂಕಿ ಅಂಶಗಳು ಇದ್ದೇ ಇರುತ್ತದೆ. ನಮ್ಮ ಮೂಲ ಉದ್ದೇಶ ಏನಿರಬೇಕೆಂದರೆ, ಸಮಾಜವನ್ನು ಉದ್ಧಾರ ಮಾಡುವುದಕ್ಕೆ ಹೊರಟಿದ್ದೇವೆಯೇ ಎಂಬುದು. ನಾವು ಅದರ ಕಡೆಗೆ ಹೋಗದಿದ್ದರೆ ಇದೆಲ್ಲಾ ನಿಷ್ಫಲವೆಂದು ನನ್ನ ಭಾವನೆ. ಇನ್ನು ನಾನು ಬಡ್ಜೆಟ್ ಬಗ್ಗೆ ಎಲ್ಲಾ ವಿಷಯಗಳ ಬಗ್ಗೆ ಮಾತನಾಡದೆ ಕೇವಲ ಮೂರು ನಾಲ್ಕು ವಿಷಯಗಳನ್ನು ಕುರಿತು ಮಾತನಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಮೊಟ್ಟಮೊದಲನೆಯದಾಗಿ, ನಾನು ವಿದ್ಯಾಭ್ಯಾಸದ ಇಲಾಖೆಯ ಬಗ್ಗೆ ಮಾತನಾಡುವೆ. ಮಾನ್ಯ ರಾಜ್ಯಪಾಲರು ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ.

''Special steps to increase the enrolment of children belonging to the Scheduled Castes and Scheduled Tribes and other weaker sections of the Society. Adequate facilities will be provided for the spread of education among the Children of S. C. and S. Ts.''

ಮಾನ್ಯ ಹಣಕಾಸಿನ ಸಚಿವರು ಅವರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ·

''Preference will be given to Scheduled Castes and Tribes'' ಅದಕ್ಕೂ ಇದಕ್ಕೂ ಎಷ್ಟು ವ್ಯತ್ಯಾಸ ! ರಾಜ್ಯಪಾಲರು ರಾಜ್ಯಾಂಗದ 176ನೇ ಕಲಮಿನ ಪ್ರಕಾರ ಭಾಷಣ ಮಾಡುತ್ತಾರೆ. ಆ ಭಾಷಣದ ಪ್ರಕಾರ ಆ ವರ್ಷದಲ್ಲಿ ಸರ್ಕಾರ ಏನು ಕೆಲಸ ಮಾಡಬೇಕೆಂಬುದನ್ನು ಹೇಳಿರುತ್ತಾರೆ. ಅದನ್ನು ಬಡ್ಜೆಟ್ಟಿನಲ್ಲಿ ಅಳವಡಿಸಬೇಕಾಗುತ್ತದೆ. ಷೆಡ್ಯೂಲ್ಡ್ ಕ್ಯಾಸ್ಟ್ ವಿದ್ಯಾರ್ಥಿಗಳು ಏನು ಇದ್ದಾರೆ ಅವರಿಗೆ ಇಷ್ಟು ಅಲ್ಪ ಹಣವನ್ನು ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿ ವಿದ್ಯಾಭ್ಯಾಸ ಸೌಕರ್ಯಗಳನ್ನು ಒದಗಿಸುತ್ತೇನೆಂದರೆ, ಇನ್ನೆಷ್ಟು ಅವಧಿಯಲ್ಲಿ ಅವರನ್ನು ಇವರು ವಿದ್ಯಾವಂತರನ್ನಾಗಿ ಮಾಡುತ್ತಾರೋ ಗೊತ್ತಿಲ್ಲ. ಹೆಚ್ಚು ಹಣವನ್ನು ಇವರಿಗಾಗಿ ಮೀಸಲಾಗಿಡದಿದ್ದರೆ ಅದರಿಂದೇನು ಪ್ರಯೋಜನ ? ನಾವು ಇಲ್ಲಿ ಹೇಳಿರುವಂತೆ ಅವರಿಗೆ ಹೆಚ್ಚಿಗೆ ಹಣವನ್ನ ಒದಗಿಸುವುದಿಲ್ಲ, ಕಾನೂನು ಮಾಡುವುದು ಅದನ್ನು ಜಾರಿಗೆ ಕೊಡುವುದಿಲ್ಲ. ಈ ಸಭೆಯಲ್ಲಿ ಹೇಳಿದಂತೆ ಅವರು ನಡೆಯಿಸುವುದಿಲ್ಲ. ಅದ್ದರಿಂದ ಈ ರೀತಿಯ ದ್ವಂದ್ವ ಅಭಿಪ್ರಾಯ ಮತ್ತು ನಡವಳಿಕೆ ಬೇಡ. ನಾವು ಎಲ್ಲಿಯವರೆಗೆ ಈ ರೀತಿ ಇರುವೆವೋ ನನಗಂತೂ ಗೊತ್ತಾಗುತ್ತಾ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಬೇರೆ ಬಡವರ ಮಕ್ಕಳ ಬಗ್ಗೆಯೂ ತಮಗೆ ಸಹಾನುಭೂತಿ ಇದೆಯೇ ಎಂಬುದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಇನ್ನು ಆರ್ಟಿಕಲ್ 45ರ ಪ್ರಕಾರ ಫ್ರೀ ಅಂಡ್ ಕಂಪಲ್ಸರಿ ಎಜುಕೇಷನ್ ಕೊಡಬೇಕೆಂದಿದೆ. ಎಲ್ಲರಿಗೂ ಆ ರೀತಿ ಕೊಡಬೇಕೆಂದು ಒಂದು ನಿಗದಿ ಬಡ್ಜೆಟ್ಟಿನಲ್ಲಿ ಹಾಕಿಕೊಳ್ಳಬೇಕು. ಬೇರೆ ದೇಶಗಳಲ್ಲಿ ಇದರ ಬಗ್ಗೆ ಅಳವಡಿಸಿಕೊಂಡಿರುವ ಹಾಗೆ ಇಲ್ಲಿಯೂ ಮಾಡಬೇಕು. ಆ ರೀತಿಯಾಗಿ ಮಾಡದಿದ್ದರೆ ರಾಜ್ಯಾಂಗಕ್ಕೆ ವಿರೋಧವಾಗಿ ಹೋಗಬೇಕಾಗುತ್ತದೆ. ರಾಜ್ಯಪಾಲರು ಇದರ ಬಗ್ಗೆ ಕೈಹಾಕಿ ಸರ್ಕಾರಕ್ಕೆ ಈ ರೀತಿ ಮಾಡಬೇಕೆಂದು ಹೇಳಬೇಕು ಅದನ್ನು ನಾನು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ. ಫ್ರೀ ಅಂಡ್ ಕಂಪಲ್ಸರಿ ಎಜುಕೇಷನ್ ಬಗ್ಗೆ ಅವರು ಕೈಹಾಕುವುದು ನ್ಯಾಯವಿರುತ್ತದೆ. He has constitutional power to interfere in the administration and tell the Government to take up this matter and complete it in a given time.

ಇನ್ನು ಮೈಸೂರು ಯೂನಿವರ್ಸಿಟಿಯ ವಿಚಾರವಾಗಿ ಮಾತನಾಡುತ್ತೇನೆ. ಇದರಲ್ಲಿ ಯಾರು ಮುಖ್ಯಸ್ಥರೋ ಅವರು ಅದರ ಜವಾಬ್ದಾರಿಯನ್ನು ನಿರ್ವಹಣೆ ಮಾಡುತ್ತಾ ಇಲ್ಲ. ನಾನು ಮೈಸೂರಿನಲ್ಲಿ ಒಂದು ಭಾಷಣ ಮಾಡಿದೆ. ನನ್ನ ವಿರುದ್ಧವಾಗಿ ಯೂನಿವರ್ಸಿಟಿಯ ಮುಖ್ಯಸ್ಥರೇ ಅದಕ್ಕೆ ಉತ್ತೇಜನ ಕೊಡುತ್ತಾರೆಂದರೆ, ಅದಕ್ಕಿಂತಲೂ ಹೇಯವಾದ ಕೆಲಸವಿಲ್ಲ. ಯಾವಾಗಲೂ

ವೈಸ್‌ಚಾನ್ಸಲರ್ ಆಗಿರುವವರು ತಂದೆಯಂತೆ ಮಕ್ಕಳ ಅಭಿವೃದ್ಧಿಯನ್ನು ನೋಡಿಕೊಂಡು ಅವರಿಗೆ ಮಾರ್ಗದರ್ಶನ ಕೊಡಬೇಕು. ಆ ಜವಾಬ್ದಾರಿಯನ್ನು ಅವರು ತಿಳಿಯದೆ ತನ್ನ ಒಂದು ಕುಚೋದ್ಯದಿಂದ ಹರಿಜನರ ಮಕ್ಕಳನ್ನು ಹಾಸ್ಟಲ್‌ನಿಂದ ತಿಂಗಳುಗಟ್ಟಲೆ ಹೊಡೆದೋಡಿಸಿ ಅವರ ಪ್ರಾಣಾಪಾಯಕ್ಕೆ ಕಷ್ಟ ಬರುವಷ್ಟರಮಟ್ಟಿಗೆ ಪ್ರಚೋದನೆಗೆ ಸಹಾಯಕವಾದರೆ ಆ ಮನುಷ್ಯ ವೈಸ್ ಚಾನ್ಸಲರಾಗಿ ಇರಬೇಕೋ, ಬೇಡವೊ ? ಎಷ್ಟೋ ಹರಿಜನ ಮಕ್ಕಳು ದಿಕ್ಕಾಪಾಲಾಗಿ ಹೋಗಿದ್ದಾರೆ, ಬೀದಿಯಲ್ಲಿ ತಿರುಗಾಡುವುದಕ್ಕಾಗಲಿಲ್ಲ. ಇಂತಹ ಒಂದು ಪರಿಸ್ಥಿತಿಗೆ ಅಂತಹ ಸ್ಥಾನದಲ್ಲಿರುವವರು ಯಾವಾಗಲೂ ಎಡೆ ಕೊಡಬಾರದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಷ್ಟು ಬಹಿರಂಗವಾಗಿ ಮಾನ್ಯ ಸದಸ್ಯರು ಟೀಕೆ ಮಾಡುವಾಗ ಸರ್ಕಾರದವರು ಹರಿಜನರ ಬಗ್ಗೆ ತಾತ್ಸಾರ ಮಾಡಿದ್ದಾರೆಂದು ಸರ್ಕಾರದ ಮೇಲೆ ಚಾರ್ಜ್ ಮಾಡುವಾಗ ಹರಿಜನರ ಮಕ್ಕಳನ್ನು ಹೊಡೆದೋಡಿಸಿ, ಅವರು ಊರಿನಲ್ಲಿ ತಿರುಗಾಡುವುದಕ್ಕೆ ಬಿಡಲಿಲ್ಲವೆಂದು ಹೇಳುತ್ತಿರುವಾಗ, ಈ ಕರ್ನಾಟಕದಲ್ಲಿ ಸರ್ಕಾರ ಇರಲಿಲ್ಲವೇ ಎಂದು ನಾನು ಕೇಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಬಹಳ ಗುರುತರವಾದ ಅಪಾದನೆಯನ್ನು ಮಾಡುತ್ತಿದ್ದಾರೆ. ನಾನು ಒಬ್ಬ ಯೂನಿವರ್ಸಿಟಿಯ ಸದಸ್ಯನಾಗಿರುವುದರಿಂದ ಈ ಸಮಯದಲ್ಲಿ ಪ್ರವೇಶ ಮಾಡಿ ಆ ವಿಚಾರವಾಗಿ ಹೇಳುವುದಕ್ಕೆ ಅವಕಾಶವನ್ನು ಕೊಡಬೇಕು. ಇಂತಹ ಒಂದು ಕೂಗಾಟದಲ್ಲಿ ಪ್ರಜಾಪ್ರಭುತ್ವವನ್ನು ಯಾವಾಗಲೂ ಮುಂದುವರಿಸಿಕೊಂಡು ಹೋಗುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಇಂತಹ ಅಪಾದನೆಗಳನ್ನು ಮಾಡುವಾಗ ಅದನ್ನು ರುಜುವಾತು ಮಾಡುವುದಕ್ಕೆ ಬೇಕಾದಂಥ ಸಾಮಗ್ರಿಗಳನ್ನು ಸರಿಯಾಗಿಟ್ಟುಕೊಂಡಿರಬೇಕು. ಅದಕ್ಕೆ ಸಂಬಂಧಪಟ್ಟ ಅಂಕಿಅಂಶಗಳನ್ನು ಅವರು ಪಡೆದಿರಬೇಕು. ವೈಸ್‌ಚಾನ್ಸಲರ್ ಅವರು ಪ್ರಚೋದನೆ ಮಾಡಿದರೆಂದು ಜವಾಬ್ದಾರಿ ಸ್ಥಾನದಲ್ಲಿರತಕ್ಕವರ ಮೇಲೆ ಮಾಡತಕ್ಕ ಅಪಾದನೆ ಇದು, ಮತ್ತು ಪರೋಕ್ಷವಾಗಿ ಸರ್ಕಾರದ ಮೇಲೂ ಮಾಡುವ ಅಪಾದನೆಯೂ ಆಗಿದೆ. ಮಾನ್ಯ ಸದಸ್ಯರೂ ಕೂಡ ಹಿಂದೆ ಸರ್ಕಾರವನ್ನು ನಡೆಸಿಕೊಂಡು ಬಂದಿರತಕ್ಕವರು. ಈ ಮಂತ್ರಿಮಂಡಲದಲ್ಲಿ ಹಿಂದೆ ಇದ್ದವರು. ಇವರ ಕಾಲದಲ್ಲಿ ಅವರು ವೈಸ್‌ಚಾನ್ಸಲರ್ ಆಗಿದ್ದರು. ಆದ್ದರಿಂದ ಅವರ ಮೇಲೆ ಇವರು ಹತೋಟಿಯನ್ನು ಇಟ್ಟುಕೊಳ್ಳಬಹುದಾಗಿತ್ತು. ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಬೇರೆ ಕಡೆ ಪ್ರಶ್ನೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ಆ ಒಂದು ಅವಕಾಶವನ್ನು ಇಲ್ಲಿ ಉಪಯೋಗಿಸಿಕೊಂಡು ಅವರ ಒಂದು ಜವಾಬ್ದಾರಿಯ ಹಂತವನ್ನು ಮೀರಿ ಈ ಸಭೆಯಲ್ಲಿ ಯಾವಾಗಲೂ ಮಾತನಾಡಬಾರದೆಂದು ನಾನು ಅವರನ್ನು ವಿನಯಪೂರ್ವಕವಾಗಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಿ.—ಈ ಸಂದರ್ಭದಲ್ಲಿ ನಾನೊಂದು ನಿದರ್ಶನವನ್ನು ಕೊಡುತ್ತೇನೆ. ಚಿಕ್ಕಮಗಳೂರಿನಲ್ಲಿ ಇವರ ಮೇಲೆ ಬಂದಂಥ ಅಪಾದನೆಯ ಬಗ್ಗೆ ಹರಿಜನರು ದೂರುಕೊಟ್ಟು ಅವರ ಒಂದು ಕೀಳು ಭಾಷಣದ ಬಗ್ಗೆ ಅವರೇ ವಾಪಸ್ಸು ತೆಗೆದುಕೊಂಡಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಈ ರೀತಿ ಗೌರವ ಸದಸ್ಯರ ಮೇಲೆ, ಗೌರವ ಸ್ಥಾನವನ್ನು ಅಲಂಕರಿಸಿದ್ದವರ ಮೇಲೆ ಅಪಾದನೆ ಮಾಡುವಾಗ, ಅವರು ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಾನು ಈ ಸಭೆಯಲ್ಲಿ ಮಾತನಾಡುವಾಗ ಯಾವಾಗಲೂ ಜವಾಬ್ದಾರಿಯಿಂದಲೇ ಮಾತನಾಡುತ್ತೇನೆ. ನಾನು ಈ ವಿಚಾರದಲ್ಲಿ ರುಜುವಾತು ಮಾಡುವುದಕ್ಕೆ ಯಾವತ್ತೂ ಸಿದ್ಧನಾಗಿದ್ದೇನೆ.

ಇನ್ನೊಂದು ವಿಷಯ. ನಮ್ಮ ರಾಜ್ಯದಲ್ಲಿರತಕ್ಕ ವಿದ್ಯಾಭ್ಯಾಸ ಇಲಾಖೆಯಲ್ಲಿ ಟೆಕ್ಸ್ಟ್ ಬುಕ್‌ಗಳ ಪ್ರೋಗ್ರಾಂನ್ನು ಬದಲಾವಣೆ ಮಾಡಲಿಲ್ಲ. ನಾನು ಮಂತ್ರಿಯಾಗಿದ್ದಾಗ ಈ ವಿಚಾರವಾಗಿ ಎಷ್ಟೋ ಸಾರಿ ಹೇಳಿದ್ದೇನೆ. ಈಗಿರತಕ್ಕ ಟೆಕ್ಸ್ಟ್ ಬುಕ್‌ಗಳನ್ನು ಹರಿದುಹಾಕಿ, ನಮ್ಮ ದೇಶದ ಬೆಳವಣಿಗೆಗೆ ಅನುಕೂಲವಾಗತಕ್ಕಂಥ ಪುಸ್ತಕಗಳನ್ನು ಬರೆಸಿ ಎಂಬುದಾಗಿ ಹೇಳಿದೆ. ಅದನ್ನು ಮಾಡಲೇ ಇಲ್ಲ. ಈಗಲೂ ನಾನು ಅದೇ ಅಭಿಪ್ರಾಯವುಳ್ಳವನಾಗಿದ್ದೇನೆ. ಪಠ್ಯಪುಸ್ತಕಗಳಿವೆ. ಮಕ್ಕಳು ಓದಲಿಕ್ಕೆ ಅವು ಯೋಗ್ಯವಾಗಿಲ್ಲ. ಮತ್ತೆ ಅದನ್ನು ಬರೆಯತಕ್ಕ ಜನರು ಯಾರೆಂದರೆ ಯಾರು ಜಾತಿವಾದವನ್ನು ತಮ್ಮ ಜೀವನದಲ್ಲಿ ಮುಂದುವರಿಸುತ್ತಿದ್ದಾರೆ ಅಂಥ ಜನ. ಆದುದರಿಂದ ಈ ಪಠ್ಯ ಪುಸ್ತಕಗಳನ್ನು ಮಾಡುವಾಗ ಒಂದು ರಾಷ್ಟ್ರಮಟ್ಟದ ನೀತಿಯನ್ನು ಸಿದ್ಧಮಾಡಿ ನ್ಯಾಷನಲ್ ಸ್ಟ್ಯಾಂಡರ್ಡ್ ಎವಾಲ್ವ್ ಮಾಡಿ ಆ ರೀತಿ ಬರೆಯುವ ಪುಸ್ತಕಗಳನ್ನು ಮಕ್ಕಳು ಓದುವಂತಾಗಬೇಕು ಹಾಗೆ ಮಾಡದೆ ಹೋದರೆ, ಸರಿಯಾಗಿ ಮಕ್ಕಳನ್ನು ತರಬೇತಿ ಮಾಡದೆ ಹೋದರೆ, ಹೀಗೆ ಕೆಟ್ಟದಾರಿಯಲ್ಲಿ ತರಬೇತಿ ಮಾಡಿ ಒಳ್ಳೆಯ ದಾರಿಯಲ್ಲಿ ಬರ

(ಶ್ರೀ ಬಿ. ಬಸವಲಿಂಗಪ್ಪ)

ಬೇಕು ಎಂದರೆ ಹೇಗೆ ಬರುತ್ತಾರೆ ಎಂದು ಬಹಳ ವಿನಯ ಪೂರ್ವಕವಾಗಿ ಕೇಳುತ್ತೇನೆ. ಈ ವಿಚಾರಗಳಿಗೆ ಸರ್ಕಾರ ಗಮನ ಕೊಡಬೇಕು. ನ್ಯಾಷನಲ್ ಪಾಲಿಸಿ ಇವಾಲ್ವ್ ಮಾಡಿ ಎಲ್ಲ ಮಕ್ಕಳೂ ಒಂದೇ ರೀತಿಯಾಗಿ ದೇಶಾಭಿಮಾನಿಗಳಾಗಿ ದೇಶಭಕ್ತಿಯಿಂದ ಜನಸೇವೆ ಮಾಡುವುದಕ್ಕೆ ಅವಕಾಶವಾಗುವ ಹಾಗೆ ಅಂಥ ತರಹೇತು ಕೊಡುವ ಪುಸ್ತಕಗಳನ್ನು ಬರೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Sri D. B. KALMANKAR.—Do you mean to say that the Text-books that are now prescribed are not based on our national policy of secularism, democracy and socialism; and are these books helping in increasing hatred between one caste and the other?

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ಯಾವರೀತಿ ಇರಬೇಕು ಎನ್ನುವುದನ್ನು ಹೇಳಿದ್ದೇನೆ.

ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಹೇಳಬೇಕೆಂದಿದ್ದೇನೆ ರಾಜ್ಯಾಂಗದ 47ನೇ ಕಲವಿನಲ್ಲಿ ಹೀಗೆ ಹೇಳಿದ್ದಾರೆ.

> "The State shall regard the raising of the level of nutrition and the standard of living of its people on the improvement of public health as among its primary duties and in particular, the State shall endeavour to bring about prohibition of the consumption except for medicinal purposes of intoxicating drinks and of drugs which are injurious to health."

ಈ ಬಗ್ಗೆ ನಾವು ಏನೇನು ಕೆಲಸ ಮಾಡಿದ್ದೇವೆ ಎನ್ನುವ ಪ್ರಶ್ನೆ ಹಾಕಿಕೊಂಡು ಉತ್ತರ ತೆಗೆದುಕೊಳ್ಳಬೇಕಾಗಿದೆ. ಆರೋಗ್ಯ ಇಲಾಖೆಯಲ್ಲಿ ನಾವು ಕಾಲೇಜುಗಳನ್ನು ಕಟ್ಟಿದ್ದೇವೆ. ಕಾಲೇಜುಗಳನ್ನು ಕಟ್ಟಿ ಅವುಗಳಿಗೆ ಪ್ರವೇಶವನ್ನು ಹೇಗೆ ನಿಗದಿ ಮಾಡಬೇಕು ಎಂದು ಆ ಕಡೆಗೆ ಜಾಸ್ತಿ ಗಮನ ಕೊಟ್ಟಿದ್ದೇವೆಯೇ ದಿನಾ ರಸವತ್ತಾಗಿರುವ ಆಹಾರವನ್ನು ಜನಗಳಿಗೆ ಒದಗಿಸಿಕೊಡುವ ಕಡೆ ಗಮನ ಕೊಟ್ಟಿಲ್ಲ. ಜನಗಳು ಹೋದಲ್ಲ ಕೂಲಿ ಕೆಲಸ ಮಾಡುತ್ತಾರೆ. ಬೆಳಿಗ್ಗೆಯಿಂದ ಹೊಟ್ಟೆಗೆ ಇಲ್ಲದೆ 11-12 ಗಂಟೆಯವರೆಗೆ ಕೆಲಸ ಮಾಡುವುದನ್ನು ನೋಡಿದ್ದೇವೆ. ರಸವತ್ತಾಗಿರುವ ಆಹಾರವನ್ನು ಕೊಡುವುದಕ್ಕೇನಾದರೂ ಪ್ರಯತ್ನವನ್ನು ಮಾಡಿದ್ದಾರೆಯೇ? ಈ ಹೊತ್ತಿನವರೆಗೂ ಮಾಡಿಲ್ಲ ಅವರ ಜೀವನ ದುಟ್ಟವನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು, ಮಾಡಿಲ್ಲ. ಅಡ್ಮಿನಿಸ್ಟ್ರೇಷನ್ ಮಾಡುವಾಗ ಡಾಕ್ಟರುಗಳನ್ನು ನೇಮಿಸತಕ್ಕದ್ದು, ಡಾಕ್ಟರುಗಳನ್ನು ವರ್ಗಾವಣೆ ಮಾಡತಕ್ಕದ್ದು, ಮೆಡಿಕಲ್ ಕಾಲೇಜುಗಳನ್ನು ಕಟ್ಟುವುದು, ಮೆಡಿಕಲ್ ಕಾಲೇಜಿಗೆ ಪ್ರವೇಶ ಕೊಡುವುದು ಇಷ್ಟು ಮಾತ್ರಕ್ಕೆ ಸೀಮಿತವಾದರೆ ನಮ್ಮ ಜನಗಳ ಆರೋಗ್ಯದ ಮಟ್ಟವನ್ನು ಯಾವಾಗ ಸುಧಾರಿಸುವುದು? ನನ್ನ ಅನುಭವದಲ್ಲಿ ಹೇಳುತ್ತೇನೆ, ಪ್ರತಿಯೊಂದು ಡಿವಿಜನ್ನಿಗೂ ಒಂದೆರಡು ಫ್ಯಾಕ್ಟರಿಗಳನ್ನು ಮಾಡಿ ಮಲ್ಟಿವಿಟಮಿನ್ ಟ್ಯಾಬ್ಲೆಟ್ಸ್ ತಯಾರು ಮಾಡಿ ಬಡ ಜನಗಳಿಗೆ ಕೊಡಬೇಕು. ಯಾರು ಹೊಟ್ಟೆಗಿಲ್ಲದೆ ಕೆಲಸ ಮಾಡಿ 30 ವರ್ಷಕ್ಕೇ ಸಾಯುತ್ತಾರೆ ಅಂಥವರಿಗೆಲ್ಲ ಈ ಮಲ್ಟಿವಿಟಮಿನ್ ಟ್ಯಾಬ್ಲೆಟ್ಸ್ ಕೊಡತಕ್ಕ ವ್ಯವಸ್ಥೆ ಮಾಡಿ ನ್ಯೂಟ್ರಿಷಸ್ ಫುಡ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಿ ಎಂದು ಹೇಳುತ್ತೇನೆ. ಯಾರು ಕಷ್ಟಪಡುತ್ತಾರೆ ಅವರಿಗೆ ಈ ಸೌಕರ್ಯಗಳು ದೊರೆಯಬೇಕು. ಹೊಟ್ಟೆಗಿಲ್ಲದೆ ಯಾವನು ಕೆಲಸ ಮಾಡುತ್ತಾನೆ ಅವನು ತನ್ನಲ್ಲಿರುವ ಶಕ್ತಿಯನ್ನು ಉಪಯೋಗಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಅದುದರಿಂದ ಅವನು ಬೇಗ ಸಾಯುತ್ತಾನೆ. ಅಂಥವನ ಆರೋಗ್ಯವನ್ನು ಸುಧಾರಣೆ ಮಾಡದಿದ್ದರೆ ಹೇಗೆ? ಅವನು ಹೇಗೆ ಆರೋಗ್ಯವಂತನಾಗಿ ಜೀವನ ಮಾಡುವುದಕ್ಕೆ ಸಾಧ್ಯ? ಅದುದರಿಂದ ಆರೋಗ್ಯ ಮಂತ್ರಿಗಳು ಈ ಕಡೆ ಗಮನ ಕೊಡುತ್ತಾರೆಂದು ನನ್ನ ಆಸೆ. ರಾಜ್ಯಾಂಗದಲ್ಲಿರುವ ಡೈರೆಕ್ಟಿವ್ ಪ್ರಿನ್ಸಿಪಲ್ ಪ್ರಕಾರ ಇದುವರೆಗೂ ಮಾಡಿಲ್ಲ. ಇನ್ನು ಮೇಲಾದರೂ ಮಾಡುವುದಕ್ಕೆ ಮಾನ್ಯ ಶ್ರೀ ಸಿದ್ದವೀರಪ್ಪನವರು ಗಮನ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ವ್ಯವಸಾಯ ಕಾರ್ಮಿಕರು ಈ ದೇಶದಲ್ಲಿ 30 ಪರ್ಸೆಂಟ್ ಇದ್ದಾರೆ. ಅವರಲ್ಲಿ ಹರಿಜನರು 17 ಪರ್ಸೆಂಟ್ ಇದ್ದಾರೆ, ಬಿಲೋ ಪಾವರ್ಟಿ ಲೈನ್ ಇರುವವರು 40 ಪರ್ಸೆಂಟ್ ಜನರಿದ್ದಾರೆ, ಒಂದು ರೂಪಾಯಿಗಿಂತಲೂ ಕಡಮೆ ಆದಾಯವಿರುವ ಜನ. ಈ ಜನರೇನಿದ್ದಾರೆ ಅವರ ಜೀವನ

ವನ್ನು ಸುಧಾರಣೆ ಮಾಡಲಿಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಲೇಬೇಕಾಗುತ್ತದೆ. ನಾವು ಏನು ಮಾಡಿದ್ದೇವೆ ? ರಾಜ್ಯಾಂಗದ 41ನೇ ಕಲಮಿನ ಪ್ರಕಾರ ಯಾವನು ಕೆಲಸ ಮಾಡಲಿಕ್ಕೆ ಇಷ್ಟಪಡುತ್ತಾನೆ ಅವನಿಗೆ ಕೆಲಸ ಒದಗಿಸಬೇಕು ಎಂದು ಹೇಳಿದ್ದಾರೆ. ಆದರೆ ಆ ಬಗ್ಗೆ ನಾವು ಪ್ರಯತ್ನ ಮಾಡಿಲ್ಲ. ಅರ್ಧ ಮಿಲಿಯನ್ ಜನರಿಗೆ ಕೆಲಸವನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಯಾರಿಗೆ ಕೊಡುತ್ತಾರೆ, ಯಾವಾಗ ಕೊಡುವುದು ಎಂದು ನಾನು ಕೇಳುತ್ತೇನೆ. ಅದಕ್ಕೆ ಒಂದು ಯೋಜನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಜಾಹಿರಾತು ಬಂದಿದೆ. 30 ಸಾವಿರ ನಿರುದ್ಯೋಗಿ ಯುವಕರಿಗೆ ಕೆಲಸಗಳು ಕಾದಿವೆ ಎಂದು ಬಂದಿದೆ. ಎಲ್ಲಿ ಮಾಡುತ್ತಿದ್ದಾರೆನ್ನುವುದೇ ಗೊತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಯಾರಿಗೆ ಕೆಲಸ ಸಿಕ್ಕುವುದಿಲ್ಲ ಅಂಥವರಿಗೆ ಕೆಲಸ ಕೊಡುವಂಥ ಯೋಜನೆಯನ್ನು ಅಥವಾ ಕಾರ್ಯಕ್ರಮವನ್ನು ಹಾಕಿಕೊಂಡು ಯಾವನು ಕೆಲಸ ಮಾಡುತ್ತಾನೆ ಅವನಿಗೆ "ಲಿವಿಂಗ್ ವೇಜಸ್" ಕೊಡಬೇಕು ಎಂದು ಇದೆ. ಲಿವಿಂಗ್ ವೇಜ್ ಬಗ್ಗೆ ಏನಾದರೂ ಯೋಚನೆ ಮಾಡಿದ್ದಾರೆಯೇ ? ಯಾರು ಯೋಚನೆ ಮಾಡಿದ್ದಾರೆ ? ಲಿವಿಂಗ್ ವೇಜ್ ಎಂದರೆ ಗೌರವದಿಂದ ಜೀವನ ಮಾಡುವುದಕ್ಕೆ ಎಷ್ಟು ಪ್ರತಿಫಲ ಕೊಡಬೇಕು ಎಂದು ಇದೆ. ಇತ್ತ ಕಡೆ ಗಮನವನ್ನೇ ಕೊಟ್ಟಿಲ್ಲ. ಮಾನ್ಯ ಸದಸ್ಯರೆಲ್ಲ ಮನಸ್ಸು ಮಾಡಿದರೆ ಯಾವನು ಕೆಲಸ ಮಾಡುತ್ತಾನ ಅವನಿಗೆ ಲಿವಿಂಗ್ ವೇಜ್ ಎಂದರೆ ಸಮತೂಕವಾದ ಕೂಲಿಯನ್ನು ಕೊಡಲಿಕ್ಕೆ ಸಾಧ್ಯ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಬಸವಲಿಂಗಪ್ಪನವರು ಮಂತ್ರಿಗಳಾಗಿದ್ದರು. ಅವರು ಈ ಬಗ್ಗೆ ಎಷ್ಟು ಪ್ರಯತ್ನ ಪಟ್ಟರು ? ಅವರೇನಾದರೂ ಈ ಬಗ್ಗೆ ಪ್ರಯತ್ನ ಮಾಡಿದ್ದಕ್ಕ ಅವರನ್ನು ಮಂತ್ರಿಮಂಡಲದಿಂದ ಕಿತ್ತು ಹಾಕಿದರೋ ಎನ್ನುವ ಸಂಶಯ ಬರುತ್ತದೆ. ಅದಕ್ಕೆ ಅವರೇನು ಹೇಳುತ್ತಾರೆ ?

ಶ್ರೀ ಬಿ. ಬಸವಲಿಂಗಪ್ಪ.—ಜನತಾ ಗೃಹ ನಿರ್ಮಾಣ ಕಾರ್ಯಕ್ರಮದ ವಿಚಾರದಲ್ಲಿ ಒಂದೆರಡು ಮಾತು ಹೇಳುತ್ತೇನೆ. ನಮ್ಮ ಸರ್ಕಾರ ಎಲ್ಲರಿಗೂ ನಿವೇಶನಗಳನ್ನು ಕೊಡಬೇಕು ಎನ್ನುವ ಕಾರ್ಯಕ್ರಮವನ್ನು ಹಾಕಿಕೊಂಡು ಎರಡು ಮೂರು ತಿಂಗಳಲ್ಲಿ ಮೂರೂಕಾಲು ಲಕ್ಷ ಸೈಟುಗಳನ್ನು ಮಾಡಿದ್ದಾರೆ. ಕಳೆದ ವರ್ಷ ಆಗಸ್ಟ್ 15ನೇ ತಾರೀಖಿನೊಳಗಾಗಿ 2,30,000 ಸೈಟುಗಳನ್ನು ಹಂಚಿದ್ದಾರೆ. ಎಲ್ಲರಿಗೂ ತೀವ್ರವಾಗಿ ಮನೆಗಳನ್ನು ಕಟ್ಟಿಕೊಡಬೇಕೆಂಬ ಯೋಜನೆಯನ್ನು ಹಾಕಿದ್ದು ಅದಕ್ಕಾಗಿ ಹೋದ ವರ್ಷ ಐದು ಕೋಟಿ ರೂಪಾಯಿ ಹಾಕಿದ್ದರು. ಅದರಲ್ಲಿ ಏನಾದರೂ ಆದೀತು ಎನ್ನುವುದರೊಳಗೆ ಫೈನಾನ್ಷಿಯಲ್ ಕ್ರೈಸಿಸ್ ಬಂತು. ಈ ಹಣವನ್ನು ನಾನು ಹಂಚಿಬಿಟ್ಟಿದ್ದೆ. ಹಂಚಿದ ಸ್ವಲ್ಪ ದಿವಸಗಳಲ್ಲಿ ಅದನ್ನು ತಡೆ ಹಿಡಿಯತಕ್ಕ ಪ್ರಸಂಗ ಬಂತು. ಅದೇನೇ ಇರಲಿ, ಹೌಸಿಂಗ್ ಪ್ರೋಗ್ರಾಂ ಎನಿದೆ, ಅದರಂತೆ 50 ಸಾವಿರ ಮನೆಗಳನ್ನು ಕಟ್ಟಿಸಬೇಕೆಂದು ಮನಸ್ಸಿನ ಟ್ಟುಕೊಂಡಿದ್ದೆ. ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಪ್ರಯತ್ನವನ್ನೂ ಮಾಡಿದೆ. ಆದರ ಫೈನಾನ್ಷಿಯಲ್ ಕ್ರೈಸಿಸ್ ಬಂದು ಆ ಕೆಲಸ ಮಾಡುವುದಕ್ಕಾಗಲಿಲ್ಲ. ಹೋದ ಸಾರಿ ಐದು ಕೋಟಿ ರೂಪಾಯಿ ಇಟ್ಟಿದ್ದರು. ಈ ಸಲ ಎರಡು ಕೋಟಿ ಮೂವತ್ತೈದು ಲಕ್ಷ ರೂಪಾಯಿ ಇಟ್ಟಿದ್ದಾರೆ. ಮೊದಲಿನದು ಮತ್ತು ಈಗಿನದು ಒಟ್ಟು ಹತ್ತು ಕೋಟಿ ರೂಪಾಯಿಗಳನ್ನು ಅವರು ಮನೆಗಳನ್ನು ಕಟ್ಟಿಸುವುದಕ್ಕೆ ಉಪಯೋಗ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಈ ವರ್ಷ 2.35 ಲಕ್ಷ ಹೌಸಿಂಗ್ ಸ್ಕೀಂಗಾಗಿ ಇರುವುದು ಸರಿಯಲ್ಲ. ಇದೊಂದು ಜನತಾ ಯೋಜನ. ಇಂತಹ ಯೋಜನೆಯ ಕಾರ್ಯಗಳನ್ನು ಕುಂಠಿತ ಮಾಡುವುದು ಸರಿಯಲ್ಲ ಎನ್ನುವುದನ್ನು ನಾನೂ ಒಪ್ಪುತ್ತೇನೆ ಹಾಗೆ ನಮ್ಮ ಮಾನ್ಯ ಸದಸ್ಯರೂ ಒಪ್ಪುತ್ತಾರೆ. ಇದರಲ್ಲಿ ಜನರಿಗಿರುವ ಆಸೆಯನ್ನು ನಿರಾಶೆಯಾಗಿ ಮಾಡಬಾರದಾಗಿತ್ತು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾವೇನೂ ಮಾಡಲಿಲ್ಲ. ನಿಮ್ಮ ಪಾರ್ಟಿಯವರೇ ಮಾಡಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ಕನ್ನಡ ನಿಘಂಟು ಹಾಗೂ ಅರ್ಥಕೋಶವನ್ನು ಬರೆಯುವುದಕ್ಕಾಗಿ ಹಣವನ್ನು ಒದಗಿಸಿದ್ದಾರೆ. ಇದು ಒಂದು ಸಂತೋಷದ ವಿಚಾರ. ಇವನ್ನು ಬರೆಯುವಾಗ ಎಂತಹ ಪುಸ್ತಕಗಳನ್ನು ಬರೆಯಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ನಾನು ಹೇಳುವುದು ದೇಶಭಕ್ತರುಗಳನ್ನು ತಯಾರು ಮಾಡತಕ್ಕ ಭಾಷೆಯಲ್ಲಿ ಪುಸ್ತಕಗಳನ್ನು ಬರೆಯಲು ಯತ್ನ ಮಾಡಬೇಕು. ಜನರ ಜೀವನಮಟ್ಟವನ್ನು ಉನ್ನತಮಟ್ಟಕ್ಕೇರಿಸುವಂತಹ ಪುಸ್ತಕಗಳನ್ನು ಬರೆಯಬೇಕು. ಇಂದು ಒಳ್ಳೆಯ ತಜ್ಞರಾದವರು ಪುಸ್ತಕಗಳನ್ನು ಬರೆಯುತ್ತಾರೆ. ಅವರಿಗೆ

(ಶ್ರೀ ಬಿ. ಬಸವಲಿಂಗಪ್ಪ)

ಒಳ್ಳೆಯ ಪುಸ್ತಕಗಳನ್ನು ಬರೆಯಲು ಉತ್ತೇಜನ ಕೊಡುತ್ತಾರೆ. ಕೊಡಿ ನನಗೂ ಸಂತೋಷ. ಆದರೆ ಏನೋ ಒಂದು ಕಟ್ಟು ಕತೆಯನ್ನು ಬರೆಯುವಂತೆ ಪುಸ್ತಕಗಳನ್ನು ಬರೆಯುವುದು ಸರಿಯಲ್ಲ. ಆದರೆ ಹಳೇ ಕಾಲದ ಪದ್ಧತಿಯನ್ನು ಕುರಿತು ಬರೆಯುವುದು ಸರಿಯಲ್ಲ. ನಾನು ಕೂಡ ಕೇಳಿದ್ದೇನೆ. ಕೆಲವು ಕಡೆ ಇರುವ ಗುಡಿಗಳ ಸಮೀಪದಲ್ಲೇ ಸ್ನಾನದ ಕೊಳಗಳು ಇರುತ್ತವೆ. ಗುಡಿಗೆ ಹೋಗುವವರು ಮೊದಲು ಅಲ್ಲಿರುವ ಕೊಳದಲ್ಲಿ ಸ್ನಾನ ಮಾಡಿ ದೇವರಿಗೆ ಪೂಜೆ ಸಲ್ಲಿಸಬೇಕೆಂದು ಹೇಳುತ್ತಾರೆ. ಇಂತಹ ಒಂದು ನಿಯಮವಿದೆ. ಅಲ್ಲಿರುವ ಕೊಳದಲ್ಲಿ ಸ್ನಾನ ಮಾಡಿದರೆ ಅದರಿಂದ ಪುಣ್ಯ ಬರುತ್ತದೆ ಎಂದೂ ಹೇಳುತ್ತಾರೆ. ಕೆಲವು ಕಡೆ ಇರುವ ಕೊಳಗಳ ನೀರು ಚೆನ್ನಾಗಿರುತ್ತದೆ. ಅಲ್ಲೇನೋ ಸ್ನಾನ ಮಾಡಬಹುದು. ನಾನು ಕೂಡ ಒಂದು ಗುಡಿಯ ಬಳಿ ಹೋಗಿ ನೋಡಿದೆ. ಆ ಗುಡಿಯ ಬಳಿ ಇದ್ದ ಕೊಳದ ನೀರು ತೀರ ಕೊಳಕಾಗಿತ್ತು ಮತ್ತು ಸ್ನಾನ ಮಾಡಲು ಯೋಗ್ಯವಾಗೂ ಇರಲಿಲ್ಲ. ಇದಕ್ಕಾಗಿ ನಾನು ಕನ್ನಡ ಪುಸ್ತಕಗಳು ಬರೆಯುವಾಗ ಸಾರ್ಥಕವಾದ ಹಾಗೂ ಉತ್ತಮವಾದ ಪುಸ್ತಕಗಳನ್ನು ಬರೆಯಬೇಕೆಂದು ಹೇಳುತ್ತೇನೆ. ಕೊಳಕು ನೀರಿನಂತಿರಬಾರದು ಇವರ ಬಗ್ಗೆ ಮೈಸೂರಿನಲ್ಲಿ ಈ ಬಗ್ಗೆ ಭಾಷಣ ಮಾಡಿದೆ. ಕನ್ನಡ ಭಾಷೆಯನ್ನೇ ಭೂಸಾ ಎಂದು ಕರೆದರೆಂದು ಪಬ್ಲಿಕ ಮಾಡಿದರು.

ಶ್ರೀ ಬಿ ಪುಟ್ಟಸ್ವಾಮಯ್ಯ.—ನೀವು ಆ ಭಾಷಣ ಮಾಡಿದ್ದರೆ ಇಂದು ಇಷ್ಟು ಪ್ರಖ್ಯಾತರಾಗುತ್ತಿರಲಿಲ್ಲ. ಇಂದು ಅವರೇ ನಿಮ್ಮ ಬಗ್ಗೆ ಪುಸ್ತಕವನ್ನು ನಿಮ್ಮ ಹೆಸರಿನಲ್ಲಿ ಬರೆಯಲು ಆರಂಭ ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಸರಕಾರಕ್ಕೆ ಹೇಳುವುದು ಸಾರ್ಥಕವಾದ ಹಾಗೂ ಯೋಗ್ಯವಾದ ಪುಸ್ತಕಗಳನ್ನು ಬರೆಸಿದರೆ ನನ್ನ ಅಭ್ಯಂತರವೇನಿಲ್ಲ. ಪುಸ್ತಕಗಳನ್ನು ಬರೆಯುವವರು ಹಿಂದೆ ಯಾವುದೋ ಕಾಲದಲ್ಲಿದ್ದ ಪುಸ್ತಕಗಳನ್ನು ನೋಡಿ ಮತ್ತೆ ಅದೇ ರೀತಿ ಪುಸ್ತಕಗಳನ್ನು ಬರೆದರೆ ಅದರಿಂದೇನೂ ಉಪಯೋಗವಿಲ್ಲ. ಒಳ್ಳೆಯ ಪುಸ್ತಕವನ್ನು ಬರೆಯಲು ಸಾಕಷ್ಟು ಉತ್ತೇಜನ ಕೊಡಬೇಕು ಇಂತಹ ಕೆಲಸಗಳನ್ನು ಮಾಡಲು ಯತ್ನ ಮಾಡುತ್ತಾರೆಂದು ಹೇಳುತ್ತೇನೆ.

ಇನ್ನು ಸಾಮಾಜಿಕವಾಗಿ ಹಿಂದುಳಿದವರು ಹಾಗೂ ದುರ್ಬಲವರ್ಗದವರು ವೀಕರ್ ಸೆಕ್ಷನ್‌ಗಳನ್ನು ನಿರ್ಧಾರ ಮಾಡಲು ಒಂದು ಬ್ಯಾಕ್‌ವರ್ಡ್ ಕಮಿಷನ್‌ನನ್ನು ನೇಮಕ ಮಾಡಿ ಅವರು ಸಲಹೆಗಳನ್ನು ಕೊಡಬೇಕೆಂದು ಹೇಳಿದ್ದಾರೆ. ದುರ್ಬಲವರ್ಗಗಳು ಯಾವು ಮತ್ತು ಹಿಂದುಳಿದ ವರ್ಗಗಳು ಯಾವು ಎಂದು ನಿರ್ಧಾರ ಮಾಡಬೇಕಾಗಿದೆ ನಿಗದಿಯಾದ ಪಟ್ಟಿ ಇಲ್ಲದೆ ಹೋದರೆ ನಾವು ಯಾರಿಗೂ ಸಹಾಯ ಮಾಡುವುದಕ್ಕಾಗುವುದಿಲ್ಲ. ಸರಕಾರವೇನೋ ಬ್ಯಾಕ್‌ವರ್ಡ್ ಕ್ಲಾಸು ಕಮಿಷನ್ ಎಂದು ಮಾಡಿದ್ದಾರೆ. ಈ ಕಮಿಷನ್ನಿನವರು ಅತಿ ಜಾಗ್ರತೆಯಾಗಿ ಒಂದು ರಿಪೋರ್ಟನ್ನು ಸರಕಾರಕ್ಕೆ ಕೊಟ್ಟರೆ ಅದರಿಂದ ಇವೆಲ್ಲ ನಿರ್ಧಾರಮಾಡಲು ಅನುಕೂಲವಾಗುತ್ತದೆ. ಸರಕಾರ ವರದಿಯನ್ನು ಅತಿ ಶೀಘ್ರವಾಗಿ ತರಿಸಿಕೊಳ್ಳಲು ಒತ್ತಾಯ ಮಾಡಬೇಕೆಂದು ಹೇಳುತ್ತೇವೆ. ಇಷ್ಟು ಮಾತುಗಳನ್ನು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕ ಬಜೆಟ್ಟನ್ನು ವಿರೋಧಿಸಿ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. 1972ನೇ ಇಸವಿಯಲ್ಲಿ ಮಾನ್ಯ ಅರ್ಥ ಸಚಿವರು ಮೊದಲನೇ ಸಾರಿ ಆಯವ್ಯಯ ಮಂಡನೆ ಮಾಡುವಾಗ ಒಂದು ಪದವನ್ನು ಅವರ ಭಾಷಣದಲ್ಲಿ ಹೇಳಿದರು. ಅದು ಬಹಳ ಅಪ್ಯಾಯಮಾನವಾದ ಪದ. ಅದು ಏನೆಂದರೆ ಹಳ್ಳಿಗಳನ್ನೆಲ್ಲಾ ನಗರೀಕರಣ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಅದರ ಮೇಲೆ ಹೆಚ್ಚು ಪ್ರಚಾರ ಭಾಷಣಗಳು ಈ ಸಭೆಯಲ್ಲಾದವು. ಅನೇಕ ಕಡೆ ನಮ್ಮ ಬಜೆಟ್ಟು ಕಾಮಧೇನುವಾಗಿದೆ ಎಲ್ಲರಿಗೂ ಸರಿಸಮಾನವಾದ ಸುಖ ಸಂತೋಷಗಳನ್ನು ಕೊಡುವಂತಹ ಕೆಲಸಗಳನ್ನು ಮಾಡಿದ್ದೇವೆ ಎಂದು ಇಲ್ಲಿ ಭಾಷಣ ಮಾಡಿದರು. ನೀವೇ ಹೇಳಿದಂತೆ ಇದುವರೆಗೆ ಎಷ್ಟು ಹಳ್ಳಿಗಳನ್ನು ನಗರೀಕರಣ ಮಾಡಿದ್ದೀರಿ ? ಇದರ ಬಗ್ಗೆ ಹೇಳುವಾಗ ಇವರ ಸ್ಪಷ್ಟ ಚಿತ್ರ ಏನು ಎನ್ನುವುದನ್ನೂ ತಿಳಿಸಲಿಲ್ಲ. ಎಷ್ಟು ಮಟ್ಟಿಗೆ ಹಳ್ಳಿಗಳನ್ನೆಲ್ಲಾ ನಗರೀಕರಣ ಮಾಡಲು ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂದು ಇಲ್ಲಿ ಕೇಳಬೇಕಾಗಿದೆ. ಇವರ ಬಗ್ಗೆ ಒಂದು ಪ್ರಶ್ನೆ ಕೂಡ ಕಳಿಸಿದ್ದೆ. ಆದರೆ ಇದು ಬರಲಿಲ್ಲ. ಇದರ ಸ್ಪಷ್ಟೀಕರಣವನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕೆಂದು ಹೇಳಲು ಇಷ್ಟಪಡುತ್ತೇನೆ. ಇಂದು ಹಳ್ಳಿಗಳ ಪರಿಸ್ಥಿತಿ

ನೋಡಿದರೆ ಹಿಂದೆಂದೂ ಕಣದಂತಹ ಕಷ್ಟ ಪರಿಸ್ಥಿತಿಗಳಲ್ಲಿ ಜನ ಇಂದು ತೊಂದರೆಗಳಿಗೆ ಒಳಗಾಗಿದ್ದಾರೆ. ಇಂತಹ ಪರಿಸ್ಥಿತಿ ಹಿಂದೆಂದೂ ಬಂದಿರಲಿಲ್ಲ. ಇದು ಹೇಗಿದೆ ಎಂದರೆ ಸುಟ್ಟ ಗಾಯದ ಮೇಲೆ ಬರೆ ಎಳೆಯುವಂತೆ ಇಂದು ಜನತೆಯ ಪರಿಸ್ಥಿತಿಯಾಗಿದೆ. ಇಂತಹ ಒಂದು ಭೀಕರವಾದ ಪರಿಸ್ಥಿತಿ ಬಂದಿರುವಾಗ ನಮ್ಮ ಆಯವ್ಯಯದಲ್ಲಿ ತೆರಿಗೆಗಳನ್ನು ಹಾಕಿದ್ದಾರೆ. ಪ್ಲಾನಿಂಗು ಇಲಾಖೆಯಲ್ಲಿ ಹೆಚ್ಚು ಕೆಲಸಗಳಾಗಬೇಕು ಎನ್ನುವ ದೃಷ್ಟಿಯಿಂದ ಈ ಪ್ಲಾನಿಂಗು ಡಿಪಾರ್ಟುಮೆಂಟಿನಲ್ಲಿ ಏಳು ಜನ ಅಧಿಕಾರಿಗಳಿಗೆ 1300 ರಿಂದ 1800 ರೂಪಾಯಿಗಳವರೆಗೆ ಸಂಬಳ ಕೊಟ್ಟು ಇಲ್ಲಿರುವ ಅಧಿಕಾರಿಗಳ ಸಂಖ್ಯೆಗಳನ್ನು ಜಾಸ್ತಿ ಮಾಡುತ್ತಲಿದ್ದಾರೆ ಎಂದು ಕೇಳುತ್ತೇವೆ. ಸರಕಾರ ಒಂದು ಸಾವಿರಕ್ಕೆ ಮೇಲ್ಪಟ್ಟು ಯಾರಿಗೂ ಸಂಬಳ ಕೊಡಕೂಡದೆಂದು ಇದ್ದರೂ ಇಂತಹ ಅಧಿಕಾರಿಗಳನ್ನು ಪ್ಲಾನಿಂಗು ಇಲಾಖೆಯಲ್ಲಿ ಇಡಲು ಕಾರಣವಾದರೂ ಏನು ? ಇದರಿಂದ ಏನಾದರೂ ಮೂಲಭೂತವಾದ ಬದಲಾವಣೆಯೇನಾದರೂ ಆಗಿದೆಯೇ ? ಇದೊಂದು ಅನಾವಶ್ಯಕವಾದ ಖರ್ಚು ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ಸರಕಾರವೇ ಹೇಳಿರುವ ವರದಿಯಂತೆ ಜನರ ಜೀವನಾವಶ್ಯಕವಾದ ವಸ್ತುಗಳ ಬೆಲೆ ಶೇಕಡ ನಲವತ್ತಕ್ಕಿಂತ ಜಾಸ್ತಿಯಾಗಿದೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಇದರಿಂದಾಗಿ ಸರಕಾರದಲ್ಲಿರುವ ನೌಕರರು ಕೂಡ ಹೆಚ್ಚು ಸಂಬಳ ಬೇಕೆಂದು ಕೇಳುತ್ತಾರೆ. ಸರಕಾರ ಕೂಡ ಇವರಿಗೆ ಐದು ಇಲ್ಲವೆ ಹತ್ತು ರೂಪಾಯಿಗಳಷ್ಟು ಜಾಸ್ತಿ ಮಾಡಿ ಕೊಟ್ಟರೆ ಇದರಿಂದೇನೂ ಅನುಕೂಲವಾಗುವುದಿಲ್ಲ. ಇಂದು ಜೀವನಾವಶ್ಯಕವಾದ ವಸ್ತುಗಳು ವಿಪರೀತ ಏರುತ್ತಾ ಹೋಗುತ್ತಿವೆ, ಇದಕ್ಕಾಗಿ ಸ್ವಲ್ಪ ಮಟ್ಟಿಗೆ ಸಂಬಳ ಜಾಸ್ತಿ ಕೊಟ್ಟರೆ ಇದೇನೂ ಪರಿಹಾರವಾಗುವುದಿಲ್ಲ. ಇಂದು ಇರತಕ್ಕ ಸರಕಾರದ ನೌಕರರು ಸುಮಾರು ಒಂದು ಕೋಟಿಗೆ ಮೇಲ್ಪಟ್ಟು ಇದ್ದರೂ ಇವರಿಗಾಗಿ ಹೆಚ್ಚು ಸಂಬಳ ಮತ್ತು ಡಿ. ಎ. ಎಂದು ಕೊಟ್ಟು ಹೆಚ್ಚು ಸಂಖ್ಯೆ ಎಂದು ಮಾಡಿದರೆ ಅದರಿಂದೇನೂ ಅನುಕೂಲವಾಗುವುದಿಲ್ಲ ಮತ್ತು ಇಂದು ಆಡಳಿತ ಕುಂಠಿತವಾಗುತ್ತಿದೆ ಮತ್ತು ದೇಶದಲ್ಲಿ ಇದರಿಂದ ಕರಪ್ಷನ್ ಹೆಚ್ಚಾಗುತ್ತಿದೆ. ಸರಕಾರ ಇದರ ಬಗ್ಗೆ ಸರಿಯಾದ ಪಾಲಿಸಿ ಅನುಸರಿಸುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

1965ನೇ ಇಸವಿಯಲ್ಲಿ ಸರ್ಕಾರೀ ನೌಕರರ ಸಂಬಳ 55 ಕೋಟಿ ರೂಪಾಯಿಗಳಿದ್ದರೆ, ಅದು ಇಂದು 130 ಕೋಟಿ ರೂಪಾಯಿಗಳಿಂದ 140 ಕೋಟಿ ರೂಪಾಯಿಗಳವರೆಗೆ ಹೆಚ್ಚಿದೆ. ಇರತಕ್ಕಂಥ ನೌಕರರಿಗೆ ಹೆಚ್ಚು ಸಂಬಳ ಕೊಡುವುದಕ್ಕಾಗದಿದ್ದರೂ ಸಹ ಮತ್ತೆ ಹೊಸದಾಗಿ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದೀರಿ ; ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಈ ರೀತಿ ಮಾಡುತ್ತಿದ್ದೇವೆಂದು ತಾವು ಉತ್ತರ ಕೊಡಬಹುದು ; ಆದರೆ ಅದು ಸರಿಯಾದ ಅಭಿಪ್ರಾಯವಾಗುವುದಿಲ್ಲ ; ತಾವು ಈಗ ಅನ್‌ಪ್ರೊಡಕ್ಟೀವ್ ಲೈನ್‌ಗೆ ಹೆಚ್ಚು ಹಣ ಖರ್ಚು ಮಾಡುತ್ತಿದ್ದೀರಿ ; ಅದನ್ನು ಕಡಿಮೆ ಮಾಡಬೇಕೆಂದು ನಾನು ಹೇಳುತ್ತೇನೆ.

5-00 P.M.

ಇನ್ನು ಕಳೆದವರ್ಷ ನಮ್ಮ ರಾಜ್ಯದ ಉತ್ತರ ಭಾಗದ ಕೆಲವು ಜಿಲ್ಲೆಗಳಲ್ಲಿ ಕ್ಷಾಮ ಬಂದಾಗ ಸರ್ಕಾರದವರು ಅನೇಕ ರೀತಿಯಲ್ಲಿ ಹಣವನ್ನು ಖರ್ಚು ಮಾಡಿದರು. ಒಂದು ಬಾಬಿನಲ್ಲಿ ಖರ್ಚು ಮಾಡಿದ ಹಣದ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತೇನೆ. ಅದೇನೆಂದರೆ, ಆ ಭಾಗಗಳಲ್ಲಿ ದುರ್ಬಲ ವರ್ಗದ ಜನರಿಗೆ ಆಹಾರಧಾನ್ಯಗಳನ್ನು ಹಂಚಲು ಲಕ್ಷಾಂತರ ರೂಪಾಯಿಗಳನ್ನು ವ್ಯಯ ಮಾಡಿದರು. ಜನರಿಗೆ ಕೋಳಿಮೊಟ್ಟೆಗಳನ್ನು ಸಹ ಕೊಟ್ಟರು ಎಂದು ಕೇಳಿದ್ದೇನೆ. ಯಾವ ಯಾವ ತಿಂಗಳುಗಳಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಆಹಾರಧಾನ್ಯವನ್ನು ಹಂಚಿದರು, ಯಾವ ರೇಟ್‌ನಲ್ಲಿ ಹಂಚಿದರು, ಅದಕ್ಕೆ ಎಷ್ಟು ಖರ್ಚಾಯಿತು ಬಗ್ಗೆ ಎಂಬ ವಿವರಣೆ ಕೊಡಬೇಕೆಂದು ಮಾನ್ಯ ಅರ್ಥಿಕ ಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ರೈತರು ಉಪಯೋಗ ಮಾಡತಕ್ಕಂಥ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶ ವಸ್ತುಗಳ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ. ಅದೇ ರೀತಿ ಸಾಮಾನ್ಯ ಜನರು ಉಪಯೋಗ ಮಾಡುವ ಸೈಕಲ್ ಮುಂತಾದ ವಸ್ತುಗಳ ಮೇಲಿನ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ. ಈ ರೀತಿ ಜಾಸ್ತಿ ಮಾಡಿದ್ದು ಯಾವ ರೀತಿ ಸಮಂಜಸವಾಗಿದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದೆ ಬಿದ್ದಿರುವ ಜನರ ಮೇಲೆ ಮತ್ತಷ್ಟು ತೆರಿಗೆಯನ್ನು ಅಪ್ರತ್ಯಕ್ಷವಾಗಿ ಹಾಕುವುದರ ಮೂಲಕ ಅವರ ಒಂದು ಕಷ್ಟವನ್ನು ಹೆಚ್ಚು ಮಾಡಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಆಹಾರಧಾನ್ಯದ ಉತ್ಪಾದನೆ ಜಾಸ್ತಿಯಾಗಬೇಕೆಂದು

(ಶ್ರೀ ಕೆ. ಹೆಚ್. ಹನುಮೇಗೌಡ)

ತಾವು ಒಂದು ಕಡೆ ಹೇಳುತ್ತಿರುವಾಗ, ಮತ್ತೊಂದು ಕಡೆ ಗೊಬ್ಬರ ಮತ್ತು ಕ್ರಿಮಿನಾಶಕ ವಸ್ತುಗಳ ಮೇಲೆ ತೆರಿಗೆ ಜಾಸ್ತಿ ಮಾಡಿದ್ದೀರಿ. ಈ ವಸ್ತುಗಳ ಮೇಲೆ ಕೇಂದ್ರ ಸರ್ಕಾರದವರು ಸಹ ತೆರಿಗೆ ಹಾಕಿದ್ದಾರೆ. ಇದನ್ನು ನೋಡಿದರೆ ತಮಗೆ ಆಹಾರದ ಉತ್ಪಾದನೆ ಜಾಸ್ತಿಯಾಗಬೇಕೆಂಬ ಉದ್ದೇಶ ಇದ್ದಂತೆ ಕಾಣುವುದಿಲ್ಲ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಈ ಮೊದಲು ಲೆವಿ ಬತ್ತದ ಬೆಲೆ 58 ರೂಪಾಯಿಗಳು ಇತ್ತು; ಅದನ್ನು 68 ರೂಪಾಯಿಗಳಿಗೆ ಹೆಚ್ಚಿಸಿದ್ದೀರಿ. ಅಂದರೆ ಹತ್ತು ರೂಪಾಯಿಗಳಷ್ಟು ಮಾತ್ರ ಜಾಸ್ತಿ ಮಾಡಿದ್ದೀರಿ. ರೈತರು ಕೊಂಡುಕೊಳ್ಳುವ ಪದಾರ್ಥಗಳ ಬೆಲೆ 40 ರಿಂದ 50 ಪರ್ಸೆಂಟ್‌ವರೆಗೆ ಜಾಸ್ತಿಯಾಗಿರುವಾಗ ತಾವು ಕೇವಲ ಹತ್ತು ರೂಪಾಯಿಗಳನ್ನು ಜಾಸ್ತಿ ಮಾಡಿರುವುದನ್ನು ನೋಡಿದರೆ, ಈ ಸರ್ಕಾರ ರೈತರ ವಿರೋಧಿ ಸರ್ಕಾರ ಎಂದು ಹೇಳಿದರೆ ತಪ್ಪಾಗಲಾರದು. ಸರ್ಕಾರದವರು ಲೆವಿ ಬತ್ತದ ಬೆಲೆಯನ್ನು ನಿಗದಿ ಮಾಡುವಾಗ ರೈತರ ಪ್ರತಿನಿಧಿಗಳನ್ನು ಕೇಳಿ ಮಾಡಬೇಕಾಗಿತ್ತು. ಮಾನ್ಯ ಅರ್ಥಿಕ ಮಂತ್ರಿಗಳು ಈ ರಾಜ್ಯದಲ್ಲಿ ಫೈನಾನ್ಷಿಯಲ್ ಡಿಸಿಪ್ಲಿನ್ ತರುವುದರ ಮೂಲಕ ಅಗತ್ಯವಿರುವ ಕಡೆಗಳಲ್ಲಿ ಮಾತ್ರ ಹಣ ಖರ್ಚಾಗಬೇಕು ಎಂಬತಕ್ಕಂತ ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಯಾವ ಯೋಜನೆಯಿಂದ ಈ ಪದ್ಧತಿಯನ್ನು ಜಾರಿಗೆ ತಂದರೋ ಅದರ ಮೂಲ ಉದ್ದೇಶವೇನು ಎಂಬುದನ್ನು ಜನತೆ ಈಗಾಗಲೇ ಅರ್ಥಮಾಡಿಕೊಂಡಿದೆ ಎಂದು ನಾನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವರ ಇಲಾಖೆಯಿಂದ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕು ಎಂಬ ಬಗ್ಗೆ ಲೆಟರ್ ಆಫ್ ಕ್ರೆಡಿಟ್‌ನ್ನು ಪ್ರತಿ ತಿಂಗಳು ಲೋಕೋಪಯೋಗಿ ಇಲಾಖೆಗೆ ಕಳುಹಿಸಿಕೊಡುತ್ತಿದ್ದಾರೆ. ಸರ್ಕಾರದವರಿಗೆ ಯಾವ ಯಾವ ಜಿಲ್ಲೆಗಳ ಮೇಲೆ ಇಂಟರೆಸ್ಟ್ ಇದೆಯೋ ಅಂತಹ ಜಿಲ್ಲೆಗಳಿಗೆ ಹೆಚ್ಚು ಹಣವನ್ನು ಒದಗಿಸಿ ಉಳಿದ ಜಿಲ್ಲೆಗಳಿಗೆ ಕಡಿಮೆ ಹಣವನ್ನು ಒದಗಿಸುತ್ತಿದ್ದಾರೆ. ಇದರಿಂದ ಕೆಲವು ಜಿಲ್ಲೆಗಳ ಅಭಿವೃದ್ಧಿ ಕಾರ್ಯಗಳು ಅಧೋಗತಿಗೆ ಹೋಗುವುದಕ್ಕೆ ಅವಕಾಶವಾಗಿದೆ ಎಂದು ನಾನು ಚಾರ್ಜ್ ಮಾಡುತ್ತಿದ್ದೇನೆ. ಈಗ ಬೇಸಿಗೆ ಕಾಲವಾದ್ದರಿಂದ ಕೆರೆಕಟ್ಟೆಗಳ ರಿಪೇರಿ ಮತ್ತು ತೂಬುಗಳ ರಿಪೇರಿಯಾಗಬೇಕಾಗಿದೆ. ಈ ಕೆಲಸಗಳಿಗೆ ನಮ್ಮ ಹಾಸನ ಜಿಲ್ಲೆಗೆ ಕೇವಲ 50-60 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸುತ್ತಿದ್ದಾರೆ. ಈ ಹಣ ಕೇವಲ ಅಧಿಕಾರಿಗಳ ಸಂಬಳಕ್ಕೆ ಮತ್ತು ಟಿ.ಎ. ಮತ್ತು ಡಿ.ಎ.ಗೆ ಖರ್ಚಾಗಿ ಯಾವ ಅಭಿವೃದ್ಧಿ ಕೆಲಸಗಳೂ ಸಹ ಆಗುತ್ತಿಲ್ಲ; ಅದೇ ಬಳ್ಳಾರಿ ಜಿಲ್ಲೆಯನ್ನು ತೆಗೆದುಕೊಂಡರೇ.........

ಶ್ರೀ ಎಂ. ವೈ. ಘೋರ್ಪಡೆ.—ಲೆಟರ್ ಆಫ್ ಕ್ರೆಡಿಟ್‌ನ್ನು ಲೋಕೋಪಯೋಗಿ ಇಲಾಖೆಗೆ ಕೊಡುತ್ತೇವೆ, ಅವರು ಪ್ರತಿ ಡಿವಿಜನ್‌ಗೂ ಹಣವನ್ನು ಅಲಾಟ್ ಮಾಡುತ್ತಾರೆ. ಆ ಜಿಲ್ಲೆಗೆ ಅಷ್ಟು ಹಣ ಖರ್ಚು ಮಾಡಬೇಕು, ಈ ಜಿಲ್ಲೆಗೆ ಇಷ್ಟು ಹಣ ಖರ್ಚು ಮಾಡಬೇಕು ಎಂದು ನಮ್ಮ ಇಲಾಖೆಯಿಂದ ಅವರಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ತಮ್ಮ ಅಧಿಕಾರಿಗಳು ತಪ್ಪು ಮಾಡಿದರೂ ಸಹ ಅದಕ್ಕೆ ನೀವೇ ಜವಾಬ್ದಾರರು. ಮಾನ್ಯ ಮಂತ್ರಿಗಳ ಜಿಲ್ಲೆಯಾದ ಬಳ್ಳಾರಿ ಜಿಲ್ಲೆಯಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಲೆಟರ್ ಆಫ್ ಕ್ರೆಡಿಟ್‌ನಲ್ಲಿ ಒದಗಿಸಿದ್ದ ಹಣಕ್ಕಿಂತ 26 ಲಕ್ಷ ರೂಪಾಯಿಗಳನ್ನು ಹೆಚ್ಚು ಪೇಮೆಂಟ್ ಮಾಡಿದ್ದಾರೆ. ಇದಕ್ಕೆ ತಮ್ಮ ಪರೋಕ್ಷವಾದ ಬೆಂಬಲ ಮತ್ತು ಪ್ರಭಾವ ಇದೆ ಎಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ಅದೇ ರೀತಿ ಕಳೆದ ತಿಂಗಳು ಮಾನ್ಯ ಚೆನ್ನಬಸಪ್ಪನವರ ಕ್ಷೇತ್ರವಾದ ಕೆ.ಆರ್. ನಗರ ಡಿವಿಜನ್‌ಗೆ 3 ಲಕ್ಷ ರೂಪಾಯಿಗಳಷ್ಟು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಇದೇ ರೀತಿ ಬೇರೆ ಡಿವಿಜನ್‌ಗಳಿಗೂ ಸಹ ಏತಕ್ಕೆ ದುಡ್ಡು ಒದಗಿಸುವುದಿಲ್ಲ; ಇದರಲ್ಲಿ ತಮ್ಮ ಕೈವಾಡ ಇಲ್ಲ ಎನ್ನುವುದಾದರೆ ಎಲ್ಲ ಡಿವಿಜನ್‌ಗಳಿಗೂ ಸಹ ಒಂದೇ ರೀತಿಯಲ್ಲಿ ಹಣವನ್ನು ಏತಕ್ಕೆ ಹಂಚಬಾರದು? ಈಗ ಬೇಸಿಗೆ ಕಾಲವಾದ್ದರಿಂದ ಎಲ್ಲ ರಿಪೇರಿ ಕೆಲಸಗಳು ಆಗಬೇಕಾಗಿವೆ. ಆದಕಾರಣ ಈ ಬಗ್ಗೆ ತಾರತಮ್ಯ ಮಾಡಬಾರದು, ಮಾಡಿದರೆ ಅದಕ್ಕೆ ಮಾನ್ಯ ಅರ್ಥಿಕ ಮಂತ್ರಿಗಳೇ ಜವಾಬ್ದಾರರು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಬೆಂಗಳೂರು ನಗರದಲ್ಲಿ ಬಿಲ್ಡಿಂಗ್ ಡಿವಿಜನ್ ಇವೆ. ಇದಕ್ಕೆ ಸೇರಿದಂತೆ ಇರುವ ಒಂದು ಮತ್ತು ಮೂರನೇ ಸಬ್ ಡಿವಿಜನ್‌ಗಳು ವಿಧಾನಸೌಧವನ್ನು ನೋಡಿಕೊಳ್ಳುವುದಕ್ಕೆ ಇವೆ. ಈ ಸಬ್ ಡಿವಿಜನ್‌ಗಳ ಮೂಲಕ ಪ್ರತಿತಿಂಗಳು 2-3 ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ. ಇದಕ್ಕೆ ಪ್ಲಾನ್ ಇಲ್ಲ, ಎಸ್ಟಿಮೇಟ್ ಇಲ್ಲ; ಮತ್ತು ಆ ರೀತಿ ಹಣ ಖರ್ಚು ಮಾಡುವ ಬಗ್ಗೆ ಹೇಳುವವರಿಲ್ಲ, ಕೇಳುವವರಿಲ್ಲ; ಅವರು ಖರ್ಚು ಮಾಡಿದ ಬಗ್ಗೆ ಕೊಡುತ್ತಿರುವ ಅಂಕಿ ಅಂಶಗಳೆಲ್ಲಾ ಬೋಗಸ್;

ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿಲ್ಲವೇ ? ಈ ದೇಶದ ಬಡ ಜನರು ಕೊಟ್ಟಂತಹ ಹಣವನ್ನು ಈ ರೀತಿ ಮನಸೋಚ್ಛೆ ಖರ್ಚು ಮಾಡುವುದಕ್ಕೆ ಕಾರಣವೇನು? ಇದನ್ನು ನೋಡಿಕೊಳ್ಳುವುದು ಮಾನ್ಯ ಅರ್ಥಿಕ ಮಂತ್ರಿಗಳ ಜವಾಬ್ದಾರಿ ಅಲ್ಲವೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಲೆಟರ್ ಆಫ್ ಕ್ರೆಡಿಟ್ ಪಾಲಿಸಿ ಪ್ರಕಾರ ಆಯಾ ತಿಂಗಳಲ್ಲಿ 16ನೇ ತಾರೀಖಿನ ನಂತರ ಬಿಲ್ ಪಾಸ್ ಮಾಡಬಾರದೆಂದು ತಾವು ನಿಯಮ ಮಾಡಿದ್ದೀರಿ. ಆದರೆ ಕೆಲವು ಕಡೆಗಳಲ್ಲಿ 27, 28, 29ನೇ ತಾರೀಖಿನವರೆಗೂ ಸಹ ಕ್ಯಾಷ್ ಬುಕ್‌ನಲ್ಲಿ ಬರೆದು, 16ನೇ ತಾರೀಖಿನ ದಿವಸವೇ ಬಿಲ್ ಪಾಸ್ ಮಾಡಿದಂತೆ ಅದರಲ್ಲಿ ತೋರಿಸುತ್ತಿದ್ದಾರೆ. 16ನೇ ತಾರೀಖಿನೊಳಗೇ ಬಿಲ್ ಪಾಸ್ ಆಗಬೇಕಾದರೆ ಸಂಬಂಧಪಟ್ಟವರು ಅಧಿಕಾರಿಗಳಿಗೆ 4-5 ಪರ್ಸೆಂಟ್‌ನಷ್ಟು ಮಾಮೂಲಿ ಕೊಡಬೇಕಾಗಿತ್ತು. ಈಗ ತಾವು ಆ ತಾರೀಖಿನ ನಂತರ ಬಿಲ್ ಪಾಸ್ ಮಾಡಬಾರದೆಂದು ಹೇಳಿರುವುದರಿಂದ, ಆ ಮಾಮೂಲಿ ಇನ್ನೂ ಹೆಚ್ಚಾಗುವುದಕ್ಕೆ ಅವಕಾಶವಾಯಿತು. ಈ ಕಛೇರಿಗಳಲ್ಲಿ ಕೆಳಮಟ್ಟದ ಕೆಲಸವಾಗುವುದಕ್ಕೆ ತಾವೇ ಅವಕಾಶ ಮಾಡಿಕೊಟ್ಟಂತಾಯಿತು. ಇದಕ್ಕೂ ತಾವೇ ಹೊಣೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮೇಜರ್ ಇರಿಗೇಷನ್ನಿಗೆ 34 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಕಳೆದ ವರ್ಷ 33 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಬಹಳ ಜಾಸ್ತಿ ಇಟ್ಟಿದ್ದೇವೆ ಎಂದು ಸಂತೋಷದಿಂದ ಮಾತನಾಡಿದ್ದಾರೆ. ಈ ಹಣದ ಬೆಲೆ ಎಷ್ಟಕ್ಕೆ ಸಮನಾಗುತ್ತದೆ ಎಂಬುದನ್ನು ಯೋಚನೆ ಮಾಡಿ. ಪ್ರತಿವರ್ಷ ಷೆಡ್ಯೂಲ್ ಆಫ್ ರೇಟ್ ಜಾಸ್ತಿಯಾಗುತ್ತದೆ. ಆದ್ದರಿಂದ ಇಷ್ಟು ಹಣವನ್ನು ಒದಗಿಸಿದರೂ ಇದು ಕಡಿಮೆ ಎಂದೇ ಹೇಳಬಹುದು. ಮೇಜರ್ ಇರಿಗೇಷನ್ ಅನ್ನು ಬಹಳ ಬೇಗ ಮಾಡದೇ ಹೋದರೆ ಆಹಾರ ಪ್ರಾಬ್ಲಮ್ ಬಗೆಹರಿಯುತ್ತದೆಯೋ ? ನಾವು ಎಷ್ಟು ದುಡ್ಡು ಒದಗಿಸಿದ್ದೇವೆ, ಅಷ್ಟು ದುಡ್ಡು ಒದಗಿಸಿದ್ದೇವೆ ಎಂದು ಬರೀ ನಾಟಕೀಯ ಮಾಡುತ್ತಾರೆ. ಅವರಿಗೆ ರೈತನ ವಿಷಯದಲ್ಲಿ ಅನುಕಂಪ ಇದೆಯೋ ? ಒಂದು ವೇಳೆ ಇವರಿಗೆ ರೈತನ ಮೇಲೆ ಅನುಕಂಪ ಇದ್ದರೆ ಈ ಮೇಜರ್ ಇರಿಗೇಷನ್‌ಗಳನ್ನು ಬೇಗ ಮುಗಿಸಬೇಕಾಗಿತ್ತು. ಹೇಮಾವತಿ ಪ್ರಾಜೆಕ್ಟಿನಲ್ಲಿ 1974ನೇ ಇಸವಿಯಲ್ಲಿ ನೀರನ್ನು ಸ್ಟೋರ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಅಲ್ಲಿರತಕ್ಕ ಸಿಬ್ಬಂದಿವರ್ಗಕ್ಕೆ ಖರ್ಚಾಗುತ್ತದೆ. ಈ ರೀತಿ ಇವರು ದುಡ್ಡಿಲ್ಲ ಎಂದು ಇಷ್ಟು ಕಡಿಮೆ ಹಣವನ್ನು ಇದಕ್ಕೆ ಒದಗಿಸುವುದಾದರೆ ಇನ್ನು 10 ವರ್ಷವಾದರೂ ಯಾವ ಪ್ರಾಜೆಕ್ಟ್ ಕೂಡ ಮುಗಿಯುವುದಿಲ್ಲ. ಆಗ ದೇಶಕ್ಕೆ ಏನು ಅನಾಹುತವಾಗುತ್ತದೆ ಎಂಬುದನ್ನು ಆಲೋಚನೆ ಮಾಡಿ ನೋಡಿ ಎಂದು ನಾನು ಹೇಳಬಯಸುತ್ತೇನೆ.

ಮಾನ್ಯ ಹಣಕಾಸಿನ ಮಂತ್ರಿಗಳು ಅವರ ಬಡ್ಜೆಟ್ ಭಾಷಣದಲ್ಲಿ ಪ್ರತಿವರ್ಷ 4ನೇ ಪಂಚವಾರ್ಷಿಕ ಯೋಜನೆಯಲ್ಲಿ 30-40 ಕೋಟಿ ರೂಪಾಯಿಗಳವರೆಗೆ ಕೈಗಾರಿಕೆಗಳಿಗೆ ಖರ್ಚು ಮಾಡುತ್ತಾ ಬಂದಿದ್ದೇವೆ ಎಂದು ಹೇಳಿದ್ದಾರೆ. ಹಾಗಾದರೆ ಕೊನೆಯ ಪಕ್ಷ 60-70 ಕೈಗಾರಿಕೆಗಳನ್ನು ಹೊಸದಾಗಿ ಸ್ಥಾಪನೆ ಮಾಡುವುದಕ್ಕೆ ಇವರು ಹಣವನ್ನು ಖರ್ಚು ಮಾಡಿದ್ದಾರೆಯೇ ? ಡಿಸ್ಟ್ರಿಕ್ಟ್‌ವೈಜ್ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಹೊಸ ಕೈಗಾರಿಕೆಯನ್ನು ಸ್ಥಾಪನೆ ಮಾಡಿದ್ದಾರೆ, ಅವುಗಳಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂಬುದನ್ನು ಮಾನ್ಯ ಹಣಕಾಸಿನ ಮಂತ್ರಿಗಳು ಈ ಬಡ್ಜೆಟ್ ಚರ್ಚೆಯ ಮೇಲೆ ಉತ್ತರ ಕೊಡುವಾಗ ಈ ಸಭೆಗೆ ಹೇಳಬೇಕು ಎಂದು ನಾನು ಹೇಳುತ್ತೇನೆ.

ಮಾನ್ಯ ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲಿ ಬರುವ ವರ್ಷ 600 ಮೈನರ್ ಇರಿಗೇಷನ್‌ಗಳು ಪೂರ್ತಿಯಾಗುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ. ಈಗ ಎರಡು ವರ್ಷಗಳಿಂದ ಶ್ರೀಮಾನ್ ಚೆನ್ನಬಸಪ್ಪನವರು 45 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹಳ್ಳಿಗಳ ಕಡೆ ಸಾಕಷ್ಟು ನೀರಾವರಿ ಸೌಲಭ್ಯವನ್ನು ರೈತರಿಗೆ ಒದಗಿಸುತ್ತೇವೆ ಹಳ್ಳಿಗಳಲ್ಲಿ ಸಮೃದ್ಧಿ ಬರುತ್ತದೆ ಎಂದು ಹೇಳಿದ್ದಾರೆ. ಆದರೆ ಅವರು ಒಂದನ್ನೂ ಮಾಡಿಲ್ಲ. ಈಗ 600 ಮೈನರ್ ಇರಿಗೇಷನ್ ಪ್ರಾಜೆಕ್ಟುಗಳನ್ನು ಏನು ಬರುವ ವರ್ಷ ಪೂರ್ತಿ ಮಾಡುತ್ತೇವೆ ಎಂದು ಹೇಳಿದ್ದಾರೆ, ಅವುಗಳಲ್ಲಿ ಎಷ್ಟು ಯೋಜನೆಗಳಿಗೆ ಪ್ಲಾನು ಮತ್ತು ಎಸ್ಟಿಮೇಟುಗಳು ತಯಾರಾಗಿವೆ. ಅವು ಯಾವ ಯಾವ ಜಿಲ್ಲೆಯಲ್ಲಿ ಬರುತ್ತವೆ, ಯಾವ ಯಾವ ಯೋಜನೆಗಳಿಗೆ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಆಗಿದೆ ಎಂಬುದನ್ನು ತಿಳಿಸಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಎಷ್ಟೋ ಸಾರಿ ಎಷ್ಟೋ ಯೋಜನೆಗಳಿಗೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ದೊರೆಯದೆ ಬಿದ್ದು ಹೋಗುತ್ತವೆ ಎಂದು ನಾನು ಕೇಳಿದ್ದೇನೆ. ಆದ್ದರಿಂದ 600 ಮೈನರ್ ಇರಿಗೇಷನ್ ಕೆಲಸಗಳು ಪ್ರಾರಂಭ

(ಶ್ರೀ ಕೆ. ಹೆಚ್. ಹನುಮೇಗೌಡ)

ಮಾಡುತ್ತೀರಾ ಅಥವಾ ಇಲ್ಲವೇ ಅವುಗಳಿಗೆ ಎಷ್ಟು ಹಣವನ್ನು ಒದಗಿಸಿದ್ದೀರಿ, ಅವುಗಳಿಗೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್, ಕ್ಲಿಯರೆನ್ಸ್ ಕೊಡುವುದಕ್ಕೆ ಅಧಿಕಾರಿಗಳಿಗೆ ಹೇಳಿದ್ದೀರಾ, ಇವುಗಳಲ್ಲಿ ಎಷ್ಟು ಯೋಜನೆಗಳಿಗೆ ಕ್ಯಾಬಿನೆಟ್‌ನಲ್ಲಿ ಮಂಜೂರಾತಿ ಕೊಟ್ಟಿದ್ದೀರಿ ಎಂಬುದನ್ನು ಈ ಸಭೆಗೆ ತಿಳಿಸಬೇಕು ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಕಳೆದ ವರ್ಷ ಎಷ್ಟೋ ಸಾವಿರ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆ ಎಂದು ಅಪ್ಪಣೆ ಕೊಡಿಸಿದ್ದರು. ಈಗ ಎಷ್ಟು ಸಾವಿರ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ, ಹೋದವರ್ಷ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿದ್ದರು, ಈ ವರ್ಷ, ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿದ್ದಾರೆ, ಎಂಬುದನ್ನು ನೋಡಿದರೆ ಹಿಂದಿನ ವರ್ಷದ ಅಂಕಿ ಅಂಶಗಳಿಗೂ ಈ ವರ್ಷದ ಅಂಕಿ ಅಂಶಗಳಿಗೂ ತಾಳೆಯೇ ಆಗುವುದಿಲ್ಲ. ಈ ರೀತಿ ಏತಕ್ಕೆ ವ್ಯತ್ಯಾಸವಾಯಿತು ? ನಿಜವಾಗಿ ಇವರು ಕರೆಕ್ಟಾದ ಅಂಕಿ ಅಂಶಗಳನ್ನು ಒದಗಿಸುವುದಿಲ್ಲ. ಮನಸ್ಸಿಗೆ ಬಂದ ಅಂಕಿ ಅಂಶಗಳನ್ನು ಒದಗಿಸುತ್ತಿದ್ದಾರೆ. ಹೀಗೆ ಬಹಳ ದಿವಸ ಜನಗಳ ಕಣ್ಣಿಗೆ ಮಂಕುಬೂದಿಯನ್ನು ಹಾಕಿಕೊಂಡು ಇರುವುದಕ್ಕಾಗುದಿಲ್ಲ. ಯಾವ ಯಾವ ವರ್ಷ ಎಷ್ಟೆಷ್ಟುಮಾಡಿದ್ದಾರೆ, ಮುಂದಿನ ವರ್ಷ ಎಷ್ಟು ಮಾಡುತ್ತಾರೆ ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಈ ಚರ್ಚೆಗೆ ಉತ್ತರ ಕೊಡುವಾಗ ತಿಳಿಸಬೇಕು ಎಂದು ನಾನು ಹೇಳುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕ ಸ್ಥಿತಿಯ ಬಗ್ಗೆ ಬಹಳ ಮಾತನಾಡಿದ್ದಾರೆ. ಈ ಸರ್ಕಾರದ ಆಡಳಿತ ಬಂದ ಮೇಲೆ ಜನಗಳು ಪಡುತ್ತಿರುವ ಕಷ್ಟ ಮತ್ತು ನೋವು ಪರಮೇಶ್ವರನಿಗೂ ಅರ್ಪಿತವಾಗುವುದಿಲ್ಲ, ಹಳ್ಳಿಗಾಡಿನ ಜನರ ಅರ್ಥಿಕಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಕೋಟಿ ಗಟ್ಟಲೆ ಹಣವನ್ನು ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಹಾಗಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇದರಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾಗುತ್ತದೆ ಎಂಬುದನ್ನು ದಯಮಾಡಿ ಹೇಳಬೇಕು.

ಕೋಆಪರೇಟಿವ್ ಸೊಸೈಟಿಗಳ ಮುಖಾಂತರ ರೈತರಿಗೆ ಸಾಲವನ್ನು ಕೊಡುತ್ತೇವೆ, ಅದಕ್ಕಾಗಿ ಕೋಟಿಗಟ್ಟಲೆ ಹಣವನ್ನು ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಇವರು ಸೊಸೈಟಿಗಳಲ್ಲಿ ರೈತರಿಗೆ 10, 11, 18, 20 ಪರ್ಸೆಂಟಿನಂತೆ ಮಾರ್ವಾಡಿ ಬಡ್ಡಿಯನ್ನು ವಸೂಲು ಮಾಡಿ ಸಾವಿರ ಮನೆಗಳನ್ನು ಹಾಳು ಮಾಡಿದ್ದಾರೆ ಇದನ್ನು ಸಹಕಾರ ಇಲಾಖೆಯ ಡಿಮ್ಯಾಂಡ್ ಬಂದಾಗ ಮಾತನಾಡುತ್ತೇನೆ. ಸಹಕಾರ ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನು ಈಗ ಹೊಸದಾಗಿ ಬಂದಿರತಕ್ಕ ಮಂತ್ರಿಗಳು ಸರಿಪಡಿಸುತ್ತಾರೆ ಎಂದು ನಾನು ನಂಬಿದ್ದೇನೆ. ಶ್ರೀಮಾನ್ ಘೋರ್ಪಡೆಯವರು ಜನರಲ್ಲಿ ಅರ್ಥಿಕ ಸಮಾನತೆಯನ್ನು ತರುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಯಾವ ರೀತಿ ತರುತ್ತಾರೆಯೋ ಗೊತ್ತಿಲ್ಲ. ರೈತ ಗೊಬ್ಬರವನ್ನು ಕೊಂಡುಕೊಳ್ಳಬೇಕಾದರೆ ಜಾಸ್ತಿ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳಬೇಕು. ರೈತ ತಾನೇನಾದರೂ ಬೆಳೆದದ್ದನ್ನು ಮಾರಬೇಕಾದರೆ ಅದಕ್ಕೆ ತಕ್ಷಣ ಕಂಟ್ರೋಲ್ ತರುತ್ತಾರೆ. ಇವರು ಅವನ ಕಷ್ಟ ಸುಖಗಳನ್ನು ವಿಚಾರಣೆ ಮಾಡುವುದಿಲ್ಲ. ಒಂದುವೇಳೆ ರೈತನಿಗೆ ಗ್ರಹಚಾರ ಬಂದು ರೈತ ಬೆಳೆದಂತಹ ಮಾಲಿಗೆ ರೇಟ್ ಡೌನ್ ಆದರೆ ಅವನ ಬಗ್ಗೆ ಚಕಾರ ಶಬ್ದ ಕೂಡ ಇಲ್ಲ. ಆ ಬಡಪಾಯಿಯನ್ನು ಕಣ್ಣೆತ್ತಿ ಕೂಡ ನೋಡುವುದಿಲ್ಲ. ಈಗ ಬತ್ತಕ್ಕೆ ಮಾರುಕಟ್ಟೆಯಲ್ಲಿ ಜಾಸ್ತಿ ಬೆಲೆ ಇರುವಾಗ ಸರ್ಕಾರದವರು ರೈತನಿಂದ ವಸೂಲು ಮಾಡತಕ್ಕ ಲೆವಿ ಬತ್ತಕ್ಕೆ ಇಷ್ಟೇ ಬೆಲೆ ಕೊಡಬೇಕು ಎಂದು ನಿಗದಿ ಮಾಡಿದ್ದಾರೆ. ಇದರಿಂದಾಗಿ ರೈತನಿಗೆ ತಾನು ಬೆಳೆದಂತಹ ಮಾಲಿಗೆ ಸರಿಯಾದ ಬೆಲೆ ಸಿಕ್ಕಿದಂತಾಗುವುದಿಲ್ಲ. ಈ ರೀತಿ ವರ್ತನೆ ಮಾಡತಕ್ಕ ಸರ್ಕಾರವನ್ನು ಏನೆಂದು ಕರೆಯಬೇಕು ? ಗರೀಬಿ ಹಠಾವೋ ಮಾಡುತ್ತೇವೆ ಘೋಷಣೆ ಮಾಡಿದ್ದರು, ಎಷ್ಟರಮಟ್ಟಿಗೆ ಆ ಬಗ್ಗೆ ಪ್ರಯತ್ನ ಮಾಡಿದ್ದಾರೆ ಎಂಬುದನ್ನು ಹೇಳಲಿ. ಕೋಆಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಕಡೆಯಿಂದ ಮೇಯುತ್ತಿದ್ದಾರೆ. ಈ ಇಲಾಖೆಯಲ್ಲಿ ಮಾರ್ಕೆಟಿಂಗ್ ಇಲಾಖೆ ಎಂದು ಬೇರೆ ಮಾಡಿದ್ದಾರೆ. ಇಲ್ಲಿ ನಡೆಯಬಾರದ್ದೆಲ್ಲಾ ನಡೆಯುತ್ತಿದೆ. ಈಗ ನಮ್ಮ ರಾಜ್ಯದಲ್ಲಿ ಅನೇಕ ಕಡೆ ಮಾರ್ಕೆಟಿಂಗ್ ಯಾರ್ಡ್‌ಗಳು ಇವೆ ಯಾವುದೋ ಊರಿನಲ್ಲಿರತಕ್ಕ ಮಾರ್ಕೆಟಿಂಗ್ ಯಾರ್ಡನ್ನು ಬೆಂಗಳೂರು ಡಿಸ್ಟ್ರಿಕ್ಟ್ ಜೂರಿಸ್‌ಡಿಕ್ಷನ್‌ಗೆ ಸೇರಿದೆ ಎಂದು ಒಂದು ನೋಟಿಫಿಕೇಷನ್ ಹೊರಡಿಸಿ ಅಲ್ಲಿ ನಡೆಯತಕ್ಕ ವ್ಯವಹಾರಗಳನ್ನು ಇಲಾಖೆಯ ಅಧಿಕಾರಿಗಳು ಗಮನಿಸಿ ಅಲ್ಲಿ ದುಡ್ಡು ಹೊಡೆಯುವುದಕ್ಕೆ ಗಣ ಹದ್ದು ಹೋದಹಾಗೆ ಹೋಗುತ್ತಾರೆ. ಆ ಮಾರ್ಕೆಟಿಂಗ್ ಯಾರ್ಡ್‌ಗಳಿಗೆ ಅಧಿಕಾರಿಗಳು ಹೋಗಿ ವರ್ತಕರನ್ನು ಲೆಕ್ಕತೆಗೆ

ಯಿರಿ, ಎಷ್ಟು ಮಾರಿದ್ದೀರಿ, ಎಷ್ಟು ಕೊಂಡಿದ್ದೀರಿ ನಿಮ್ಮ ವ್ಯವಹಾರವೇನು ಸರಿಯಾಗಿದೆಯೇ ಇಲ್ಲವೇ ಎಂದು ಪರಿಶೀಲಿಸಿ ಅವರಲ್ಲಿ ಯಾವುದಾದರೂ ದೋಷದೋಷಗಳನ್ನು ಕಂಡುಹಿಡಿದು ಅವರಿಂದ ದುಡ್ಡು ಹೊಡೆದುಕೊಂಡು ಬರುತ್ತಾರೆ. ಇಂಥಾ ವ್ಯವಹಾರಗಳೆಲ್ಲಾ ನಡೆಯುತ್ತಿವೆ. ಯಾವುದೇ ಬೇರೆ ದೇಶದಲ್ಲಿ ಈ ತರಹ ಆಗಿದ್ದರೆ ಅವರು ಏನು ಮಾಡುತ್ತಿದ್ದರೋ ಗೊತ್ತಿಲ್ಲ. ರೈತನು ಬೆಳೆದ ಮಾಲಿಗೆ ಬೆಲೆ ಕಡಿಮೆ ಆದಾಗ ಅವನಿಗೆ ನ್ಯಾಯವಾದ ಬೆಲೆಯನ್ನು ಕೊಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುವುದಿಲ್ಲ.

ಹೀಗಾಗಿ ಪ್ರತಿಯೊಂದು ಹಂತದಲ್ಲಿಯೂ ಹಳ್ಳಿಯ ರೈತ, ತಾನು ನ್ಯಾಯವಾದ ರೀತಿಯಲ್ಲಿ ಮುಂದೆ ಬರುವುದಕ್ಕೆ ಸಾಧ್ಯವಾಗಿಲ್ಲ. ತಾವು ಅಧಿಕಾರ ಬಿಟ್ಟಮೇಲಾದರೂ ಏನಾದರೂ ಅವನು ತಲೆ ಎತ್ತಿ ನಿಲ್ಲುತ್ತಾನೆಯೋ ಏನೋ, ನೀವು ಇರುವವರೆಗೆ ಮಾತ್ರ ಅವನು ತಲೆ ಎತ್ತಿ ಜೀವನ ಮಾಡುವಂತಿಲ್ಲ. ಚುನಾವಣೆಯ ಸಮಯದಲ್ಲಿ ಆ ಬಡಪಾಯಿಗಳ ಬಗ್ಗೆ ಬಹಳಷ್ಟು ಕಣ್ಣೀರು ಸುರಿಸಿದಿರಿ, ಕಣ್ಣೀರಿನ ಕೋಡಿಯೇ ಹರಿಯಿತು ಆ ಕಣ್ಣೀರು ಈಗ ಎಲ್ಲಿ ಹೋಯಿತು ? ಅದೆಲ್ಲಾ ಮೊಸಳೆ ಕಣ್ಣೀರು ಆಗಿಬಿಟ್ಟಿದೆ. ಇವರು ಕಣ್ಣೀರು ಸುರಿಸುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು, ಇನ್ನೇನು ಜನಗಳನ್ನು ಇವರು ಮೇಲಕ್ಕೆತ್ತುತ್ತಾರೆ, ನಾನೇಕೆ ಇವರ ವಿರೋಧವಾಗಿ ಎಲೆಕ್ಷನ್‌ನಲ್ಲಿ ನಿಲ್ಲಲಿ ಎಂದು ಅಂದುಕೊಂಡೆ, ಆದರೆ ಇವತ್ತು ನೀವು ಮಾಡುತ್ತಾ ಇರುವ ಕೆಲಸ ಯಾವುದು ಹೇಳಿ ?

ಶ್ರೀ ಸಿ. ಎನ್. ಪಾಟೀಲ್.–ಕಣ್ಣೀರಿನ ಪ್ರವಾಹದೊಳಗೆ ಈಜಾಡುತ್ತಾ ಇಲ್ಲಿಗೆ ಬಂದಿದ್ದೀರಾ?

ಶ್ರೀ ಕೆ. ಎಚ್. ಹನುಮೇಗೌಡ.—ಅಷ್ಟೊಂದು ಕಣ್ಣೀರನ್ನು ಆ ಬಡಪಾಯಿಗಳ ಬಗ್ಗೆ ಸುರಿಸಿ, ಈಗ ಏನು ಮಾಡಿದ್ದೀರಿ ? ಇನ್ನೊಂದು ವಿಷಯವನ್ನು ಹೇಳುತ್ತೇನೆ, ಹಾಫ್-ಮಿಲಿಯನ್ ಜಾಬ್ ಸ್ಕೀಂ ಎಂದು ಮಾಡಿದ್ದಾರೆ. ಅದನ್ನು ಓದಿದ ಜನ ಇನ್ನೇನು ನಮಗೆ ಬೇಕಾದಷ್ಟು ಕೆಲಸ ಸಿಕ್ಕುತ್ತದೆಂದು ಮನೆಯಲ್ಲಿ ಇದ್ದುದನ್ನೆಲ್ಲಾ ಮಾರಿಕೊಂಡು ಹನುಮೇಗೌಡರೇ ನನಗೆ ಈ ಕೆಲಸ ಕೊಡ್ಸಿ, ಆ ಕೆಲಸ ಕೊಡ್ಸಿ ಎಂದು ಬಂದು ನನ್ನನ್ನು ಕೇಳಿದರು. ಇದರ ಬಗ್ಗೆ ನಾನು ವಿಚಾರ ಮಾಡಿದಾಗ, ಅವರು ಕೊಡತಕ್ಕದ್ದಕ್ಕೆ ಏನೇನೊ ನಿಯಮಗಳನ್ನು ಇಟ್ಟುಬಿಟ್ಟಿದ್ದಾರೆ. ಅವರು ನಿಮ್ಮ ಹುಡುಗರಿಗೆ ಪರ್ಸೆಂಟೇಜ್ ಇಲ್ಲ, ಇದು ಇಲ್ಲ, ಅದು ಇಲ್ಲ ಎಂದು ಹೇಳಿದರು. ಪಾಪ ಈ ಬಡಪಾಯಿ ರೈತನ ಮಕ್ಕಳಿಗೆ ಎಲ್ಲಿಂದ ಹೆಚ್ಚಿನ ಪರ್ಸೆಂಟೇಜ್ ಬರಬೇಕು. ವರ್ಷದಲ್ಲಿ ಆರು ತಿಂಗಳು ಹೊಲ ಉತ್ತು, ಮನೆಯ ಕೆಲಸಗಳನ್ನು ಮಾಡಿಕೊಂಡು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿಕೊಂಡು ಪಾಸಾದರೆ ಸಾಕಾಗಿದೆ, ಇನ್ನು ಪರ್ಸೆಂಟೇಜ್ ಎಲ್ಲಿಂದ ತೆಗೆಯುವುದು. ಪಟ್ಟಣಗಳಲ್ಲಿ ಬೇಕಾದಷ್ಟು ಹಾಸ್ಟೆಲ್‌ಗಳು ಇವೆ, ಬೇಕಾದ ಅನುಕೂಲತೆಗಳು ಇವೆ, ಹಳ್ಳಿಯಲ್ಲಿ ಇವರನ್ನು ಕೇಳುವವರು, ಹೇಳುವವರು ಯಾರೂ ಇಲ್ಲ.

ಮಾನ್ಯ ಘೋರ್ಪಡೆಯವರು, ಮೊನ್ನೆ ಎಂ. ಎ. ಎಸ್. ಪ್ರೊಫೆಷನರ್ಸ್ ಎಂದು ಕೆಲವು ಜನ ಅಭ್ಯರ್ಥಿಗಳನ್ನು ತೆಗೆದುಕೊಂಡರು. ನಾನು ಕೇಳುತ್ತೇನೆ, ಇದರಲ್ಲಿ ಎಷ್ಟು ಜನ ಹಳ್ಳಿಯಿಂದ ಬಂದಿರತಕ್ಕ ಬಡಪಾಯಿ ರೈತರ ಮಕ್ಕಳು ಇದ್ದಾರೆ ಎಂದು. ಐ. ಎ. ಎಸ್. ಕೇಡರ್ ಎಂದು ಮಾಡಿಕೊಂಡು ಹಳ್ಳಿಯ ಮಕ್ಕಳಿಗೆ ಪ್ರಾಧಾನ್ಯತೆಯೇ ಸಿಕ್ಕದಂತಾಗಿದೆ. ನನಗೆ ಗೊತ್ತಿರುವ ಹಾಗೆ ಹಳ್ಳಿಯಿಂದ ಬಂದಿರತಕ್ಕ ಮಕ್ಕಳು ಐ. ಎ. ಎಸ್. ಪಾಸ್ ಮಾಡಿದಂಥವರು ಯಾರೂ ಇಲ್ಲವೆಂದು ಕಾಣುತ್ತದೆ ಅವರಿಗೆ ಗುಮಾಸ್ತರ ಕೆಲಸವೂ ಸಿಕ್ಕುವುದಿಲ್ಲ ; ಯಾವುದೂ ಸಿಕ್ಕುವುದಿಲ್ಲ. ಅವರ ಬಗ್ಗೆ ಎಲ್ಲರೂ ಬಾಯಿ ತುಂಬ ಹೊಗಳಿ ಮಾತನಾಡುತ್ತೀರಿ, ಇವರ ಬಗ್ಗೆ ನೀವು ಯಾವ ಅನುಕೂಲವನ್ನು ಮಾಡಿದ್ದೀರಿ ಹೇಳಿ ? ಹೀಗೆ ಮಾಡುವುದಕ್ಕೆ ನಿಮ್ಮ ಕಾನ್‌ಷಿಯಸ್ ಒಪ್ಪುತ್ತದೆಯೇ ? ತಾವೂ ರಾಜ್ಯಾಂಗದಲ್ಲಿ ಎಲ್ಲರಿಗೂ ಇಕ್ವಲ್ ಅಪರ್ಚುನಿಟೀಸ್‌ಅನ್ನು ಕೊಡಬೇಕು ಎಂದು ಬರೆದುಕೊಂಡಿದ್ದೀರಿ. ಬೆಂಗಳೂರು ಮುಂತಾದ ನಗರಗಳಲ್ಲಿ ಮಕ್ಕಳಿಗೆ ಕಾನ್‌ವೆಂಟ್ ಸ್ಕೂಲುಗಳು ಇವೆ. ನೀವು ನಿಮ್ಮ ಮಕ್ಕಳಿಗೆ ತಿಂಗಳಿಗೆ 250 ರೂಪಾಯಿಗಳವರೆಗೆ ಖರ್ಚು ಮಾಡುವುದಕ್ಕೆ ಸಿದ್ಧರಿದ್ದೀರಿ, ಆದರೆ ಹಳ್ಳಿಯ ಮಕ್ಕಳಿಗೆ ಸಮಾನ ಅವಕಾಶಗಳು ಸಿಕ್ಕುತ್ತವೆಯೇ ಹೇಳಿ ? ಇಷ್ಟರಮಟ್ಟಿಗೆ ನೀವು ಅನ್ಯಾಯವನ್ನು ಮಾಡಿ ಬಡಪಾಯಿ ರೈತರುಗಳನ್ನು ವಂಚನೆ ಮಾಡಿ ಅವರ ಶಾಪಕ್ಕೆ ಗುರಿಯಾಗಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಇಕ್ವಲ್ ಆಪರ್ಚುನಿಟೀಸ್ ಅದರ ಮೇಲೆ ಬರುವುದಿಲ್ಲ, ವಿಶ್ವೇಶ್ವರಯ್ಯನವರನ್ನು ನೋಡಿ, ಅವರ ಚರಿತ್ರೆಯನ್ನು ಓದಿ, ಅವರು ದಾರಿ ದೀಪದ ಕೆಳಗೆ ಓದಿ ಮುಂದೆ ಬಂದರು.

ಶ್ರೀ ಕೋಣಂದೂರು ಲಿಂಗಪ್ಪ.—ವಿಶ್ವೇಶ್ವರಯ್ಯನವರು ಇರುವುದು ಒಬ್ಬರೇ

ಶ್ರೀ ಎಚ್. ಸಿದ್ದವೀರಪ್ಪ.—ಅವರ ತಮ್ಮ ಸ್ವಂತ ಊರಿಗೆ ಹೋಗಬೇಕಾದರೆ ವಿದ್ಯಾರ್ಥಿ ದೆಸೆಯಲ್ಲಿ, ಮಧ್ಯೆ ಊರಲ್ಲಿ ಒಂದು ದಿವಸ ಇದ್ದು ಹೋಗಬೇಕಾಗಿತ್ತು. ರೈತರ ಮಕ್ಕಳು ಕಷ್ಟ ಪಡುವುದಿಲ್ಲ. ಅವರೂ ಚೆನ್ನಾಗಿ ಓದಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಯಾವುದೋ ಒಂದು ಉದಾಹರಣೆಯನ್ನು ಕೊಟ್ಟು ಬಿಟ್ಟಿರಿ. ಅವರಿಗೆ ಕಚೇರಿಗೆ ಓದಲಿಕ್ಕೆ ಯಾವ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೀರಿ. ಯಾವ ಅವಕಾಶ ವನ್ನೂ ನೀವು ಅವರಿಗೆ ಕಲ್ಪಿಸಿಕೊಟ್ಟಿಲ್ಲ. ಒಂದು ಕಡೆ ಹಳ್ಳಿಯವರಿಗೆ ಬೇಕಾದಷ್ಟು ಸ್ಕೀಂಗಳನ್ನು ಮಾಡಿದ್ದೇವೆಂದು ಹೇಳಿ, ಒಂದು ಕೈಯಿಂದ ಕೊಡುವುದು ಮತ್ತೊಂದು ಕೈಯಿಂದ ತೆಗೆದುಕೊಳ್ಳು ನಿಮ್ಮ ಕೆಲಸವಾಗಿದೆ. ನೀರಾವರಿ ಭಾವಿಗಳನ್ನು ತೆಗೆಯುವುದಕ್ಕೆ ದೊಡ್ಡದಾಗಿ ಒಂದು ಅಡ್ವ ರ್ಟೈಸ್‌ಮೆಂಟ್ ಅನ್ನು ಕೊಟ್ಟರು. ಬಾವಿ ತೆಗೆಯುವುದಕ್ಕೆ ಸಾಲ ಕೊಡುತ್ತೇವೆಂದು. ಬಡ ಪಾಯಿ ರೈತರು ಸಾಲಸೂಲ ಮಾಡಿಕೊಂಡು ಸಾಲಕ್ಕೆ ಅರ್ಜಿ ಹಾಕುವುದಕ್ಕೆ ಶುರು ಮಾಡಿದರು. ಇನ್ನು ಮೂರು ತಿಂಗಳು ಕಳೆದರೆ ಮಳೆಗಾಲ ಬರುತ್ತದೆಂದು ಅವರು ಬಹಳ ಜಾಗ್ರತೆಯಾಗಿ ಅರ್ಜಿ ಯನ್ನು ಹಾಕುವುದಕ್ಕೆ ಶುರುಮಾಡಿದರು. ಅಪ್ಲಿಕೇಷನ್ ಕೊಟ್ಟಾಗ ಜಿಯಾಲಜಿಕಲ್ ಡಿಪಾರ್ಟ ಮೇಂಟಿನವರು ಇಂಥಿಂಥ ಊರಲ್ಲಿ ಬಾವಿ ತೆಗೆದರೆ ಜಲ ಬರುತ್ತದೆ, ಅವರಿಗೆ ಮಾತ್ರ ಬಾವಿಗಳನ್ನು ತೆಗೆಯಲಿಕ್ಕೆ ಸಾಲವನ್ನು ಕೊಡತ್ತೇವೆಂದು ಹೇಳಿದರು. ನಿಮ್ಮ ಊರು ಈ ಒಂದು ಪಟ್ಟಿಯಲ್ಲಿಲ್ಲ ಆದ್ದರಿಂದ ನಿಮಗೆ ಸಾಲವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಈ ವಿಷಯದ ಬಗ್ಗೆ ನಾನು 10–12 ದಿವಸಗಳ ಹಿಂದೆ ಪ್ರಸ್ತಾಪ ಮಾಡಿದ್ದೇನೆ, ಮುಖ್ಯಮಂತ್ರಿಗಳಿಗೂ ಪತ್ರವನ್ನು ಬರೆದಿದ್ದೇನೆ. ಇವರು ಮಾಡಿಕೊಂಡಿರತಕ್ಕ ಪಟ್ಟಿಯಲ್ಲಿರುವ ಊರುಗಳಲ್ಲಿ ಬಾವಿಗಳನ್ನು ತೆಗೆ ದರೂ ನೀರು ಬಂದಿರುವುದಿಲ್ಲ. ಆ ಪಟ್ಟಿಯಲ್ಲಿ ಇಲ್ಲದಿರುವ ಊರುಗಳಲ್ಲಿ ಬೇಕಾದಷ್ಟು ಬಾವಿಗ ಳಲ್ಲಿ ಜಲ ಬಂದಿದೆ. ಇವರು ಕೊಟ್ಟಿರುವ ಸಾಲದಲ್ಲಿ ಬಾವಿ ತೆಗೆದರೂ ನೀರು ಬಂದಿಲ್ಲ, ಅಂಥವರಿಗೆ ಏನಾದರೂ ಅನುಕಂಪತೋರಿಸಿ ಕಾಂಪೆನ್ಸೇಷನ್ ಕೊಟ್ಟಿದ್ದೀರಾ? ಆದ್ದರಿಂದ ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನವರ ಲಿಸ್ಟಿನಲ್ಲಿಲ್ಲದಿದ್ದರೂ ಬಾವಿ ತೆಗೆದು ನೀರು ಬಂದಿದ್ದರೆ ಅಂಥವರಿಗೆ ಸಾಲ ಕೊಡುವುದಕ್ಕೆ ಅವಕಾಶ ಕಲ್ಪಿಸಿಕೊಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಈ ಸದನದಲ್ಲಿಯೂ ಪ್ರಸ್ತಾಪಮಾಡಿದ್ದೇನೆ, ಆದರೂ ಸಹ ಇವತ್ತಿನವರೆಗೂ ಇದರ ಬಗ್ಗೆ ಯಾವ ಆದೇಶವೂ ಸರ್ಕಾರದಿಂದ ಹೋಗಿಲ್ಲ. ಸೆಂಟ್ರಲ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಅಧ್ಯಕ್ಷರನ್ನು ಕಂಡು ನಾನು ಮಾತನಾಡಿದ್ದೇನೆ. ಬಾವಿ ತೆಗೆದು ನೀರು ಬಂದು, ಕಲ್ಲು ಕಟ್ಟಿಸದಿ ದ್ದರೆ ಬಾವಿ ಉಳಿಯುವುದಿಲ್ಲ. ಮತ್ತು ಇನ್ನಷ್ಟು ಜಮೀನು ವ್ಯವಸಾಯಕ್ಕೆ ಬರುವುದು ಹಾಳಾಗಿ ಹೋಗುತ್ತದೆ. ನಾನು ಸರ್ಕಾರಕ್ಕೂ ಈ ಬಗ್ಗೆ ತಿಳಿಸಿದ್ದೇನೆ, ಒಂದು ತಿಂಗಳ ಮೇಲಾಯಿತು. ಇವತ್ತಿನವರೆಗೂ ಸರ್ಕಾರದಿಂದ ಯಾವ ಆದೇಶವೂ ಹೋಗಿಲ್ಲ ಮಳೆ ಬಂದು ತೆಗೆದ ಬಾವಿಗಳು ಬಿದ್ದು ಹೋಗುತ್ತವೆ. ನೀವು ಅವರಿಗೆ ಹಣವನ್ನು ಪುಕ್ಕಸಟ್ಟೆ ಕೊಡುವುದಿಲ್ಲ, ಸ್ವಲ್ಪವೇ ವರ್ಷಗ ಳಲ್ಲಿ ನಿಮ್ಮ ಸಾಲವನ್ನು ಅವರು ತೀರಿಸುತ್ತಾರೆ. ಆದ್ದರಿಂದ ತಾವುಗಳು ರೈತರ ಬಗ್ಗೆ ಅನುಕಂಪ ತೋರಿಸಿ, ಕನಿಕರ ತೋರಿಸಿ ನಡೆದು ಕೊಳ್ಳಬೇಕು ಎಂದು ತಮ್ಮನ್ನು ಕೈಮುಗಿದು ಕೇಳಿಕೊಳ್ಳು ತ್ತೇನೆ. ರೈತ ತಿಳುವಳಿಕೆ ಇಲ್ಲದವನು, ಅವಿದ್ಯಾವಂತ ಅವನಿಗೆ ಏನೂ ಬರುವುದಿಲ್ಲ ಎಂದು ತಿಳಿದು ಕೊಂಡಿದ್ದರೆ ಅದು ನಿಮ್ಮ ಕೆಟ್ಟತನ ಎಂದು ಹೇಳುತ್ತೇನೆ. ಬಹಳ ದಿವಸದವರೆಗೆ ರೈತ ಈ ಸ್ಥಿತಿ ಯಲ್ಲೇ ಮುಂದುವರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವನನ್ನು ಈ ರೀತಿಯಾಗಿ ನೀವು ವಂಚಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಬಡಪಾಯಿಗಳಿಗೆ ಸಂಬಂಧಪಟ್ಟ ಒಂದು ಸಣ್ಣ ಕಾನೂನನ್ನು ಮಾಡಿ ಹೊರಡಿಸುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಿಲ್ಲ. ನೀವು ಗರೀಬಿ ಹಠಾವೋ ಮಾಡುತ್ತೇವೆಂದು ಹೇಳಿದ್ದೆ ಹೇಳಿದ್ದು ಇವತ್ತು ಹಳ್ಳಿಯ ರೈತನ ಒಂದು ಎತ್ತು ಅಥವಾ ಕೋಣ ಸತ್ತು ಹೋದರೆ ಅವನು ನಿರ್ನಾಮವಾಗುತ್ತಾನೆ. ನೀವು ಅದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ; ಅಥವಾ ಅವನಿಗೆ ಏನಾದರೂ ಕಂಪೆನ್‌ಸೇ ಶನ್ ಕೊಡುತ್ತೀರಾ? ಏನೂ ಇಲ್ಲ. ಇವರೆ ನಿಮ್ಮ ಕಾರ್ಖಾನೆಗಳಲ್ಲಿ ಏನಾದರೂ ಹೆಚ್ಚು ಕಮ್ಮಿಯಾದರೆ ಅದಕ್ಕೆ ಇನ್‌ಶ್ಯೂರೆನ್ಸ್ ಇದೆ. ಅದೇ ರೀತಿ ಬೆಳೆಗಳಿಗೆ ಮತ್ತು ರೈತನ ಎತ್ತು ಕೋಣಗಳಿಗೂ ಒಂದು ಸ್ಕೀಮನ್ನು ಏಕೆ ಮಾಡಬಾರದು ಎಂದು ಕೇಳುತ್ತೇನೆ.

5-30 P.M.

ಇನ್ನು ಲೆವಿಯನ್ನು ಕಲೆಕ್ಟ್ ಮಾಡುತ್ತಿದ್ದೀರಿ. ಒಬ್ಬ ರೈತನ ಮನೆಯಲ್ಲಿ ಒಂದು 10 ಕ್ವಿಂಟಲ್ ಭತ್ತ ಇದ್ದರೆ ಅದನ್ನು ಪೋಲೀಸ್ ಇಲಾಖೆಯವರು ಮತ್ತು ರೆವೆನ್ಯೂ ಇಲಾಖೆಯವರು ತನಿಖೆ ಮಾಡಿ ತೆಗೆದುಕೊಂಡು ಹೋಗುವುದಲ್ಲದೆ, ಅತನನ್ನು ಅರೆಸ್ಟ್ ಬೇರೆ ಮಾಡುತ್ತಿದ್ದೀರಿ. ರೈತನ ಬಗ್ಗೆ ನಿಮಗೆ ಕಣ್ಣೀರು ಹಾಕಿದರೂ ಕೂಡ ಒಂದು ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದಿರುವಾಗ ನೀವು ಈ ರೀತಿಯ ಹಿಂಸೆಯನ್ನು ಏಕೆ ಕೊಡುತ್ತೀರಿ ? ನಾನು ನಿಮಗೆ ಕ್ಷಮಾಗಿದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಆ ಬಡ ರೈತನಿಗೆ ಹೆಚ್ಚು ಹಿಂಸೆಯನ್ನು ಕೊಡದೆ ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಸಾಧ್ಯವಾದರೆ ಕೆಲವು ಒಳ್ಳೆಯ ಕೆಲಸಗಳನ್ನು ಮಾಡಿ, ಅದು ಬಿಟ್ಟು ಅತನಿಗೆ ಹಿಂಸೆಯನ್ನು ಕೊಡಬೇಡಿ. ನಿಮಗೆ ಅತನು ಓಟು ಕೊಟ್ಟು ಇಲ್ಲಿಗೆ ಕಳಿಸಿರುವಾಗ ನೀವು ಈ ರೀತಿಯ ಅನ್ಯಾಯವನ್ನು ಎಸಗಬಾರದು. ನಿಮ್ಮ ಪಾರ್ಟಿ ಉಳಿಯಬೇಕಾದರೆ ಹಳ್ಳಿಯ ರೈತರಿಗೆ ಅನುಕೂಲಗಳನ್ನು ಮಾಡಿಕೊಡಿ. ಅದು ಸಹ ಮಾಡದೆ ಇದ್ದರೆ, ಮೇಲೆ ಇದ್ದ ಒಬ್ಬ ದೇವರು ಎಲ್ಲವನ್ನೂ ನೋಡುತ್ತಾನೆ. ಆದ್ದರಿಂದ ಮಾನ್ಯ ಘೋರ್ಪಡೆಯವರು ಕೆಲವು ಉತ್ತಮವಾದ ಕೆಲಸಗಳನ್ನು ಮಾಡಿ, ರೈತರು ಇಂಥ ಮಹನೀಯರು ಇಂತಿಂಥ ಒಳೆಯ ಕೆಲಸಗಳನ್ನು ಮಾಡಿ ನಮಗೆ ಅನುಕೂಲ ಮಾಡಿ ಹೋಗಿದ್ದಾರೆ ಎಂದು ಸದಾ ರೈತರು ಹೇಳುವಂತೆ, ಮತ್ತು ನಿಮ್ಮ ಕೀರ್ತಿ ಸದಾ ಉಳಿಯುವಂತೆ ಮಾಡಬೇಕು, ಇಲ್ಲದಿದ್ದರೆ ಗುಜರಾಥಿನಲ್ಲಿ ಏನು ನಡೆಯುತ್ತಿದೆ ಅದೇ ಪರಿಸ್ಥಿತಿ ಇಲ್ಲಿ ಉಂಟಾಗಲು ಅವಕಾಶ ಮಾಡಿಕೊಟ್ಟ ಹಾಗೆ ಅಗುತ್ತದೆ ಎಂದು ಎಚ್ಚರಿಕೆಯನ್ನು ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಸಭಾಧ್ಯಕ್ಷರವರೆ, 1974—75ರ ಆರಂಭದಲ್ಲಿ ಕಂಡು ಬರುವ 13 ಕೋಟಿ 48 ಲಕ್ಷ ರೂಪಾಯಿ ಖೋತಾ, ಮತ್ತು ವರ್ಷಾಂತ್ಯದ ಹೊತ್ತಿಗೆ 34 ಕೋಟಿ 28 ಲಕ್ಷ ರೂಪಾಯಿ ಖೋತಾವನ್ನು ಈ ಸಾಲಿನ ಅಂತ್ಯದ ಹೊತ್ತಿಗೆ 16 ಕೋಟಿ 78 ಲಕ್ಷಕ್ಕೆ ಇಳಿಸುವ ಸಲುವಾಗಿ ಮಾನ್ಯ ಅರ್ಥ ಮಂತ್ರಿಯವರು ಬಹಳ ಎಚ್ಚರಿಕೆಯಿಂದ ಸಿದ್ಧಪಡಿಸಿರುವ ಈ ರಾಜ್ಯದ ಬಜೆಟನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ನಿಜವಾಗಿಯೂ ಯಾವ ಕೋಲಾಹಲ ಕಾರ ಅಂಶ ಈ ಅಯವ್ಯಯ ಪಟ್ಟಿಯಲ್ಲಿ ಇಲ್ಲದಿದ್ದರೂ, ಮತ್ತು ಕುತೂಹಲಕಾರಿ ಅಂಶ ಸಹ ಯಾವುದೂ ಇಲ್ಲದಿದ್ದರೂ ನಮ್ಮ ವಿರೋಧ ಪಕ್ಷದ ಸದಸ್ಯರು ವೃಥಾ ಇದರ ಬಗ್ಗೆ ಕೋಲಾಹಲವನ್ನು ಉಂಟುಮಾಡಿದ್ದಾರೆ ಎಂಬುದನ್ನು ವಿಧಿಯಿಲ್ಲದೆ ಹೇಳಬೇಕಾಗಿದೆ. ಈ ಖೋತ ಉಂಟಾಗಲು ಕಾರಣವೇನೆಂಬುದು ವಿರೋಧ ಪಕ್ಷದ ಎಲ್ಲ ಸದಸ್ಯರಿಗೂ ಗೊತ್ತಿದೆ. ಕಳೆದ ವರ್ಷ ಬಂದ ಕ್ಷಾಮ ಪರಿಹಾರ ಕಾರ್ಯಗಳಿಗೆ ನಮ್ಮ ಸರ್ಕಾರದವರು ಸುಮಾರು 63 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದರ ಬಗ್ಗೆ ಕೇಂದ್ರ ಸರ್ಕಾರದವರು 43 ಕೋಟಿ ಮಾತ್ರ ಕೊಟ್ಟದ್ದರಿಂದ ಬಾಕಿ ಉಳಿದ 20 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರದವರು ಹೊರುವ ಜವಾಬ್ದಾರಿ ಬಂತು. ಆ ಸಮಯದಲ್ಲಿ ಮಾಡಿರುವ ಕೆಲಸಗಳನ್ನು ಯಾರೂ ಮರೆಯಬಾರದು ಈ ಕ್ಷಾಮ ಪರಿಹಾರಕ್ಕೆ ಮಾಡಿದ ವೆಚ್ಚ ಖಂಡಿತವಾಗಿಯೂ ವ್ಯರ್ಥವಾದುದಲ್ಲ. ಕ್ಷಾಮ ಪರಿಹಾರ ಕಾರ್ಯಗಳಾದ ರಸ್ತೆಗಳ ಕೆಲಸ, ಸಾಯಿಲ್ ಕನ್‌ಸರ್ವೇಶನ್ ಮತ್ತು ಕುಡಿಯುವ ನೀರಿನ ಬಾವಿಗಳ ಕೆಲಸ ಮತ್ತು ನೀರಾವರಿ ಅಭಿವೃದ್ಧಿ ಕಾರ್ಯಗಳನ್ನು ಎಲ್ಲರೂ ಮೆಚ್ಚಿದ್ದಾರೆ. ಶ್ರೀ ಮಾನ್ ಹನುಮೇಗೌಡರು ವಾಸವಾಗಿರುವ ಹಾಸನ ಜಿಲ್ಲೆಯಲ್ಲಿ 30 ಲಕ್ಷ ರೂಪಾಯಿಯ ಕೆಲಸ ನಡೆಯುವಾಗ ಅವರೆಲ್ಲರೂ ಆದನ್ನು ಕಂಡು ಸಂತೋಷಪಟ್ಟದ್ದು ಉಂಟು. ನಾವು ಎಷ್ಟು ಕೆಲಸಗಳನ್ನು ಮಾಡಿಸಿದ್ದೇವೆ ಎಂದು ಬೆನ್ನು ಚಪ್ಪರಿಸಿದ್ದು ಉಂಟು. ಆಗ ಅವರೆಲ್ಲರೂ ಸುಮ್ಮನೆ ಇದ್ದು ಒಂದು ವರ್ಷ ಕಳೆದ ಮೇಲೆ ಎಲ್ಲೆಲ್ಲಿ ಅಪ್ರಮಾಣಿಕವಾಗಿ ಹಣ ಖರ್ಚಾಗಿದೆ ಎನ್ನುವಂತಹ ವಿಚಾರವನ್ನು ಹೇಳುತ್ತಾ ಇರುವುದು ಇದು ನಿಜವಾಗಿಯೂ ರಾಜಕೀಯ ಭಾಷಣವೇ ಹೊರತು ಜನರು ಮೆಚ್ಚತಕ್ಕ ಭಾಷಣವಲ್ಲ. ಇದಕ್ಕೆ ಕಾರಣ ಇಷ್ಟೆ—ಅಗಿರುವ ಖರ್ಚು ರಾಷ್ಟ್ರದ ಅಭಿವೃದ್ಧಿಗೆ ಆದ ಖರ್ಚು. ನನ್ನ ಜಿಲ್ಲೆಯಲ್ಲೂ ಹಣ ಖರ್ಚಾಗಿದೆ, ಹಾಸನ ಜಿಲ್ಲೆಯಲ್ಲಿಯೂ ಹಣ ಖರ್ಚಾಗಿದೆ. ಹತ್ತಾರು ವರ್ಷ ಅಗದೆ ಇರುವ ಕೆಲಸ ಆಗ ಅಗಿದೆ. ಅಗ ರಸ್ತೆ ನಿರ್ಮಾಣ, ಕುಡಿಯುವ ನೀರಿನ ಬಾವಿಗಳು, ಮತ್ತು ನೀರಾವರಿ ಕಾಮಗಾರಿಗಳು ನಡೆದಿವೆ. ಮತ್ತು ಹಳ್ಳಿ ಹಳ್ಳಿಗಳಲ್ಲಿ ರಸ್ತೆ ನಿರ್ಮಾಣಗಳು ನಡೆದವು. ಈ ಬಗ್ಗೆ ಖರ್ಚಾಗಿರುವ ಹಣವನ್ನು ಕಂಡು, ಅರಿತು ಈಗ ಅದಕ್ಕೆ ಒಂದು ಕಮಿಟಿ ಮಾಡಿ ವಿಚಾರಣೆ ಮಾಡಿ ಎಂದು ಹೇಳುವುದಕ್ಕೆ ನಾವು ನಗಬೇಕೋ ಅಥವಾ ಅಳಬೇಕೋ ಎಂದು ತಿಳಿಯುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಅದನ್ನು ವಿಚಾರ ಮಾಡಿ ದೇಶಕ್ಕೆ ತಿಳಿಯುವ ಹಾಗೆ ಮಾಡುವುದೇ ಅದರ ಉದ್ದೇಶ.

ಶ್ರೀ ಎಂ. ಮಲ್ಲಪ್ಪ.—ಸರ್ಕಾರದ ನೀತಿ ನಡವಳಿಕೆಗಳನ್ನು ನಾನು ಕಂಡಿದ್ದೇನೆ ಮತ್ತು ಜನರು ಸಹ ತಿಳಿದುಕೊಂಡಿದ್ದಾರೆ, ಈಗಲೂ ಸಹ ಜನತೆಗೋಸ್ಕರ ಉಪಯುಕ್ತವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಜನರು ಅದರ ಬಗ್ಗೆ ನಿರ್ಣಯ ಮಾಡುತ್ತಾರೆ. ಮಾನ್ಯ ದೇವೇಗೌಡರು ಉತ್ತರ ಪ್ರದೇಶದಿಂದ ಹಿಡಿದು ಪಾಂಡಿಚೇರಿಯವರೆಗೂ ಆಗಿರುವ ರಾಜಕೀಯ ಸಮೀಕ್ಷೆಯನ್ನು ನಡೆಸಿದರೇ ಬಹಳ ಸಂತೋಷ. ಆದರೆ ಅವರ ಅಬ್ಬರ ಆರ್ಭಟ ಏನಾಯಿತು ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ನಮ್ಮಲ್ಲಿ ಎಷ್ಟೋ ಲೋಪದೋಷಗಳು ಇರಬಹುದು. ನೂರಕ್ಕೆ 100 ಸಮರ್ಪಕವಾಗಿ ನಡೆದಿದೆ ಎನ್ನತಕ್ಕ ಧಾಟಿಯಲ್ಲಿ ನಾನು ಮಾತನಾಡುತ್ತಾ ಇಲ್ಲ. ವಿರೋಧ ಪಕ್ಷದ ಸದಸ್ಯರ ಧಾಟಿಯಲ್ಲಿ ಸರ್ಕಾರ ಮಾಡಿದ್ದು ಎಲ್ಲವೂ ತಪ್ಪು ಎಂದು ಹೇಳುತ್ತಿದ್ದಾರೆ. ಬಸವಲಿಂಗಪ್ಪನವರ ಜನತಾ ಮನೆ ನಿರ್ಮಾಣ ಯೋಜನೆಯನ್ನು ಅನೇಕ ಸಾರಿ ಹೊಗಳಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಸರ್ಕಾರದವರು ಒಳ್ಳೆಯ ಕೆಲಸಮಾಡಿದಾಗ ನಾವು ಬೆಂಬಲ ಕೊಟ್ಟಿದ್ದೇವೆ. ಒಳ್ಳೆಯ ಕೆಲಸಮಾಡಿದ್ದಾರೆಂದು ಹೇಳಿದ್ದೇವೆ. ಆದರೆ ಇವರು ಮಾಡಬಾರದ್ದು ಮಾಡಿದರೆ, ಅದನ್ನು ಖಂಡಿಸುವುದೇ ನಮ್ಮ ವಿರೋಧಪಕ್ಷದವರ ಕರ್ತವ್ಯ. ಅನೇಕ ಸಂದರ್ಭಗಳಲ್ಲಿ ಈ ದೇಶದ ಆಗುಹೋಗುಗಳಿಗೆ ಈ ದೇಶದ ದುಡ್ಡನ್ನು ದುರ್ವ್ಯಯ ಮಾಡುತ್ತಾರೆ.

ಶ್ರೀ ಎಂ. ಮಲ್ಲಪ್ಪ.—ನೀವು ನಿಜವಾಗಿಯೂ ವಿರೋಧಪಕ್ಷದವರೇನೋ ಹೌದು. ವಿರೋಧ ಮಾಡುವುದೇ ನಿಮ್ಮ ಧರ್ಮವಾಗಿದೆ. ಎಲ್ಲವನ್ನೂ ವಿರೋಧಮಾಡಬೇಡಿ. ನಿಜವಾಗಿಯೂ ಅದು ವಿರೋಧವಾಗಿಯೇ ಉಳಿಯುತ್ತದೆ. ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಸರ್ಕಾರ ಮಾಡಿರುವ ಕೆಲಸಗಳನ್ನು ನೋಡತಕ್ಕ ಒಳ್ಳೆಯ ಕಣ್ಣನ್ನು ದೇವರು ನಿಮಗೆ ಕೊಡಲಿ ಎಂಬುದಾಗಿ ನಾನು ದೇವರನ್ನು ಪ್ರಾರ್ಥನೆ ಮಾಡುತ್ತೇನೆ. ನಿಜವಾಗಿಯೂ ನಮ್ಮ ಅರ್ಥ ಸಚಿವರು ಏನೊಂದು ಖೋತಾ ಆಯವ್ಯಯವನ್ನು ಇಟ್ಟಿದ್ದಾರೋ ಅದನ್ನು ಸರಿದೂಗಿಸಬೇಕಾದರೆ ತೆರಿಗೆಗಳನ್ನು ಹಾಕಲೇಬೇಕು. ಇವತ್ತು ನಾವು ನಮ್ಮ ರಾಜ್ಯಮಟ್ಟಕ್ಕೆ ಹಾಗೂ ಬೇರೆ ರಾಜ್ಯಗಳ ಮಟ್ಟಕ್ಕೆ ಹೋಲಿಸಿ ನೋಡಿದರೆ ಎಲ್ಲಾ ರಾಜ್ಯಗಳ ಆಯವ್ಯಯಗಳೂ ಸಹ ಖೋತಾ ಆಗಿವೆ. ಇದನ್ನು ಸರಿದೂಗಿಸಲು ಸಾಮಾನ್ಯವಾಗಿ ಏನು ಕಾಂಗ್ರೆಸ್ಸೇತರ ಸರ್ಕಾರಗಳು ಇವೆಯೋ ಅಲ್ಲಿಯೂ ಕೂಡ ಹೆಚ್ಚಿಗೆ ತೆರಿಗೆಗಳನ್ನು ಹಾಕಿದ್ದಾರೆ. ತಮಿಳುನಾಡಿನಲ್ಲಿಯೂ ಹಾಕಿದ್ದಾರೆ ಕೇರಳದಲ್ಲಿಯೂ ಈ ರೀತಿಯಾಗಿ ಯೋಜನೆ ಇದೆ. ಹಾಗಿರಬೇಕಾದರೆ ಇವತ್ತು ಪ್ರತಿಯೊಂದು ದೇಶದಲ್ಲಿಯೂ ಅಭಾವ ಉಂಟಾಗಿದೆ. ಜೀವನಾವಶ್ಯಕ ವಸ್ತುಗಳ ಬೆಲೆ ಬಹಳವಾಗಿ ಹೆಚ್ಚಾಗಿದೆ. ಮಾನ್ಯ ಶ್ರೀ ಹನುಮೇಗೌಡರು ರೈತರ ವಿಷಯದಲ್ಲಿ ಬಹಳ ಕಳಕಳಿಯಿಂದ ಮಾತನಾಡಿದರು. ನಿಜ. ಇವತ್ತು ದಿನದಿನವೂ ಜೀವನಾವಶ್ಯಕವಸ್ತುಗಳ ಬೆಲೆ ಏರುತ್ತಿರುವುದರಿಂದ ರೈತರಿಗೆ ಅನುಕೂಲವಾಗುತ್ತಿದೆ ಎಂದು ಹೇಳುತ್ತೀರಾ ಅಥವಾ ಆಗುವುದಿಲ್ಲವೆಂದು ಹೇಳುತ್ತೀರಾ ? ಆದರೆ ಈಗಿನ ಪರಿಸ್ಥಿತಿಯನ್ನು ಅನುಸರಿಸಿ ರೈತರಿಗೆ ಒಂದು ಕೆ. ಜಿ. ರಾಗಿ ಎರಡು ರೂಪಾಯಿಗೆ ದೊರಕಿದರೆ ಲಾಭವೋ, ನಷ್ಟವೋ ನೀವೇ ಹೇಳಬೇಕು. ಆದ್ದರಿಂದ ಅದೇ ರೀತಿಯಲ್ಲಿ ಎಲ್ಲ ವಸ್ತುಗಳ ಬೆಲೆಯೂ ಜಾಸ್ತಿಯಾಗುತ್ತಿದೆ. ಕೊಳ್ಳುವವನಿಗೂ, ಕೊಡುವವನಿಗೂ ಹೆಚ್ಚಿಗೆ ಅಂತರ ಇರಬೇಕೆಂದರೆ ಹೇಗೆ ? ಪ್ರತಿಯೊಬ್ಬ ಗಂಡಸಾಗಲೀ, ಹೆಂಗಸಾಗಲೀ 8 ಗಂಟೆಗಳ ಹೊತ್ತು ಕೆಲಸ ಮಾಡಬೇಕೆಂದರೆ ಬಹಳ ಕಷ್ಟ. . ಅವನು ತುಂಬಾ ಕಷ್ಟಪಡಬೇಕಾಗುತ್ತದೆ. ಆದರೆ ಅವನು ಕೇಳುವುದೇನೆಂದರೆ, ಅದರಲ್ಲಿ ಅವನಿಗೆ ಅಷ್ಟಾಗಿ ಪ್ರತಿಫಲ ಸಿಗುವುದಿಲ್ಲವಾದರೂ, ಎರಡುಹೊತ್ತು ಊಟ, ಮೈತುಂಬ ಬಟ್ಟೆ ವಾಸಕ್ಕೆ ಒಂದು ಮನೆ ಮರ್ಯಾದೆಯಾಗಿ ಬಾಳುವುದಕ್ಕೆ ಒಂದು ಅವಕಾಶವಿರಬೇಕೆಂದು ಕೇಳುತ್ತಾನೆ. ಅವನಿಗೇನೂ ವಿಧಾನಸೌಧದಂತಹ ಬಂಗಲೆ ಮನೆ, ಅಥವಾ ಬೆಂಗಳೂರಿನಲ್ಲಿರತಕ್ಕ ಲಕ್ಷಾಂತರ ರೂಪಾಯಿಗಳ ಬಂಗಲೆ ಮನೆ ಬೇಕಿಲ್ಲ. ಬಡಜನರಿಗೆ ಇಷ್ಟು ಕಷ್ಟ ಬರುವುದಕ್ಕೆ ಸರ್ಕಾರವೇ ಕಾರಣವೆಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ಸರ್ಕಾರ ನಿಜವಾಗಿ ಎಂದೆಂದಿಗೂ ಕಾರಣವಲ್ಲ. ಯಾವುದೋ ಒಂದು ಕಾರಣಕ್ಕೋಸ್ಕರ ಈಗಿನ ಪರಿಸ್ಥಿತಿಯ ಒತ್ತಡದಿಂದ ಎಲ್ಲಾ ಬೆಲೆಗಳು ಏರುತ್ತಿವೆ. ಇವತ್ತು ಡೀಸಲ್ ಹೆಚ್ಚಿಗೆ ಬೇಕು. ಏಕೆಂದರೆ ಹೆಚ್ಚಿಗೆ ಇರತಕ್ಕ ಕಾರ್‌ಗಳನ್ನು ಎಲ್ಲಿಗೆ ಕಳುಹಿಸುವುದು ? ಅದರ ಬೆಲೆಯೂ ಸಹ ಏರಿತು. ಅಂದರೆ ಇದಕ್ಕೆ ಸರ್ಕಾರ ಏನು ಮಾಡಬೇಕು ? ಅನೇಕ ಮುಷ್ಕರಗಳ ದೆಸೆಯಿಂದ ಅನೇಕ ಕಾರ್ಖಾನೆಗಳಲ್ಲಿ ಎಷ್ಟು ಉತ್ಪಾದನೆ ಆಗಬೇಕೋ ಅಷ್ಟು ಆಗದೆ ಹಿಂದಿನ ಬೆಲೆಗಿಂತ ಈಗ ಹೆಚ್ಚು ಬೆಲೆಯನ್ನು ನಾವು ತೆತ್ತು ಬಹಳ ಕಷ್ಟಪಡಬೇಕಾಗಿದೆ. ಆ ರೀತಿ ಇದ್ದರೆ ಇಡೀ ರಾಷ್ಟ್ರ

ದಲ್ಲಿ ವ್ಯಾಪಕವಾಗಿರುವ ಅನೇಕ ಸಮಸ್ಯೆಗಳನ್ನು ಸರ್ಕಾರದ ಮುಂದೆ ತಂದು ತೀರ್ಮಾನ ಮಾಡುವಾಗ ಸುಮ್ಮನೆ ಅನಾವಶ್ಯಕವಾದಂಥ, ಟೀಕೆಗಳನ್ನು ಮಾಡುತ್ತಾ ಹೋದರೆ ಯಾವರೀತಿ ಯಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸಬಹುದೆಂಬುದನ್ನು ನಾವೆಲ್ಲರೂ ಯೋಚಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ಇದಕ್ಕಾಗಿ ಒಂದು ಕಮಿಟಿ ಆಗಬೇಕು, ಇದರ ಬಗ್ಗೆ ವಿಚಾರಣೆ ಆಗಬೇಕು ಎಂಬುದಾಗಿ ಮಾನ್ಯ ಶ್ರೀ ದೇವೇಗೌಡರು ಹೇಳುತ್ತಾರೆ. ಅವರಿಗೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಅವರ ಕ್ಷೇತ್ರವಾಗಿರತಕ್ಕ ಹೊಳೇನರಸೀಪುರದಲ್ಲಿ ಹಾಸನ ಜಿಲ್ಲೆಗೆ ಸಂಬಂಧಪಟ್ಟಹಾಗೆ ಆಗಿರತಕ್ಕ ಕೆಲಸಗಳನ್ನು ನಾನು ನೋಡಿದ್ದೇನೆ. ಆ ಕೆಲಸಗಳು ತುಂಬಾ ಅದಕ್ಷತೆಯಿಂದ ಹಾಗೂ ಅಪ್ರಾಮಾಣಿಕತೆಯಿಂದ ಆಗುತ್ತಿದ್ದರೂ ಅವರು ಯಾರಲ್ಲಿ ಪ್ರಸ್ತಾಪಮಾಡಿದ್ದಾರೆಂಬುದನ್ನು ಹೇಳಲಿ. ನೀವೇ ಎಷ್ಟೋ ಸಾರಿ ಸುಮಾರು ಒಂದು ವರ್ಷ ವಾದಮೇಲೆ ಯಾವುದೋ ಒಂದು ಕಾರಣವನ್ನು ಇಟ್ಟುಕೊಂಡು ಆ ರೀತಿ ಹೇಳಿದಿರಿ. ಇದರಿಂದ ಯಾವ ರೀತಿಯಲ್ಲಿಯೂ ಪರಿಣಾಮಕಾರಿಯಾಗಿ ಅನುಕೂಲಗಳಾಗುವುದಿಲ್ಲವೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಶ್ರೀ ದೇವೇಗೌಡರು ಹೇಳುವುದಕ್ಕೆ ಮುಂಚೆ ಮಾನ್ಯ ಶ್ರೀ ಚನ್ನಬಸಪ್ಪನವರೇ ಅದನ್ನು ಬಹಿರಂಗಪಡಿಸಿದರು.

ಶ್ರೀ ಎಂ. ಮಲ್ಲಪ್ಪ.—ಈ ಖೋತಾವನ್ನು ಭರ್ತಿಮಾಡಲು 17 ಕೋಟಿ 50 ಲಕ್ಷ ರೂಪಾಯಿ ಗಳಷ್ಟು ತುಂಬುವುದಕ್ಕೆ ಅರ್ಥಮಂತ್ರಿಗಳು ಹೊಸ ತೆರಿಗೆಗಳನ್ನು ಹಾಕಿದ್ದಾರೆ. ಅವರು ಹಾಕಿರುವ ಎಲ್ಲಾ ತೆರಿಗೆಗಳನ್ನೂ ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ. ಬಹಳ ಹೆಚ್ಚಾಗಿ ಇತಿಮಿತಿ ಇಲ್ಲದೆ ತೆರಿಗೆಗಳನ್ನು ಹಾಕಿಲ್ಲ. ಇರತಕ್ಕ ಕೊರತೆಯನ್ನು ತುಂಬುವ ಮಟ್ಟಿಗೆ ಆ ರೀತಿಯಾಗಿ ತೆರಿಗೆಗಳನ್ನು ಹಾಕಿದ್ದಾರೆ. ಇವತ್ತು ನಗರಗಳಿಗೆ ಏನು ಮಿತಿ ಇದೆಯೋ ಅದನ್ನು ಪುನರಾಲೋಚಿಸಬೇಕಾದುದು ಆವಶ್ಯಕ. ಏಕೆಂದರೆ ಅದರಿಂದ ಬರತಕ್ಕ ಉತ್ಪನ್ನ ಅಷ್ಟು ಭಾರಿ ಇಲ್ಲ. ವಸೂಲು ಮಾಡುವಂಥ ರೀತಿನೀತಿಗಳಲ್ಲಿ ಕೆಲವು ಅನೈತಿಕ ಕ್ರಮಗಳು ಆಗಬಹುದು. ಇನ್ನು ಪಟ್ಟಣವಾಸಿಗಳು ಉಪಯೋಗಿಸುವ ನೈಲಾನ್ ಮೇಲೆ ತೆರಿಗೆ ಹಾಕಿದ್ದಾರೆ. ಅದನ್ನು ಪುನರ್ವಿಮರ್ಶಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅದರಿಂದ ನಿಜವಾಗಿ ಮಾನ್ಯ ಶ್ರೀ ಘೋರ್ಪಡೆಯವರು ಕೆಲವಾರು ವಸ್ತುಗಳ ಮೇಲೆ ಏರಿಕೆಯನ್ನು ಸೂಚಿಸಿರುತ್ತಾರೆ. ಮಾನ್ಯ ಶ್ರೀ ಕೋಣಂದೂರ್ ಲಿಂಗಪ್ಪನವರ ಭಾಷಣದಲ್ಲಿ ಕೆಲವಾರು ವಸ್ತುಗಳ ಬಗ್ಗೆ ಮಾತ್ರ ಹೇಳಿದರು. ಆದರೂ ಖೋತಾವನ್ನು ತುಂಬಲಿಕ್ಕಾಗಲಿಲ್ಲ. ಅವರಿನ್ನೂ ಮಿತಿಯಲ್ಲಿಯೇ ಉಳಿದಿದ್ದಾರೆ. ಸ್ವಲ್ಪಮಟ್ಟಿಗೆ ಪ್ರಶಂಸೆಯನ್ನೂ ಮಾಡಿದ್ದಾರೆ. ಮಾನ್ಯ ಶ್ರೀ ಹನುಮೇಗೌಡರು ಹೇಳಿದಂತೆ ಅವರು ಹೆಚ್ಚಿಗೆ ಟೀಕೆಮಾಡಲೂ ಹೋಗಲಿಲ್ಲ. ಇದೆಲ್ಲದಕ್ಕಿಂತ ಹೆಚ್ಚಿಗೆ ಕಳೆದವರ್ಷ ನಮ್ಮ ನೌಕರವರ್ಗದವರಿಗೆ ತುಟ್ಟಿಭತ್ಯ ಕೊಟ್ಟಿದ್ದಾರೆ. ಅದರ ಪರಿಣಾಮವಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಹೊರೆ ನಮ್ಮ ಆರ್ಥಿಕ ಪರಿಸ್ಥಿತಿಯಮೇಲೆ ಬಿತ್ತು. ಈ ವರ್ಷ ನಿವೃತ್ತ ನೌಕರರಿಗೆ ಪೆನ್‌ಷನ್ ಕೊಟ್ಟಿರುವುದನ್ನು ನೀವೂ ಕೂಡ ಸ್ವಾಗತಿಸುತ್ತೀರಿ. ಅದಲ್ಲದೆ ತುಟ್ಟಿಭತ್ಯವನ್ನು ಪೆನ್‌ಷನ್‌ದಾರರಿಗೆ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಅಂತಹ ಒಂದು ಸೌಲಭ್ಯವನ್ನು ಅವರಿಗೆ ಒದಗಿಸಿರುವುದು ಸ್ವಾಗತಾರ್ಹ. ಇನ್ನು ಅವರು ರಾಷ್ಟ್ರದ ಮಟ್ಟದಲ್ಲಿ ಒಂದು ವೇತನ ಮಂಡಲಿಯನ್ನು ಸ್ಥಾಪನೆಮಾಡಬೇಕು, ಇವತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರರ ವೇತನದಲ್ಲಿ ಇರತಕ್ಕ ಅಂತರವನ್ನು ಕಡಿಮೆಮಾಡಬೇಕೆಂದು ಎಲ್ಲರೂ ಒಪ್ಪತಕ್ಕ ರೀತಿಯಲ್ಲಿ ವೇತನ ಮಂಡಲಿಯೊಂದನ್ನು ರೂಪಿಸಬೇಕೆಂದು ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದು ನಿಜವಾಗಿ ಸ್ವಾಗತಾರ್ಹ ಎಂಬುದನ್ನು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ. ಈಗ ಈ ತೆರಿಗೆಗಳನ್ನು ತೀವ್ರವಾಗಿ ಸಂಗ್ರಹ ಮಾಡಿಯೇ ತೀರಬೇಕು. ಸರ್ಕಾರದ ಖರ್ಚಿನಲ್ಲಿ ಹೆಚ್ಚು ಹಿಡಿತ ಬೇಕು. ಅದೇ ರೀತಿಯಲ್ಲಿ ಸರ್ಕಾರ ಈಗ ಕೆಲಸಮಾಡುತ್ತಿದೆ ಎನ್ನುವುದನ್ನು ತಾವು ಮನಗಂಡರೆ ಬಹಳ ಒಳ್ಳೆಯದು ಎಂದು ನನಗನ್ನಿಸುತ್ತದೆ. ಇನ್ನು ಈ ರಾಜ್ಯದ 5ನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಹೇಳುವುದಾದರೆ ನಿಜವಾಗಿಯೂ ಈ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯುಚ್ಛಕ್ತಿ ಹಾಗೂ ನೀರಾವರಿ ಅಭಿವೃದ್ಧಿಕಾರ್ಯಗಳಿಗೆ ಹೆಚ್ಚಿನ ಗಮನವನ್ನು ಅವರು ಕೊಟ್ಟಿದ್ದಾರೆ. ಇವತ್ತು ಸಣ್ಣ ನೀರಾವರಿಯಾಗಲೀ, ದೊಡ್ಡ ನೀರಾವರಿಯಾಗಲೀ, ನೀರಾವರಿ ಬಾವಿಗಳಿಗಾಗಲಿ ಹೆಚ್ಚಿನ ಆದ್ಯ ಕೊಟ್ಟಿರುವುದು ಮತ್ತು ದೊಡ್ಡ ನೀರಾವರಿಗಳಿಗೆ 300 ಕೋಟಿ ರೂಪಾಯಿಗಳನ್ನೂ ಸಣ್ಣ ನೀರಾವರಿಗಳಿಗೆ 50 ಕೋಟಿ ರೂಪಾಯಿಗಳನ್ನೂ ವಿದ್ಯುಚ್ಛಕ್ತಿ ಅಭಿವೃದ್ಧಿಗಾಗಿ 200 ಕೋಟಿ ರೂಪಾಯಿಗಳನ್ನೂ ಮತ್ತು ನೀರಾವರಿ ಬಾವಿಗಳಿಗೆ 100 ಕೋಟಿ ರೂಪಾಯಿಗಳನ್ನೂ ಈ ಒಂದು

(ಶ್ರೀ ಎಂ. ಮಲ್ಲಪ್ಪ)

ಆಯುವ್ಯಯದಲ್ಲಿ ತೆಗೆದು ಇಟ್ಟಿರುವುದು ನಿಜವಾಗಿಯೂ ರೈತರ ಅಭಿವೃದ್ಧಿಗೆ ಪೂರ್ವಕವಾಗಿ ಸಾಧಕವಾಗಿದೆಯೆಂದು ನಾನು ಹೇಳಬಯಸುತ್ತೇನೆ. ಇವತ್ತು ವಿಶೇಷವಾಗಿ ಬ್ಯಾಂಕುಗಳ ಮುಖಾಂತರ ಕೋಟ್ಯಾಂತರ ರೂಪಾಯಿಗಳನ್ನು ಒದಗಿಸಿ ರೈತರಿಗೆ ಅವಶ್ಯಕವಾದಂಥ ನೀರಾವರಿ ಬಾವಿಗಳನ್ನು ತೆಗೆದು ತನ್ಮೂಲಕ ಅಭಿವೃದ್ಧಿ ಆಗಬೇಕೆಂಬು ಸರ್ಕಾರದ ಮೂಲೋದ್ದೇಶವಾಗಿದೆ. ಅದಕ್ಕಾಗಿ ಸರ್ಕಾರದವರು ಬಡ್ಜೆಟ್ಟಿನಲ್ಲಿ ಹೆಚ್ಚು ಹಣವನ್ನು ಒದಗಿಸಿದ್ದಾರೆ. ಇನ್ನು ಯಾವುದೋ ಪಂಪುಸೆಟ್ಟುಗಳಿಗೆ ಸಾಲ ಒದಗುತ್ತಾ ಇಲ್ಲವೆಂದು ಮಾನ್ಯ ಶ್ರೀ ಹನುಮೇಗೌಡರು ಹೇಳಿದರು. ಇವತ್ತು ಎಲ್ಲಾ ಸೊಸೈಟಿಗಳಿಗೂ ಕೂಡ ಪಂಪುಸೆಟ್ಟುಗಳ ಬಗ್ಗೆ ಸಾಲವನ್ನು ಹೆಚ್ಚು ಹೆಚ್ಚಾಗಿ ಸರ್ಕಾರದವರು ಕೊಡುತ್ತಿದ್ದಾರೆ. ಅದರ ಬಗ್ಗೆ ಕೆಲವಾರು ನಿಯಮಗಳಿವೆ. ಆ ನಿಯಮಗಳನ್ನು ಅನುಸರಿಸಿದರೆ, ನೀರಾವರಿ ಬಾವಿಗಳಿಗೆ ಹೆಚ್ಚಿನ ಸಾಲವನ್ನು ಪಡೆಯಬಹುದು. ಅದರಿಂದ ಹೆಚ್ಚಿನ ಉಪಯೋಗವನ್ನೂ ಸಹ ಪಡೆಯಬಹುದು. ತಾಂತ್ರಿಕ ತೊಂದರೆಯನ್ನು ಇದರಲ್ಲಿ ನಿವಾರಣೆ ಮಾಡುವುದಕ್ಕೆ ಏನು ಕಷ್ಟವಿದೆಯೋ ನನಗೆ ಗೊತ್ತಾಗಲಿಲ್ಲ.

ಪ್ರತಿ ವರ್ಷದ ಆಯುವ್ಯಯವನ್ನೂ ನಾವು ನೋಡುತ್ತಿದ್ದೇವೆ. ಸರ್ಕಾರ ನೀರಾವರಿ ಬಾವಿಗಳಿಗೆ ಮತ್ತು ಪಂಪ್‌ಸೆಟ್‌ಗಳಿಗೆ ಯಥೇಚ್ಛವಾಗಿ ಹಣವನ್ನು ಒದಗಿಸುತ್ತಿದೆ. ಆ ಹಣ ಖರ್ಚಾಗದೆ ಲ್ಯಾಪ್ಸ್ ಆಗತಕ್ಕ ಸಂದರ್ಭಗಳುಂಟು. ಅದಕ್ಕೆ ಕಾರಣಗಳಿರಬಹುದು. ರೈತರಿಗೆ ತಿಳುವಳಿಕೆ ಇಲ್ಲದೆ ಹಣ ಉಪಯೋಗ ಆಗದೆ ಇರಬಹುದು ; ಹಣವನ್ನು ಸಾಲವಾಗಿ ಪಡೆದರೆ ಅದನ್ನು ತೀರಿಸತಕ್ಕ ರೀತಿ ಹೇಗೆ ಎನ್ನುವ ಒಂದು ಅಪನಂಬಿಕೆ ಇರಬಹುದು. ಇದರಿಂದ ಕೆಲವು ತೊಂದರೆಗಳಾಗಿರಬಹುದು. ಆದರೆ ಸರ್ಕಾರ ಹಣವನ್ನು ಒದಗಿಸಿಲ್ಲ ಎನ್ನುವುದನ್ನು ನಾನು ಮಾತ್ರ ನಂಬುವುದಿಲ್ಲ. ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಕನಿಷ್ಠ ಅವಶ್ಯಕತೆಗಳ ಕಾರ್ಯಕ್ರಮಕ್ಕಾಗಿ 103 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಗರೀಬಿ ಹಟಾವೋ ಎಂದು ಏನು ಹೇಳುತ್ತೇವೆ ಆ ಬಗ್ಗೆ ಬಹಳ ಕೆಲಸ ಮಾಡಿಲ್ಲ ಎಂದು ಹೇಳಿದರು. ಈ 103 ಕೋಟಿ ರೂಪಾಯಿಗಳು ಶ್ರೀಮಂತರಿಗೆ ದೊರಕುವುದಿಲ್ಲ. ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ಈ ಹಣವನ್ನು ತೆಗೆದಿಟ್ಟಿದ್ದು ಅದಕ್ಕೆ ಖರ್ಚು ಕೂಡ ಆಗತಕ್ಕದ್ದಿದೆ. ರಸ್ತೆಗಳು, ಸೇತುವೆಗಳ ವಿಚಾರದಲ್ಲಿ ಮಾನ್ಯ ಲೋಕೋಪಯೋಗಿ ಮಂತ್ರಿಯವರು ಮೇಲ್ಮನೆಯಲ್ಲಿ ಹೇಳಿರುವುದನ್ನು ನಾವು ಸ್ಮರಿಸಿಕೊಳ್ಳಬೇಕು. ಹೋದ ವರ್ಷ ಆಗದೆ ಉಳಿದಿರತಕ್ಕ ಎಲ್ಲ ರಸ್ತೆ ಕೆಲಸಗಳನ್ನೂ ಈ ಸಲ ಮಾಡಿ ಮುಗಿಸುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಅವರ ಮಾತಿನಲ್ಲಿ ನಂಬಿಕೆ ಇಡಬೇಕು ಮತ್ತು ಭವಿಷ್ಯದಲ್ಲಿ ವಿಶ್ವಾಸವನ್ನಿಡಬೇಕು. ಖಂಡಿತವಾಗಿ ಆ ಕೆಲಸಗಳಾಗುತ್ತವೆ ಎನ್ನುವ ನಂಬಿಕೆ ನನಗೆ ಇದೆ.

ಶ್ರೀಮಾನ್ ಹನುಮೇಗೌಡರು ವ್ಯವಸಾಯಾಭಿವೃದ್ಧಿ ಆಗಬೇಕೆಂದು ಹೇಳಿದರು. ನಿಜ. ನಾನು ವ್ಯವಸಾಯಗಾರನ ಮಗನಾಗಿ ವ್ಯವಸಾಯಗಾರರಿಗೆ ಕಷ್ಟವಿದೆ ಎನ್ನುವುದನ್ನು ತಿಳಿದುಕೊಂಡಿದ್ದೇನೆ. ಅವನು ಹುಟ್ಟಿರುವುದು ಕಷ್ಟಕ್ಕಾಗಿ. ಯಾವುದೋ ಲೋಲುಪ್ತತೆಯ ಜೀವನವನ್ನು ನೋಡಿ ಆ ಜೀವನವನ್ನು ಅವನು ಅನುಭವಿಸಲಿಲ್ಲ ಎನ್ನುವ ಕಕ್ಕುಲತೆಯನ್ನು ಅವರ ಬಗ್ಗೆ ಮಾಡುವುದಕ್ಕೆ ಹೋಗಬೇಡಿ. ವ್ಯವಸಾಯಗಾರನ ಜೀವನ ಕಷ್ಟಮಯವಾದ ಜೀವನ. ಹತ್ತು ವರ್ಷಗಳ ಹಿಂದೆ ಇದ್ದ ಪರಿಸ್ಥಿತಿ ಈ ಹೊತ್ತು ಇರತಕ್ಕ ಪರಿಸ್ಥಿತಿಯನ್ನು ಮಾನ್ಯ ಸದಸ್ಯರು ಹೋಲಿಕೆ ಮಾಡಿ ನೋಡಬೇಕು. ಅವರು ಹಿಂದೆ ಇದ್ದುದಕ್ಕಿಂತ ಈಗ ಮುಂದುವರಿದಿದ್ದಾರೆ. ಅವರೆಲ್ಲರೂ ಮುಂದುವರಿಯುವುದಕ್ಕೆ ನಾವೂ ನೀವೂ ಎಲ್ಲರೂ ಸೇರಿ ಪ್ರಯತ್ನ ಮಾಡೋಣ. ಈ ಹೊತ್ತಿನ ದಿವಸ ಏನು ಅವಶ್ಯಕತೆಗಳನ್ನು ಒದಗಿಸುವುದಕ್ಕೆ ಏನು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದೇವೆ ಅದು ಸಫಲವಾಗಿದೆಯೋ ಇಲ್ಲವೇ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಸಣ್ಣ ನೀರಾವರಿ ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ಒದಗಿಸಿದ್ದೇವೆ. ನಮ್ಮ ರಾಜ್ಯದಲ್ಲಿ ಸಣ್ಣ ನೀರಾವರಿ ಕಾರ್ಯಕ್ರಮಗಳ ಅಂದಾಜುಗಳು ತಯಾರಾಗಿದ್ದು 400 ಕೆಲಸಗಳಿಗೆ ಮಂಜೂರಾತಿ ಈಗಾಗಲೇ ದೊರಕಿದೆ. ಕ್ಷಾಮ ಪರಿಹಾರ ಕಾರ್ಯದಲ್ಲಿ ಯಥೇಷ್ಟವಾದ ಕೆಲಸಗಳನ್ನು ಮಾಡಿದಾರೆ. ಆಗಬೇಕಾದ ಕೆಲಸಗಳು ಬಹಳ ಇವೆ, ನಿಜ. ಮದ್ರಾಸ್ ಅಥವಾ ಆಂಧ್ರ ರಾಜ್ಯಗಳಿಗೆ ಹೋಲಿಸಿಕೊಂಡರೆ ಅವರಷ್ಟು ನಾವು ಮುಂದುವರಿದಿಲ್ಲ. ತಮಿಳುನಾಡು ಮುಂದುವರಿಯುವುದಕ್ಕೆ ಕಾರಣವಿದೆ. ಅಲ್ಲಿ ಹೆಚ್ಚು ರೈತರು ಮುಂದೆ ಬಂದು ನೀರಾವರಿ ಬಾವಿಗಳ ಉಪಯೋಗವನ್ನು ಪಡೆದಿದ್ದಾರೆ. ಅದೇ ರೀತಿ ನಾವು ಪಡೆದಿಲ್ಲ. ಅದಕ್ಕೆ ಸರ್ಕಾರವೂ

ಕಾರಣವಿರಬಹುದು. ಆದರೆ ಸಮಾಜದ ಮುಂದಾಳುಗಳಾದ ನಾವು ನೀವು ಎಲ್ಲರೂ ಕಾರಣ ಎನ್ನುವುದನ್ನು ಮರೆಯಬಾರದು. ಈ ಹೊತ್ತು ಎಲ್ಲೆಲ್ಲಿ ಭೂಮಿಯೊಳಗೆ ನೀರಿದೆ ಅದನ್ನು ಉಪಯೋಗ ಮಾಡಿಕೊಂಡು ವ್ಯವಸಾಯದ ಉತ್ಪನ್ನವನ್ನು ಹೆಚ್ಚು ಮಾಡತಕ್ಕ ಅವಕಾಶವಿದೆ. ಅದನ್ನು ಉಪಯೋಗ ಮಾಡಿಕೊಳ್ಳುವ ಕಾರ್ಯದಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಆ ಬಗ್ಗೆ ಕೆಲಸ ಮಾಡಿದರೆ ನಮ್ಮ ರೈತರ ಹಿತವನ್ನು ನಾವು ಸಾಧನೆ ಮಾಡಿದ ಹಾಗಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—35 ಪರ್ಸೆಂಟ್ ಅಂಡರ್‌ಗ್ರೌಂಡ್ ವಾಟರ್ ಸೋರ್ಸ್‌ಸ್ ಇದೆ ಎನ್ನುವುದು ಗೊತ್ತಿದೆಯೋ ?

ಶ್ರೀ ಎಂ. ಮಲ್ಲಪ್ಪ.—ಅದನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. 10 ಸಾವಿರ ರೂಪಾಯಿ ಕೊಡುತ್ತೇವೆ, ಬಾವಿ ತೆಗೆಸಿಕೊಳ್ಳಿ ಎಂದರೆ ಯಾರೂ ಮುಂದೆ ಬರುತ್ತಿಲ್ಲ. ಬಾವಿ ತೆಗೆದು ನೀರು ಬಾರದೆ ಇದ್ದರೆ ಹಣವನ್ನು ಮುಫತ್ತಾಗಿ ಕೊಡುತ್ತೇವೆ ಎಂದು ಹೇಳಿದರೂ ರೈತರು ಮುಂದೆ ಬಾರದೆ ಇದ್ದಾರೆ. ಅದಕ್ಕೆ ಯಾರು ಜವಾಬ್ದಾರರು ಎಂದು ನಾನು ಕೇಳುತ್ತೇನೆ. ಅದಕ್ಕೆ ಸರಕಾರದವರು ಜವಾಬ್ದಾರರಲ್ಲ. ನಮ್ಮ ಜವಾಬ್ದಾರಿಯೂ ಇದೆ. ಭೂಮಿಯೊಳಗೆ 30–50 ಅಡಿ ಕೆಳಗೆ ಒಳ್ಳೆಯ ನೀರಿದೆ. ನಾನು ಹೋದ ಕಡೆಗಳಲ್ಲೆಲ್ಲ ದಯಮಾಡಿಟ್ಟು ಸಾಲವನ್ನು ತೆಗೆದುಕೊಳ್ಳಿ, ನಿಮ್ಮ ಮನೆ ಹಾಳಾಗುವುದಿಲ್ಲ, ಉದ್ಧಾರವಾಗುತ್ತದೆ, ನೀರು ಬಂದರೆ ಪ್ರಯೋಜನವಾಗುತ್ತದೆ, ನೀರು ಬಾರದೆ ಇದ್ದರೆ ಆ ಹಣವನ್ನು ಮುಫತ್ತಾಗಿ ಕೊಡುತ್ತೇವೆಂದು ಹೇಳಿದರೂ ಕೂಡ ಜನ ಮುಂದೆ ಬರುವುದಿಲ್ಲ. ಈ ಬಗ್ಗೆ ಜನರಿಗೆ ಸರಿಯಾದ ತಿಳುವಳಿಕೆ ಕೊಡತಕ್ಕ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ ಎಂದು ಈ ಸಮಯದಲ್ಲಿ ನಾನು ಹೇಳಬಯಸುತ್ತೇನೆ.

ಅಭಾವಪೀಡಿತ ಪ್ರದೇಶಗಳಲ್ಲಿ ಕಳೆದ ಸಾರಿ ಖರ್ಚು ಮಾಡಿದ ಹಣದ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಅಂಕಿಅಂಶಗಳನ್ನು ನೋಡಿದರೆ, ಹಾಸನ ಜಿಲ್ಲೆಯಲ್ಲಿ ಯಥೇಷ್ಟವಾಗಿ ಹಣ ಖರ್ಚಾಗಿದೆ ; ಪರಿಣಾಮಕಾರಿಯಾಗಿ ಕೂಡ ಆಗಿದೆ, ಬಹಳ ಒಳ್ಳೆಯ ಕೆಲಸವಾಗಿದೆ ಅದರ ಬಗ್ಗೆ ಆ ಜಿಲ್ಲೆಯ ಶಾಸಕರು ನಿಜವಾಗಿಯೂ ಹೆಮ್ಮೆ ಪಡಬೇಕು. ಸರ್ಕಾರ ಇಷ್ಟರಮಟ್ಟಿಗೆ ಹಣವನ್ನು ಖರ್ಚು ಮಾಡಿ ಅತ್ಯಾವಶ್ಯಕವಾದ ಕೆಲಸಗಳನ್ನು ಮಾಡಿದೆ ಎಂದು ಪ್ರಶಂಸೆ ಮಾಡಬೇಕು. ಅದಿಲ್ಲದೆ ಸುಮ್ಮನೆ ಟೀಕೆ ಟಿಪ್ಪಣಿಯನ್ನು ಮಾಡಿದರೆ ಏನು ಪ್ರಯೋಜನ ?

ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭವಾಗಲಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನು ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ ಎನ್ನುವುದನ್ನು ಯಾರೂ ಮರೆಯಬಾರದು. ನಮ್ಮ ಸರ್ಕಾರ ಸಾಧಿಸಿದ ಎರಡು ಕೆಲಸಗಳಲ್ಲಿ ಒಂದು ವಿಜಯನಗರದ ಉಕ್ಕಿನ ಕಾರ್ಖಾನೆ ಮತ್ತು ಎರಡನೆಯದು ಕುದುರೆಮುಖ ಕಬ್ಬಿಣ ಅದಿರು ಯೋಜನೆ.

MADAM SPEAKER.—The House stands adjourned to meet to-morrow at One P. M.

The House adjourned at Six of the Clock to meet again at One of the Clock on Thursday the 14th March 1974.